ಮಹಾನ್ ಅಕ್ಟೋಬರ್ ಕ್ರಾಂತಿ

ಎಪ್ಪತ್ತೈದನೇ ವಾರ್ಷಿಕೋತ್ಸವ ವಿಶೇಷಾಂಕ



ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ


ಮಹಾನ್ ಅಕ್ಟೋಬರ್ ಕ್ರಾಂತಿ

75 ನೇ ವಾರ್ಷಿಕೋತ್ಸವ ವಿಶೇಷಾಂಕ

ಸಂಪುಟ 14 ಸಂಚಿಕೆ 45 ರೂ. 4.00

8 ನವಂಬರ್ 1992

ಒಳಪುಟಗಳಲ್ಲಿ....



ಸಂಪಾದಕೀಯ

ಹಳೆಯ ಯುಗದ ಬಸಿರನ್ನೊಡೆದು ಹೊಸ ಯುಗವೊಂದು ಜನಿಸಿದ ಆ ಕ್ಷಣ. ಇಪ್ಪತ್ತನೇ ಶತಮಾನವನ್ನೆಲ್ಲಾ ಆವಸಿರಿ, ಕೇವಲ ಕ್ರಾಂತಿ ನಡೆದ ಒಂದು ರಾಷ್ಟ್ರದಲ್ಲಲ್ಲ, ಇಡೀ ವಿಶ್ವದ ಮೇಲೆ, ವಿಶ್ವದ ಯಾವುದೇ ಮೂಲೆ, ಯಾವುದೇ ದ್ವೀಪದಲ್ಲಡಗಿರುವ ಮಾನವರ ಮೇಲೆ -ಕೇವಲ ಮಾನವರ ಮೇಲಷ್ಟೇ ಅಲ್ಲ, ಇಡೀ ಪ್ರಕೃತಿಯ ಮೇಲೆ ಪ್ರಭಾವ ಬೀರಿದ ಘಟನೆ ಅಕ್ಟೋಬರ್ ಕ್ರಾಂತಿ.

ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದವನ್ನು ಕಳಚಿ ಹಾಕಿರುವುದರಿಂದ ಈ ಮಹಾನ್ ಘಟನೆ ಈಗ ಕೇವಲ ಇತಿಹಾಸದ ಮಾತಾಗಿಬಿಟ್ಟಿದೆ ಎಂದು ಯಥಾಸ್ಥಿತಿವಾದಿಗಳು ನಿಜವಾಗಿ ಭಾವಿಸಿದ್ದಾರೆಯೇ? ಬುಶ್‌ಗಳು, ಮೇಜರ್‌ಗಳು, ಯೆಲ್ಟ್‌ಸಿನ್‌ಗಳು, ಹಾವೆಲ್‌ಗಳು, ವೆಲೆಸಾಗಳು ಇತಿಹಾಸವನ್ನು ಹಿಂದಕ್ಕೆ ನೂಕಬಲ್ಲೆವು ಎಂದು ನಿಜವಾಗಿಯೂ ನಂಬಿದ್ದಾರೆಯೇ?

ಪುಕ್ಕಟ್ಟೆ ಶಿಕ್ಷಣ, ಪೂರ್ಣ ಉದ್ಯೋಗ, ವಸತಿ, ಆರೋಗ್ಯ, ಪಿಂಚಣಿಯನ್ನು ಸಾವಿನವರೆಗೆ ಅಗತ್ಯವಾದ ಎಲ್ಲಾ ಸಾಮಾಜಿಕ ಭದ್ರತೆಗಳನ್ನೊದಗಿಸಿದ ವ್ಯವಸ್ಥೆಯಲ್ಲಿ ಬೆಳೆದ ಯುವಜನ ನಿರುದ್ಯೋಗದ, ಅನಾರ್ಯೋಗದ, ಪ್ರತಿದಿನ ಬೆಲೆಯೇರಿಸುವ, ವಾಸಕ್ಕೆ ಮನೆ ತಿನ್ನಲು ರೊಟ್ಟಿ ಕೊಡಲಾಗದ ಆಳ್ವಿಕೆಗೆ ವಿನೀತರಾಗಿ, ತಲೆಬಾಗಿ ಸ್ವೇಚ್ಛೆಯಿಂದ ದರೋಡೆಕೋರರಾಗಲು ತಲೆಹಿಡುಕರಾಗಲು, ಸೂಳೆಯರಾಗಲು ಸಿದ್ಧರಿದ್ದಾರೆಯೇ? ಅವರು ಆ ಮಟ್ಟಕ್ಕೆ ಇಳಿಯಬಹುದು ಎಂದು ಕೆಲವರು ಭಾವಿಸಬಹುದು. ಆದರೆ ನಾವು ಹಾಗೆ ಭಾವಿಸುವುದಿಲ್ಲ.

ಈ ಹಿನ್ನಡೆ ಈ ಸೋಲು ತಾತ್ಕಾಲಿಕ ಎಂದು ಇತರ ಹಲವರಂತೆ ನಾವು ಕಮ್ಯುನಿಸ್ಟರೂ ದೃಢವಾಗಿ ನಂಬಿದ್ದೇವೆ. ನಿಜ. ತಪ್ಪುಗಳಾಗಿವೆ ಅಷ್ಟೇ ಏಕೆ, ಪ್ರಮಾದಗಳಾಗಿವೆ. ಪಾಪ ಕೃತ್ಯಗಳಾಗಿವೆ, ನಿಜ, ಸೋವಿಯೆತ್ ಜನತೆ ಅದಕ್ಕೆ ಪ್ರಾಯಶ್ಚಿತ ಮಾಡಿಕೊಳ್ಳಬೇಕು. ಬೆಲೆ ತೆರಬೇಕು ಬಹುಶಃ ತುಂಬಾ ದೊಡ್ಡ ಬೆಲೆ ತೆರಬೇಕಾದೀತು. ಆದರೂ ಅವರ ಪೂರ್ವಿಕರ ತಪ್ಪುಗಳು, ಪಾಪಗಳೇನೇ ಇದ್ದರೂ ಮಾನವ ಸಮಾಜದ ಬೆಳವಣಿಗೆಯ ಸಮಾಜಿಕ ನಿಯಮಗಳಂತೂ ತಮ್ಮ ಪಾಡಿಗೆ ತಮ್ಮ ಕೆಲಸ ಮಾಡಿಯೇ ಮಾಡುತ್ತವೆ.

ಹೌದು. ಇದೇ ಮಹಾನ್ ಅಕ್ಟೋಬರ್ ಕ್ರಾಂತಿಯ ಮಹತ್ವ. ಸ್ವಾತಂತ್ರ್ಯ ಎಂದರೆ ಮನಬಂದಂತೆ ಒದರಾಡುತ್ತಾ ಇನ್ನೊಂದೆಡೆ ಶೋಷಣೆಯ ಗೊಡೆಗಳಿಗೆ ತಲೆ ಚಚ್ಚಿಕೊಳ್ಳಬೇಕಾದ ಟೊಳ್ಳು ಸ್ವಾತಂತ್ರ್ಯವಲ್ಲ; ಎರಡು ಹೊತ್ತುಕೂಳು, ತಲೆಯ ಮೇಲೊಂದು ಸೂರು, ಪುಕ್ಕಟ್ಟೆ ವಿದ್ಯಾಭ್ಯಾಸ, ಎಲ್ಲರಿಗೂ ಆರೋಗ್ಯ, ಖಾತ್ರಿ ಉದ್ಯೋಗ ಪಡೆಯುವ ಸ್ವಾತಂತ್ರ್ಯ ಎಂದು ಕಾರ್ಮಿಕರಿಗೆ, ರೈತರಿಗೆ ಮನವರಿಕೆ ಮಾಡಿಸಿದ ಕ್ರಾಂತಿಯಿದು.

ಅಕ್ಟೋಬರ್ ಕ್ರಾಂತಿಯ ನಂತರ ಹುಟ್ಟಿದ ಪೀಳಿಗೆಗಳ ಸೋವಿಯತ್ ಜನ, ಪೂರ್ವ ಯುರೋಪಿನ ಜನ ಬಂಡವಾಳಶಾಹಿ ದೇಶಗಳ, ನಮ್ಮಂತಹ ದೇಶಗಳ ನಾಗರಿಕರು ದಿನ ಬೆಳಗಾದರೆ ಅನುಭವಿಸುವ ಬವಣೆಗಳನ್ನು, ಕಾಣುವ ಅರಾಜಕತೆಯನ್ನು ಕಂಡವರಲ್ಲ, ಅನುಭವಿಸಿದವರಲ್ಲ. ಆದರೆ ಸ್ವಂತ ಅನುಭವದಿಂದಲೇ ಅವರು ಎರಡು ವ್ಯವಸ್ಥೆಗಳ ನಡುವಿನ ಅಗಾಧ ವ್ಯತ್ಯಾಸವನ್ನು ಅರಿತುಕೊಳ್ಳುತ್ತಾರೆ, ಅರಿತುಕೊಳ್ಳಲಾರಂಭಿಸಿದ್ದಾರೆ. ಸೂರ್ಯ ಪೂರ್ವದಲ್ಲಿ ಹುಟ್ಟಿ, ಪಶ್ಚಿಮದಲ್ಲಿ ಮುಳುಗುವುದೆಷ್ಟು ಸತ್ಯವೋ ಅವರ ತಂದೆ, ತಾಯಿ, ತಾತ, ಅಜ್ಜಿಯವರು 1941-45ರ ದಿನಗಳಲ್ಲಿ ತಮ್ಮ ವಿಶಿಷ್ಟ ವ್ಯವಸ್ಥೆಯನ್ನು ಕಾಮಕೊಳ್ಳಲು ಜೀವದ ಹಂಗು ತೊರೆದು ಸೆಣಸಿದಂತೆ ಮುಂದೆ ಇವರೂ ತಾವು ಕಳೆದುಕೊಂಡ ಆ ವ್ಯವಸ್ಥೆಯನ್ನು ಮತ್ತೆ ಪಡೆಯಲು ಹೋರಾಡುತ್ತಾರೆಎಂಬೂದು ಅಷ್ಟೇ ಸತ್ಯ. ಈ ಹೋರಾಟದಲ್ಲಿ ಖಂಡಿತವಾಗಿಯೂ ಹಿಂದೆ ತನ್ನನ್ನು ನಿಷ್ಕ್ರಿಯಗೊಳಿಸಿದ ದೌರ್ಬಲ್ಯಗಳನ್ನೆಲ್ಲಾ ನೀಗಿಕೊಂಡ, ಹೃದಯಹೀನ ಅಧಿಕಾರಶಾಹೀ ಗೆದ್ದಲಿನಿಂದ ಮುಕ್ತವಾದ, ನಾಗರಿಕರಿಗೆ ಪೂರ್ಣ ಹಕ್ಕುಗಳನ್ನು ಒದಗಿಸುವ ವ್ಯವಸ್ಥೆಯಾಗಿ ಅದು ಪುನರುಜ್ಜೀವನಗೊಳ್ಳುತ್ತದೆ..

ಹೌದು. ಕ್ರಾಂತಿಯಿನ್ನೂ ಮುಗಿದಿಲ್ಲ. ಅಕ್ಟೋಬರ್ ಕ್ರಾಂತಿ ಇದ್ದೇ ಇರುತ್ತದೆ. ಏಕೆಂದರೆ ಅದು ಅಮರ.

ಈ ಅಮರ ಕ್ರಾಂತಿಯ 75ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅದರ ಹರಹಿನ ವಿವಿಧ ಆಯಾಮಗಳನ್ನು ಮತ್ತೆ ನೆನಪಿಸುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರ ಲೇಖನಗಳನ್ನೊಳಗೊಂಡ 'ಐಕ್ಯರಂಗ' ದ ಈ ವಿಶೇಷಾಂಕ ನಿಮ್ಮ ಕೈಯಲ್ಲಿದೆ.

ನವಂಬರ್ 7, 1992 ಅಕ್ಟೋಬರ್ ಕ್ರಾಂತಿಯ 75 ನೇ ವಾರ್ಷಿಕೋತ್ಸವದ ದಿನ. ಸೋವಿಯತ್ ಒಕ್ಕೂಟದ ವಿಘಟನೆ ಹಾಗೂ ಪೂರ್ವ ಯೂರೋಪಿನ ದೇಶಗಳಲ್ಲಿ ಸಮಾಜವಾದದ ಹಿನ್ನಡೆಯ ಪರಿಸ್ಥಿತಿಯನ್ನು ಬಳಸಿ ಕಮ್ಯುನಿಸಂ ಸತ್ತಿದೆ ಎಂದೆನ್ನುತ್ತಾ ವಿಶ್ವದೆಲ್ಲೆಡೆ ಸಾಮ್ರಾಜ್ಯಶಾಹಿಗಳು ಹಾಗೂ ಪ್ರತಿಗಾಮಿಗಳು ದೊಡ್ಡ ಧಾಳಿ ಆರಂಭಿಸಿರುವ ಹಿನ್ನೆಲೆಯಲ್ಲಿ ಈ ಚಾರಿತ್ರಿಕ ಘಟನೆಯ ವಾರಾಚರಣೆ ನಡೆಸಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ.

ಅಕ್ಟೋಬರ್ ಕ್ರಾಂತಿ

ಸಾಮಾಜಿಕ ಪರಿವರ್ತನೆಯ ದಾರಿ ತೋರಿದ ಕ್ರಾಂತಿ



-- ಹರ್ಕಿಶನ್ ಸಿಂಗ್ ಸುರ್ಜಿತ್

1. ಇಲ್ಲಿ ಕ್ರಾಂತಿಯನ್ನು ರಕ್ಷಿಸಲು ಯುದ್ಧರಂಗಕ್ಕೆ ತೆರಳುತ್ತಿರುವ ಕೆರೆಡ್‌ಗಾರ್ಡ್ ಸ್ವಯಂ ಸೇವಕರೊಡನೆ ಲೆನಿನ್



ಸಮಾಜವಾದಕ್ಕೆ ಭವಿಷ್ಯವಿಲ್ಲ, ಅಕ್ಟೋಬರ್ ಕ್ರಾಂತಿಯ ಯಶಸ್ಸಿನ ಪರಿಣಾಮವಾಗಿ ಏಳು-ದಶಕಗಳ ಕಾಲ ವಿಶ್ವ ಘಟನೆಗಳು ಪಡೆದ ನಿರ್ಣಾಯಕ ತಿರುವು ಈಗ ಇತಿಹಾಸದ ಭಾಗವಾಗಿ ಬಿಟ್ಟಿದೆ ಎಂದು ನಂಬಿಸುವುದು ಈ ಪ್ರತಿಗಾಮಿ ಶಕ್ತಿಗಳ ಆಶಯ.

ವಾಸ್ತವವಾಗಿ ಸಾಮ್ರಾಜ್ಯಶಾಹಿಗಳು ಮತ್ತು ಪ್ರತಿಗಾಮಿಗಳು ಶೋಷಕ ಬಂಡವಾಳಶಾಹಿ ವ್ಯವಸ್ಥೆಯಿಂದ, ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ದೇಶಗಳ ನಡುವೆ ಮತ್ತು ಈ ದೇಶಗಳೊಳಗೆ ಕೂಡಾ ವೈಷಮ್ಯತೆಯನ್ನು ಹೆಚ್ಚಿಸುವ ವ್ಯವಸ್ಥೆ ನೀಡಿದ ಬಡತನ, ನಿರುದ್ಯೋಗ, ಹಸಿವು ಇತ್ಯಾದಿಗಳಿಂದ ಕಾರ್ಮಿಕ ವರ್ಗದ ಗಮನವನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನ ಮಾಡು-ತ್ತಿದ್ದಾರೆ; ರಷ್ಯಾದ ಜನತೆಯನ್ನು ಝಾರ್‌ಶಾಹಿಯ ನೊಗದಿಂದ ಬಿಡುಗಡೆ ಮಾಡಿದಷ್ಟೇ ಅಲ್ಲ, ಮೊತ್ತ ಮೊದಲ ಬಾರಿಗೆ ಕಾರ್ಮಿಕ ವರ್ಗ ಇತಿಹಾಸದಲ್ಲಿ ಅಧಿಕಾರ ಕಿತ್ತುಕೊಂಡದ್ದಿಷ್ಟೇ ಅಲ್ಲ, ವಿಶ್ವದೆಲ್ಲೆಡೆ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಮೋಚನೆಯ ಹೋರಾಟಗಳಿಗೆ ಕಾಣಿಕೆ ನೀಡಿದ ಅಕ್ಟೋಬರ್ ಕ್ರಾಂತಿಯ ನೆನಪನ್ನೇ ಅಳಿಸಿಹಾಕಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ಅಕ್ಟೋಬರ್ ಕ್ರಾಂತಿ ನೀಡಿದ ಕಾಣಿಕೆಯನ್ನು ನಾವು ಮರೆಯಬೇಕೆಂದು ಈ ಶಕ್ತಿಗಳ ಆಶಯ. ಮಾರ್ಕ್ಸ್‌ವಾದ ಬಂಡವಾಳಶಾಹಿ ಸಮಾಜ ತನ್ನ ಆಂತರಿಕ ವಿಪರ್ಯಾಸಗಳಿಂದಾಗಿಯೇ ಕುಸಿದು ಅದನ್ನು ಬದಲಾಯಿಸಲು ಒಂದು ಸಮಾಜವಾದೀ ಕ್ರಾಂತಿ ಅನಿವಾರ್ಯ ಎಂದು ಚಾರಿ-ತ್ರಿಕ ಭೌತವಾದದ ಆಧಾರದ ಮೇಲೆ ಗಮನಿಸಿತ್ತು. ಆದರೆ ಅಕ್ಟೋಬರ್ ಕ್ರಾಂತಿಯ ಮೊದಲು ಇದಕ್ಕೊಂದು ಮಾದರಿ ಎಂಬುದಿರಲಿಲ್ಲ. ಅತ್ತ ಬಂಡವಾಳಶಾಹಿ ಮಾತ್ರ ಆದಾಗಲೇ ಮೂರು ಶತಮಾನಗಳನ್ನು ಕಂಡಿತ್ತು. ಸಮಾಜವಾದೀ ಕ್ರಾಂತಿಯ ನೀತಿಯೇನಿರಬೇಕು, ತಂತ್ರ ಹೇಗಿರ-ಬೇಕು ಎಂದು ರೂಪಿಸಿದ್ದು ಅಕ್ಟೋಬರ್ ಕ್ರಾಂತಿಯೇ. ಅಕ್ಟೋಬರ್ ಕ್ರಾಂತಿಯ ಮಹತ್ವವನ್ನು ಒತ್ತಿ ಹೇಳಲು ಇನ್ನೊಂದು ಅಂಶವನ್ನು ಇಲ್ಲಿ ಹೇಳಬಹುದು- ಮಾರ್ಕ್ಸ್ ಮತ್ತು ಎಂಗೆಲ್ಸ್ ಸಮಾಜವಾದಿ ಕ್ರಾಂತಿಗಳು ಮುಂದುವರಿದ ಬಂಡವಾಳ ಶಾಹಿ ದೇಶಗಳಲ್ಲಿ ಯಶಸ್ವಿಯಾಗುತ್ತವೆ ಎಂದು ನುಡಿದಿ-ದ್ದರು. ಲೆನಿನ್ ಸಾಮ್ರಾಜ್ಯಶಾಹಿಯ ಕುರಿತು ನಡೆಸಿದ ಅಧ್ಯಯನದ ಆಧಾರದ ಮೇಲೆ ಸಾಮ್ರಾಜ್ಯ-ಶಾಹಿಯ ಗೊಣಸು ದುರ್ಬಲವಾಗಿದ್ದಲ್ಲಿ ಕೂಡಾ ಸಮಾಜವಾದಿ ಕ್ರಾಂತಿ ನಡೆಯಲು ಸಾಧ್ಯ ಎಂಬ ತೀರ್ಮಾನಕ್ಕೆ ಬಂದರು. ಯುದ್ಧದಲ್ಲಿ ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯವನ್ನು ವಿಶ್ಲೇಷಿಸಿದ ಲೆನಿನ್ ರಷ್ಯಾ ಈ ವೈರುಧ್ಯಗಳ ಕೇಂದ್ರ ಬಿಂದುವಾಗಿದೆ ಎಂಬ ತೀರ್ಮಾನಕ್ಕೆ ಬಂದರು. 1917 ರಲ್ಲಿ ಸಾಮ್ರಾಜ್ಯಶಾಹಿಯ ಗೊಣಸು ರಷ್ಯಾದಲ್ಲಿ ಅತ್ಯಂತ ದುರ್ಬಲವಾಗಿದೆ ಎಂಬುದು ಸಿದ್ಧವಾಯಿತು. ಗೊಣಸು ಮುರಿದು ಕಾರ್ಮಿಕ ವರ್ಗದ ಕ್ರಾಂತಿಗೆ ದಾರಿ ತೆರೆಯಿತು. ರಾಷ್ಟ್ರೀಯ ಹಾಗೂ ಅಂತರಾ-ಷ್ಟ್ರೀಯ ವಲಯದಲ್ಲಿನ ಬಿಕ್ಕಟ್ಟುಗಳ ಜತೆಗೆ ಇಲ್ಲಿ ಇನ್ನೊಂದು ಅಂಶವೂ ಇತ್ತು. ಅದೇನೆಂದರೆ ಒಂದು ಕ್ರಾಂತಿಕಾರಿ ಪಕ್ಷ, ಎರಡು ಕ್ರಾಂತಿಗಳಲ್ಲಿ-1905 ರ ಕ್ರಾಂತಿ, ಫೆಬ್ರುವರಿ 1917 ರ ಬೂರ್ಜ್ವಾ ಕ್ರಾಂತಿಗ-ಳಲ್ಲಿ -ಧೃಡಗೊಂಡ ಕ್ರಾಂತಿಕಾರಿ ಪಕ್ಷದ ಅಸ್ತಿತ್ವ. ಆದ್ದರಿಂದಲೇ ಲೆನಿನ್‌ವಾದವನ್ನು ಸಾಮ್ರಾಜ್ಯಶಾಹಿ ಯುಗದ, ಕಾರ್ಮಿಕವರ್ಗದ ಕ್ರಾಂತಿಯ ಯುಗದ ಮಾರ್ಕ್ಸ್‌ವಾದ ಎನ್ನುವುದು.

ಅಕ್ಟೋಬರ್ ಕ್ರಾಂತಿಯ ಮೊದಲು ಇದಕ್ಕೊಂದು ಮಾದರಿ ಎಂಬುದಿರ-ಲಿಲ್ಲ. ಅತ್ತ ಬಂಡವಾಳಶಾಹಿ ಮಾತ್ರ ಆದಾಗಲೇ ಮೂರು ಶತಮಾನಗಳನ್ನು ಕಂಡಿತ್ತು. ಸಮಾಜವಾದೀ ಕ್ರಾಂತಿಯ ನೀತಿಯೇನಿರಬೇಕು, ತಂತ್ರ ಹೇಗಿರಬೇಕು ಎಂದು ರೂಪಿಸಿದ್ದು ಅಕ್ಟೋಬರ್ ಕ್ರಾಂತಿಯೇ.

ಅಕ್ಟೋಬರ್ ಕ್ರಾಂತಿಯಾಗದಿದ್ದರೆ ವಿಶ್ವದ ನಕಾಶೆ ಬೇರೆಯೇ ಆಗಿರುತ್ತಿತ್ತು. ಅಕ್ಟೋಬರ್ ಕ್ರಾಂತಿ ಶೋಷಕ ವರ್ಗಗಳ ಗುತ್ತೇದಾರಿ ಆಡಳಿತಕ್ಕೆ ಕೊನೆ ಹಾಡಿತು. ಇತಿಹಾಸದ ಚಾಲಕ ಶಕ್ತಿಯಾಗಿ ಸಮಾಜದ ಮುನ್ನಡೆಗೆ ಒಂದು ಶಕ್ತಿಶಾಲೀ ಚೈತನ್ಯ ನೀಡಿತು.

ವಿಶ್ವದ ಕಾರ್ಮಿಕ ವರ್ಗ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ಹೋರಾಡುತ್ತಿದ್ದ ಜನ ಅಕ್ಟೋಬರ್ ಕ್ರಾಂತಿಯಿಂದ ಆಕರ್ಷಿತರಾದರು. ಈ ಮೂರು ಶಕ್ತಿಗಳನ್ನು ಅಕ್ಟೋಬರ್ ಕ್ರಾಂತಿ, ವಿಶ್ವದ ಕಾರ್ಮಿಕ ವರ್ಗ ಹಾಗೂ ರಾಷ್ಟ್ರೀಯ ವಿಮೋಚನಾ ಶಕ್ತಿಗಳು- ಈ ಮೂರನ್ನು ಒಂದುಗೂಡಿಸುವ ಅಗತ್ಯದ ಬಗ್ಗೆ ಲೆನಿನ್ ನಿರಂತರವಾಗಿ ಒತ್ತು ನೀಡುತ್ತಾ ಬಂದರು. ಈ ಮೂರು ಶಕ್ತಿಗಳ ಐಕ್ಯತೆಯಿಂದ ಮಾತ್ರವೇ ವೈರುಧ್ಯಗಳನ್ನು ಕಾರ್ಮಿಕ ವರ್ಗ ಮತ್ತು ರಾಷ್ಟ್ರೀಯ ವಿಮೋಚನಾ ಶಕ್ತಿಗಳ ಪರವಾಗಿ ಪರಿಹರಿಸಲು ಸಾಧ್ಯವಿತ್ತು.

ಶೋಷಕ ಶಕ್ತಿಗಳಿಗೆ ಉಂಟು ಮಾಡಿತು ಮರಣ ಭಯ

ಒಂದಿನ ಸೋವಿಯತ್ ಒಕ್ಕೂಟದ ವಿಘಟನೆಗೆ ಕಾರಣವಾದ ದೌರ್ಬಲ್ಯಗಳು, ವಿಫಲತೆಗಳ ಬಗ್ಗೆ ನಾವಿಲ್ಲಿ ವಿಶ್ಲೇಷಿಸಲು ಹೋಗುವುದಿಲ್ಲ. ಇಲ್ಲಿ ನಾವು ಎತ್ತಿ ಹೇಳಬಯಸುವ ಅಂಶವೆಂದರೆ ಅಕ್ಟೋಬರ್ ಕ್ರಾಂತಿ ಸಮಾಜವಾದಕ್ಕೆ, ವಿಶ್ವ ಕಾರ್ಮಿಕ ವರ್ಗಕ್ಕೆ, ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ, ವಿಶ್ವಶಾಂತಿಯ ಉದ್ದೇಶ ಸಾಧನೆಗೆ ನೀಡಿದ ಕೊಡುಗೆ. ಅಕ್ಟೋಬರ್ ಕ್ರಾಂತಿಯಾಗದಿದ್ದರೆ ವಿಶ್ವದ ನಕಾಶೆ ಬೇರೆಯೇ ಆಗಿರುತ್ತಿತ್ತು. ಅಕ್ಟೋಬರ್ ಕ್ರಾಂತಿ ಶೋಷಕ ವರ್ಗಗಳ ಗುತ್ತೇದಾರಿ ಆಡಳಿತಕ್ಕೆ ಕೊನೆ ಹಾಡಿತು. ಇತಿಹಾಸದ ಚಾಲಕ ಶಕ್ತಿಯಾಗಿ ಸಮಾಜದ ಮುನ್ನಡೆಗೆ ಒಂದು ಶಕ್ತಿಶಾಲೀ ಚೈತನ್ಯ ನೀಡಿತು. 1917ರಲ್ಲಿ ತನ್ನ ಜನ್ಮದೊಂದಿಗೇ ಸೋವಿಯತ್ ಪ್ರಭುತ್ವ ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳನ್ನು ಆಕರ್ಷಿಸಿದ ಸ್ವಾಭಾವಿಕ ಕೇಂದ್ರವಾಗಿಬಿಟ್ಟಿತು. ಎಂದು ಲೆನಿನ್ ಮತ್ತೆ-ಮತ್ತೆ ಹೇಳಿದ್ದಾರೆ. ಆದ್ದರಿಂದಲೇ ವಿಶ್ವದ ಪ್ರತಿಗಾಮಿ ಶಕ್ತಿಗಳು ಮೊದಲ ಸಮಾಜವಾದೀ ಪ್ರಭುತ್ವದ ಕತ್ತು ಹಿಸುಕಲು ಪ್ರಯತ್ನಪಟ್ಟವು. ತಮ್ಮ ಗುರಿ ಈಡೇರಿಸಲು ಸಾಮ್ರಾಜ್ಯಶಾಹಿಗಳು ಆರ್ಥಿಕ ದಿಗ್ಬಂಧನ ಹೇರಿ ಈ ಯುವ ಗಣತಂತ್ರ ಹೊಟ್ಟೆಗಿಲ್ಲದೆ ಸಾಯುವಂತೆ ಮಾಡಹೊರಟರು; ಸಶಸ್ತ್ರ ಮಧ್ಯಪ್ರವೇಶ ನಡೆಸಿ ಕ್ರಾಂತಿಯನ್ನು ರಕ್ತದ ಮಡುವಿನಲ್ಲಿ ಮುಳುಗಿಸಲು ಯತ್ನಿಸಿದರು; ಅದನ್ನು ಎಲ್ಲೆಡೆಯಿಂದ ಸುತ್ತುವರಿದು ತಮ್ಮ ಜನಗಳು ಸತ್ಯವನ್ನು ಅರಿಯದಂತೆ ಮಾಡಲು ಎಲ್ಲಾ ಸಮೂಹ ಮಾಧ್ಯಮಗಳನ್ನು ಬಳಸಿಕೊಂಡರು. ರಶ್ಯಾದ ಕಾರ್ಮಿಕರ, ರೈತರ ಉದಾಹರಣೆ ಕಂಡ ಈ ಸೋವಿಯತ್ ಗಣತಂತ್ರಗಳ ಹೊರಗಿರುವ ದುಡಿಯುವ ಜನ ಕೂಡಾ ಅದನ್ನೇ ಮಾಡಬಹುದೆಂಬ ಮರಣ ಭಯ ಎಲ್ಲಾ ದೇಶಗಳ ಶೋಷಕ ವರ್ಗಗಳನ್ನು ಆವರಿಸಿತು.

ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಹೊಸ ಮಾದರಿ

ಅಕ್ಟೋಬರ್ ಕ್ರಾಂತಿಯ ನಂತರ ಸೋವಿಯತ್ ಪ್ರಭುತ್ವ ಮೊದಲು ಹೊರಡಿಸಿದ ಡಿಕ್ರಿಗಳೆಂದರೆ ಭೂಮಿ ಮತ್ತು ಶಾಂತಿ ಕುರಿತಾದ ಡಿಕ್ರಿ. ಈ ಡಿಕ್ರಿಗಳು ತಕ್ಷಣ ರೈತಾಪಿ ವರ್ಗದ ಗಮನ ಸೆಳೆದು ಅವರು ಕಾರ್ಮಿಕ ವರ್ಗದ ಹಿಂದೆ ಅಣಿನೆರೆಯುವಂತಾಯಿತು. ವಿವಿಧ ಸಂಸ್ಥೆಗಳನ್ನು,

ಬ್ಯಾಂಕುಗಳು, ರೈಲ್ವೇ, ದೊಡ್ಡ ಉದ್ದಿಮೆಗಳನ್ನು ರಾಷ್ಟ್ರೀಕರಿಸಿ ಕಾರ್ಮಿಕರ ಹತೋಟಿಗೆ ನೀಡಲಾಯಿತು. ಇದು ಆರ್ಥಿಕ ಅಭಿವೃದ್ಧಿಗೆ ಅಡಿಗಲ್ಲು ಹಾಕಿತು. ಈ ಎಲ್ಲಾ ಕ್ರಮಗಳ ಮೂಲಕ ಸೋವಿಯತ್ ಒಕ್ಕೂಟವನ್ನು ಒಂದು ಬಲವಾದ ಕೈಗಾರಿಕಾ ಆಧಾರವುಳ್ಳ ಶಕ್ತಿಶಾಲೀದೇಶವನ್ನಾಗಿ ಮಾಡಲು ಅವರಿಗೆ ಸಾದ್ಯವಾಯಿತು. ಅದುವರೆಗೆ ಇದ್ದ ನಿಯಮವೆಂದರೆ ಕೆಲವು ದೇಶಗಳು ಇತರ ದೇಶಗಳ ಶೋಷಣೆ ನಡೆಸುವುದು. ಏಕೆಂದರೆ ಇದಕ್ಕೆ ಸವಾಲು ಹಾಕುವವರಿಲ್ಲ. ಸೋವಿಯತ್ ಅಧಿಕಾರ ಈ ನಿಯಮವನ್ನು ಬದಲಿಸಿತು. ಇತರ ದೇಶಗಳ ಪ್ರದೇಶಗಳ ಮೇಲೆ ದಾವೆ, ಹತೋಟಿಗಳನ್ನು ಅದು ಬಿಟ್ಟು ಕೊಟ್ಟಿತು. ಜನಗಳ, ಪ್ರಭುತ್ವಗಳ ಸಮಾನ ಹಕ್ಕುಗಳನ್ನು ಮಾನ್ಯ ಮಾಡಿತು, ಪರಸ್ಪರ ಪ್ರಯೋಜನಕಾರಿಯಾದ ಆರ್ಥಿಕ ಸಂಬಂಧಗಳನ್ನು ಪ್ರೋತ್ಸಾಹಿಸಿತು. ಈ ಎಲ್ಲಾ ನೀತಿಗಳು ಸೋವಿಯತ್ ಅಧಿಕಾರದಲ್ಲೇ ಅಂತರ್ಗತವಾದ ಅಂಶಗಳಾಗಿದ್ದವು. ಇದರ ಫಲವಾಗಿ ಮೂಲಭೂತವಾಗಿ ಹೊಸ ಮಾದರಿಯ ಅಂತರ್‍ರಾಷ್ಟ್ರೀಯ ಆರ್ಥಿಕ ಸಂಬಂಧಗಳು ಮೂಡಿಬರುವಂತಾಯಿತು. ಅಂತರ್‍ರಾಷ್ಟ್ರೀಯ ಶ್ರಮ ವಿಭಜನೆಯ, ಸಮಾಜವಾದಿ ಪ್ರಭುತ್ವಗಳ ಆರ್ಥಿಕ ಸಮಗ್ರೀಕರಣದ ಹೊಸ ಮಾದರಿ ಇದಾಗಿತ್ತು.

ಈ ಆಧಾರದ ಮೇಲೆ ಎರಡು ಉತ್ಪಾದನಾ ವಿಧಾನಗಳ ನಡುವೆ, ಎರಡು ವ್ಯವಸ್ಥೆಗಳ ನಡುವೆ, ಎರಡು ಆರ್ಥಿಕಗಳ ನಡುವೆ ಸಮಾಜವಾದ ಹಾಗೂ ಬಂಡವಾಳಶಾಹಿಯ ನಡುವೆ ಹೋರಾಟ ವಿಶ್ವ ಆರ್ಥಿಕತೆಯ ಮೇಲೆ ವಿಶ್ವ ಅಬಿವೃದ್ಧಿಯ ಸಂಪೂರ್ಣ ದಾರಿಯ ಮೇಲೆಯೋ ಹೆಚ್ಚೆಚ್ಚು ಪ್ರಭಾವ ಬೀರಲಾರಂಭಿಸಿತು. ಸಮಾಜವಾದ ವಿವಿಧ ವಲಯಗಳಲ್ಲಿ ಬಲವಾದ ಸ್ಥಾನ ಗಳಿಸಲಾರಂಭಿಸಿತು.

ಇತಿಹಾಸದಲ್ಲಿ ಮೊದಲ ಬಾರಿಗೆ ದುಡಿಯುವ ಜನತೆ ಒಂದು ಬೃಹತ್ ದೇಶದಲ್ಲಿ ಅಧಿಕಾರ ಗೆದ್ದುಕೊಂಡಿದ್ದರು. ರಶ್ಯಾದಲ್ಲಿ ಅಸ್ತಿತ್ವಕ್ಕೆ ಬಂದ ಸೋವಿಯತ್ ಮಾದರಿ ಆಗಿನ ಅಲ್ಲಿನ ಸನ್ನಿವೇಶಕ್ಕೆ ವಿಶಿಷ್ಟವಾದ ಒಂದು ಮಾದರಿ. ಹಿಂದೆ ಹೇಳಿದಂತೆ ಸೋವಿಯತ್‌ಗಳ ಸಮ್ಮೇಳನ ಶಾಂತಿಯ ಡಿಕ್ರಿಯ ಬಗ್ಗೆ ಚರ್ಚಿಸಿತು. ಶಾಂತಿ ಪ್ರಯತ್ನಳನ್ನು ಸೋವಿಯತ್ ಪ್ರಭುತ್ವ ಮುಂದೆಯು ಮಹತ್ವದ ಸಮಸ್ಯೆಯೆಂದೇ ಪರಿಗಣಿಸಿತು. ಸೋವಿಯತ್‌ಗಳ ಸಮ್ಮೇಳನ ಭೂಮಿಯ ಬಗ್ಗೆ ಹೊರಡಿಸಿದ ಡಿಕ್ರಿ ಕರ್ಷಕ ಪ್ರಶ್ನೆಯನ್ನು ಕುರಿತಾದ ಈಗಲೂ ನಮ್ಮದೇಶವೂ ಸೇರಿದಂತೆ ಹಲವುದೇಶಗಳಲ್ಲಿ ಒಂದುಕ್ಲಿಷ್ಟ ಪ್ರಶ್ನೆಯಾಗಿ ಉಳಿದಿರುವ ಕರ್ಷಕ ಪ್ರಶ್ನೆಯನ್ನು ಕುರಿತಾದ ಒಂದು ಆದರ್ಶ ಕ್ರಮವಾಗಿತ್ತು.

ಹಲವು ಕ್ರಾಂತಿಗಳಿಗೆ ಸ್ಫೂರ್ತಿ

ಅಕ್ಟೋಬರ್ ಕ್ರಾಂತಿಯ ಮಹತ್ವವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮೊದಲು ಬಿರುಕು ಉಂಟು ಮಾಡಿದ್ದು ಅಕ್ಟೋಬರ್ ಕ್ರಾಂತಿ ಅಕ್ಟೋಬರ್ ಕ್ರಾಂತಿ. ಯುರೋಪಿನ ಇತರ ಹಲವು ಕ್ರಾಂತಿಗಳು ನಡೆಯುವಂತೆ ಮಾಡಿತು. ಫಿನ್‌ಲೆಂಡಿನಲ್ಲಿ 1918ರ ಕಾರ್ಮಿಕ ಕ್ರಾಂತಿ, ಸೆಪ್ಟೆಂಬರ್ 1918ರ ಬಲ್ಗೇರಿಯಾದ ಸೈನಿಕರ ಬ್ಲಾದಿಯಾ ಬಂಡಾಯ, ಅಕ್ಟೋಬರ್-ನವಂಬರ್ 1918ರಲ್ಲಿ ಆಸ್ಟ್ರೀಯಾ-ಹಂಗೇರಿಗಳಲ್ಲಿ ಬೂರ್ಜ್ವಾ- ಪ್ರಜಾಪ್ರಭುತ್ವ ಕ್ರಾಂತಿ, ನವಂಬರ್ 1918ರಲ್ಲಿ ಜರ್ಮನಿಯಲ್ಲಿ ಬೂರ್ಜ್ವಾ- ಪ್ರಜಾಪ್ರಭುತ್ವ ಕ್ರಾಂತಿ, 1918ರಲ್ಲೇ ಚೆಕೊಸ್ಲಾ-

> **ಅಕ್ಟೋಬರ್ ಕ್ರಾಂತಿಯ ಮಹತ್ವವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮೊದಲು ಬಿರುಕು ಉಂಟು ಮಾಡಿದ್ದು ಅಕ್ಟೋಬರ್ ಕ್ರಾಂತಿ ಅಕ್ಟೋಬರ್ ಕ್ರಾಂತಿ. ಯುರೋಪಿನ ಇತರ ಹಲವು ಕ್ರಾಂತಿಗಳು ನಡೆಯುವಂತೆ ಮಾಡಿತು.**

ರಾಷ್ಟ್ರೀಯ ವಿಮೋಚನೆಗಾಗಿ ಹೋರಾಡುತ್ತಿರುವ ಜನಗಳಿಗೆ ಬೆಂಬಲ ನೀಡಬೇಕೆಂಬ ಲೆನಿನ್‌ರ ಕರೆ ಕೂಡಾ ವ್ಯರ್ಥವಾಗಲಿಲ್ಲ. ವಸಾಹತುಶಾಹೀ ವ್ಯವಸ್ಥೆಯನ್ನೇ ಅಲುಗಾಡಿಸಿದ ಆಂದೋಲನಗಳು ವಸಾಹುತಗಳಲ್ಲಿ ಮೂಡಿಬರುವಂತಹ ಪ್ರಭಾವ ಬೀರಿತು ಅಕ್ಟೋಬರ್ ಕ್ರಾಂತಿ.

ವಾಕಿಯಾ ಸ್ಥಾಪನೆಗೆ ಕಾರಣವಾದ ಕ್ರಾಂತಿಕಾರಿ ಆಂದೋಲನ, ಹಂಗೇರಿಯ 1918ರ ಬೂರ್ಜ್ವಾ-ಪ್ರಜಾಪ್ರಭುತ್ವ ಕ್ರಾಂತಿ, 1918ರಲ್ಲಿ ಪೋಲೆಂಡಿನಲ್ಲಿ ಸೋವಿಯತ್‌ಗಳ ಸ್ಥಾಪನೆ ಮಾಡಿದ ಕ್ರಾಂತಿಕಾರಿ ಆಂದೋಲನ, 1919ರಲ್ಲಿ ಬಲ್ಗೇರಿಯಾದಲ್ಲಿ ಸೋವಿಯತ್ ಗಣತಂತ್ರ, ಬವೇರಿಯಾ, ಸ್ಲೋವಾಕ್ ಸೋವಿಯತ್ ಗಣತಂತ್ರಗಳು, ಫ್ರಾನ್ಸ್, ಬ್ರಿಟನ್, ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಸಾಮೂಹಿಕ ಕ್ರಾಂತಿಕಾರಿ ಮುಷ್ಕರಗಳು, ಜರ್ಮನಿ ಹಾಗೂ ಬಲ್ಗೇರಿಯಾದಲ್ಲಿ 1923ರ ಸಶಸ್ತ್ರ ಕಾರ್ಮಿಕ ಬಂಡಾಯಗಳು- ಅಕ್ಟೋಬರ್ ಕ್ರಾಂತಿಯ ಪ್ರಭಾವದಿಂದಾಗಿ ಯುರೋಪಿನಲ್ಲಿ ಜರ್ಮನಿ, ಹಂಗೇರಿ, ಫಿನ್‌ಲೆಂಡ್‌ನಂತಹ ಕೈಗಾರಿಕಾಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೂಡಾ ಹತ್ತಾರು ಕ್ರಾಂತಿಗಳು ಸಿಡಿದು ಬಂದವು ಎಂಬುದನ್ನು ಇದು ತೋರಿಸುತ್ತದೆ.

ರಾಷ್ಟ್ರೀಯ ವಿಮೋಚನೆಗಾಗಿ ಹೋರಾಡುತ್ತಿರುವ ಜನಗಳಿಗೆ ಬೆಂಬಲ ನೀಡಬೇಕೆಂಬ ಲೆನಿನ್‌ರ ಕರೆ ಕೂಡಾ ವ್ಯರ್ಥವಾಗಲಿಲ್ಲ. ವಸಾಹತುಶಾಹೀ ವ್ಯವಸ್ಥೆಯನ್ನೇ ಅಲುಗಾಡಿಸಿದ ಆಂದೋಲನಗಳು ವಸಾಹುತಗಳಲ್ಲಿ ಮೂಡಿಬರುವಂತಹ ಪ್ರಭಾವ ಬೀರಿತು ಅಕ್ಟೋಬರ್ ಕ್ರಾಂತಿ. ಉದಾಹರಣೆಗೆ ಚೀಣಾದಲ್ಲಿ 1919ರಲ್ಲಿ ಮೇ 4ರ ಆಂದೋಲನ, ಕೊರಿಯಾದಲ್ಲಿ 1919ರಲ್ಲಿ ಜಪಾನ್-ವಿರೋಧಿ ಬಂಡಾಯ, 1921ರಲ್ಲಿ ಮಂಗೋಲಿಯಾದ ಜನಪ್ರಿಯ ಕ್ರಾಂತಿ, ಚೀಣೀ ಜನತೆಯ ಕ್ರಾಂತಿಕಾರಿ ಹೋರಾಟ, 1924-27ರಲ್ಲಿ ಭಾರತ, ಇಂಡೋನೇಶ್ಯಾ, ಚೀಣಾ, ಜಪಾನ್, ಈಜಿಪ್ಟ್, ತುರ್ಕಿ, ಸಿರಿಯಾ, ಅಫ್ಘಾನಿಸ್ತಾನ ಹಾಗೂ ದಕ್ಷಿಣ ಆಫ್ರಿಕಾಗಳಲ್ಲಿ ಸಾಮೂಹಿಕ ರಾಷ್ಟ್ರೀಯ ಕ್ರಾಂತಿಕಾರಿ ಆಂದೋಲನಗಳು.

ಅಕ್ಟೋಬರ್ ಕ್ರಾಂತಿಯ ಪ್ರಭಾವ ಏನು ಎಂದು ತಿಳಿಸುವ ಇನ್ನೊಂದು ಸಂಗತಿಯೆಂದರೆ ಕಮ್ಯುನಿಸ್ಟ್ ಪಕ್ಷಗಳ ಸ್ಥಾಪನೆಯ ಮೂಲಕ ಕಂಡು ಬಂದ ಉತ್ಕ್ರಾಂತಿಗಳು. 1919ರಲ್ಲಿ ಇದ್ದುದು ಒಂದೇ ಕಮ್ಯುನಿಸ್ಟ ಪಕ್ಷ. ಸಾಮಾಜಿಕ ಪ್ರಜಾಪ್ರಭುತ್ವವಾದಿ ಪಕ್ಷಗಳಲ್ಲಿ ಅಕ್ಟೋಬರ್ ಕ್ರಾಂತಿಯ ದಾರಿಯನ್ನು ಅನುಸರಿಸುವ ಬಗ್ಗೆ ಆಗಲೇ ಹೋರಾಟಗಳು ಆರಂಭವಾಗಿದ್ದವು. ವಿವಿಧ ಕಮ್ಯುನಿಸ್ಟ್ ಗುಂಪುಗಳು, ಪ್ರವೃತ್ತಿಗಳು ಮೂಡಿ ಬರಲಾರಂಭಿಸಿದವು. 1923ರ ವೇಳೆಗೆ ಅಂದರೆ ಐದು ವರ್ಷಗಳೊಳಗೇ 38 ಕಮ್ಯುನಿಸ್ಟ್ ಪಕ್ಷಗಳು ಸ್ಥಾಪನೆಗೊಂಡವು. ಈಗ ಅವುಗಳ ಸಂಖ್ಯೆ ನೂರಕ್ಕೂ ಹೆಚ್ಚು.

ರಾಷ್ಟ್ರೀಯ ವಿಮೋಚನಾ ಶಕ್ತಿಗಳಿಗೆ ಹೊಸ ಹುರುಪು ತುಂಬಿದ ವಿಜಯ

ಅಕ್ಟೋಬರ್ ಕ್ರಾಂತಿ ಒಂದು ಪ್ರಬಲ ಕೈಗಾರಿಕಾ ಅಡಿಗಲ್ಲು ಹಾಕುವಲ್ಲಿ ಯಶಸ್ವಿಯಾಯಿತು. ಬಂಡವಾಳಶಾಹೀ ಜಗತ್ತು ಸುತ್ತುವರಿದುದರಿಂದ, ಸಾಮ್ರಾಜ್ಯಶಾಹಿ ಅದರ ವಿರುದ್ಧ ಆಕ್ರಮಣ ಮಾಡುವ ಅವಕಾಶಕ್ಕಾಗಿ ಕಾದು ಕೂತಿದ್ದಾಗ ಅಕ್ಟೋಬರ್ ಕ್ರಾಂತಿ ತನ್ನ ರಕ್ಷಣೆಗೆ ಒಂದು ಬಲಶಾಲಿಯಾದ ಮಿಲಿಟರಿ ಯಂತ್ರವನ್ನು ಕಟ್ಟಬೇಕಾಯಿತು. ಹೀಗೆ ಸಮಾಜವಾದೀ ವ್ಯವಸ್ಥೆಯ ಬಲವಾದ ಅಡಿಗಲ್ಲು ಮಾತ್ರವೇ ಅಲ್ಲ, ಅದನ್ನು ರಕ್ಷಿಸಲು ಶಾಂತಿಗಾಗಿ ಪ್ರಯಾಸ ಪಡುತ್ತಲೇ ಒಂದು

ಬಲವಾದ ಕೆಂಪು ಸೇನೆಯನ್ನೂ ಕಟ್ಟುವುದೂ ಅದಕ್ಕೆ ಸಾಧ್ಯವಾಯಿತು. ಎರಡು ವ್ಯವಸ್ಥೆಗಳ ನಡುವಿನ ಸಂಬಂಧದಲ್ಲಿ ಸಹ ಅಸ್ತಿತ್ವದ ನೀತಿಯನ್ನು ಅದು ಪ್ರತಿಪಾದಿಸಿತು. ಫ್ಯಾಸಿಸಂ ತಲೆಯೆತ್ತಿದಾಗ ಈ ನೀತಿಯ ಆಧಾರದ ಮೇಲೆಯೇ ಅದು ಫ್ಯಾಸಿಸಂ ವಿರುದ್ಧ ಸಂಯುಕ್ತ ರಂಗದ ಘೋಷಣೆ ಎತ್ತಿತು. ಮತ್ತೆ ಮತ್ತೆ ಅದು ಮನವಿ ಮಾಡಿಕೊಂಡರೂ ಆಂಗ್ಲ-ಫ್ರೆಂಚ್-ಅಮೇರಿಕನ್ ಸಾಮ್ರಾಜ್ಯಶಾಹಿ ಅದರ ಯಾವುದೇ ಪ್ರಸ್ತಾಪಗಳತ್ತ ಲಕ್ಷ್ಯಗೊಡದೆ ಸಮಾಜವಾದೀ ಪ್ರಭುತ್ವದ ವಿರುದ್ಧ ಬೆಂಕಿಯುಗುಳಲು ಫ್ಯಾಸಿಸ್ಟ್ ಶಕ್ತಿಗಳಿಗೆ ಕುಮ್ಮಕ್ಕು ನೀಡುವುದನ್ನು ಮುಂದುವರಿಸಿತು. ಫ್ಯಾಸಿಸ್ಟ್ ಜರ್ಮನಿ ಫ್ರಾನ್ಸ್ ಮತ್ತು ಬ್ರಿಟನ್ ಮೇಲೆ ಆಕ್ರಮಣ ನಡೆಸಿ ಫ್ರಾನ್ಸನ್ನು ಸೋಲಿಸಿ ಇಡೀಯುರೋಪು ಖಂಡವನ್ನು ತನ್ನ ಕಾಲ್ಗೆಳಗೆ ಬೀಳಿಸಿ ಸೋವಿಯತ್ ಒಕ್ಕೂಟದ ಮೇಲೆ ಧಾಳಿ ಮಾಡಿದಾಗಲಷ್ಟೇ ಸೋವಿಯತ್ ಒಕ್ಕೂಟದ ಪ್ರಸ್ತಾಪವನ್ನು ಅವರು ಒಪ್ಪಿಕೊಳ್ಳುವ ಮುತುವರ್ಜಿ ತೋರಿದುದು. ಆದರೆ ಆ ವೇಳೆಗಾಗಲೇ ವಿಶ್ವ ಭಾರೀ ಕಷ್ಟಗಳನ್ನು ಎದುರಿಸಬೇಕಾಗಿತ್ತು. ಸಮಾಜವಾದೀ ಸಮಾಜ ಆಗ ಮತ್ತೊಮ್ಮೆ ತನ್ನ ಸಾಮರ್ಥ್ಯವನ್ನು ತೋರಿತು. ಸಮರದಲ್ಲಿ ಎರಡು ಕೋಟಿ ಜನಗಳನ್ನು ಕಳೆದುಕೊಂಡರೂ, ಅಪಾರ ವಿನಾಶಗಳನ್ನು ಕಾಣ ಬೇಕಾಗಿ ಬಂದರೂ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸುವಲ್ಲಿ ಅತಿ ಹೆಚ್ಚು ಕಾಣಿಕೆ ನೀಡಿದ್ದು ಸೋವಿಯತ್ ಒಕ್ಕೂಟ, ಯುದ್ಧದಲ್ಲಾದ ವಿನಾಶವನ್ನು ಮೀರಿ ನಿಂತು ದೇಶವನ್ನು ಮತ್ತೆ ಕಟ್ಟಲು ಕೂಡಾ ವಿಳಂಬವಾಗಲಿಲ್ಲ. ಇದು ಮತ್ತೊಮ್ಮೆ ಸಮಾಜವಾದದ ಸಾಮರ್ಥ್ಯವನ್ನು ತೋರೀಸಿಕೊಟ್ಟಿತು. ಫ್ಯಾಸಿಸಂ ಮೇಲಿನ ಗೆಲುವು ವಿಶ್ವಾದ್ಯಂತ ಹೊಸ ಹುರುಪು ತುಂಬಿತು. ರಾಷ್ಟ್ರೀಯ ವಿಮೋಚನೆಯ ಹೊಸ ಶಕ್ತಿಗಳನ್ನು ಹರಿಯಬಿಟ್ಟಿತು. ಇದರ ಎದುರು ಸಾಮ್ರಾಜ್ಯಶಾಹಿ ನಿಲ್ಲದಾಯಿತು. ಫ್ಯಾಸಿಸಂ ಮೇಲೆ ವಿಜಯದ ಬೆನ್ನಲ್ಲೇ ಅಲ್ಬೇನಿಯಾ, ಬಲ್ಗೇರಿಯಾ, ಚೀಣಾ, ಜೆಕೋಸ್ಲಾವಿಯಾ, ಜರ್ಮನ್ ಗಣತಂತ್ರ, ಹಂಗೇರಿ, ಕೊರಿಯಾ ಜನತಾ ಗಣತಂತ್ರ, ಪೋಲೆಂಡ್, ರೋಮಾನಿಯಾಗಳಲ್ಲಿ ಕ್ರಾಂತಿಕಾರಿ ಶಕ್ತಿಗಳು ಮುನ್ನಡೆ ಸಾಧಿಸಿದವು. ಕ್ರಾಂತಿಗಳು ಈ ದೇಶಗಳಲ್ಲಿ ಸಮಾಜವಾದಕ್ಕೆ ದಾರಿ ತೆರೆದವು.

ವಸಾಹತುಶಾಹಿ ವ್ಯವಸ್ಥೆಯ ವಿಘಟನೆ ಹಾಗೂ ಕೆಲವು ಸ್ವತಂತ್ರ ಗಣತಂತ್ರಗಳು ಮೂಡಿಬಂದದ್ದು ಈ ಅವಧಿಯ ಒಂದು ಮಹತ್ವದ ಫಲಿತಾಂಶ. ಇದರಲ್ಲಿ 1947ರಲ್ಲಿ ಭಾರತ, ಪಾಕಿಸ್ತಾನಗಳ, 1948ರಲ್ಲಿ ಬರ್ಮಾದ, 1953ರಲ್ಲಿ ಕಂಬೋಡಿಯಾದ, 19 54ರಲ್ಲಿ ಲಾವೋಸ್, ಸುಡಾನ್, ಹಾಗೂ ಮೊರೊಕ್ಕೋದ, 1956ರಲ್ಲಿ ಇಂಡೋನೇಶ್ಯಾದ, 1959ರಲ್ಲಿ ಘಾನಾದ ಸ್ವಾತಂತ್ರ್ಯಗಳು ಸೇರಿವೆ. ಅದೇ ವರ್ಷ ಮಲಯಾ ಒಕ್ಕೂಟ ಹಾಗೂ ಸಿಂಗಾಪೂರ್, 1961ರಲ್ಲಿ ಭಾರತದಲ್ಲಿನ ಪೋರ್ಚುಗೀಸ್ ವಸಾಹತುಗಳ ವಿಮೋಚನೆ, 1960ರಲ್ಲಿ ಗಯಾನಾಕ್ಕೆ ಸ್ವಾತಂತ್ರ್ಯ ಸಂಭವಿಸಿತು. 1960ರಲ್ಲಿ 17 ಆಫ್ರಿಕನ್ ದೇಶಗಳು ಸ್ವತಂತ್ರಗೊಂಡು ಅದು 'ಆಫ್ರಿಕಾ ವರ್ಷ' ಎಂದು ಇತಿಹಾಸದಲ್ಲಿ ದಾಖಲಾಗುವಂತಾಯಿತು. ಇದೇ ವೇಳೆ ಲ್ಯಾಟಿನ್ ಅಮೇರಿಕಾದಲ್ಲಿ ಸರ್ವಾಧಿಕಾರಿ ಆಳ್ವಿಕೆಗಳು ಕುಸಿದು ಬಿದ್ದವು. ಒಂದೆರಡು ಜಾಗ ಬಿಟ್ಟು ಜಗತ್ತಿನಲ್ಲಿ ಈಗ ವಸಾಹತುಶಾಹಿ ವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿದೆ ಎಂದು ನಾವು ಹೇಳಿಕೊಳ್ಳಬಹುದು. ಇದೊಂದು ಸಾಮಾನ್ಯ ಸಾಧನೆಯೇನಲ್ಲ.

ಫ್ಯಾಸಿಸಂ ಮೇಲಿನ ಗೆಲುವು ವಿಶ್ವಾದ್ಯಂತ ಹೊಸ ಹುರುಪು ತುಂಬಿತು. ರಾಷ್ಟ್ರೀಯ ವಿಮೋಚನೆಯ ಹೊಸ ಶಕ್ತಿಗಳನ್ನು ಹರಿಯಬಿಟ್ಟಿತು. ಇದರ ಎದುರು ಸಾಮ್ರಾಜ್ಯಶಾಹಿ ನಿಲ್ಲದಾಯಿತು.

ಅಕ್ಟೋಬರ್ ಕ್ರಾಂತಿ ತನ್ನ ಜನಗಳಿಗೆ ಕೆಲಸದ ಹಕ್ಕು, ಶಿಕ್ಷಣದ ಹಕ್ಕು, ಆರೋಗ್ಯದ ಹಕ್ಕು, ವಸತಿಯ ಹಕ್ಕು ಹಾಗೂ ಇತರ ಹಲವು ಸಾಮಾಜಿಕ ಹಕ್ಕುಗಳ ಭರವಸೆ ಒದಗಿಸುವಲ್ಲಿ ಯಶಸ್ವಿಯಾಗಿದೆ. ಯಾವುದೇ ಬಂಡವಾಳಶಾಹೀ ದೇಶಕ್ಕೆ ಸಾಧ್ಯವಾಗದ ಸಾಧನೆಯಿದು.

ಬಂಡವಾಳಶಾಹೀ ವ್ಯವಸ್ಥೆಗೆ ಸಾಧ್ಯವಾಗದ ಸಾಧನೆ


ಶಾಂತಿ ಹೋರಾಟದಲ್ಲಿ ಕಳೆದ ನಾಲ್ಕೂವರೆ ದಶಕಗಳಲ್ಲಿ ದೊಡ್ಡ ಯುದ್ಧವೊಂದು ನಡೆದಿಲ್ಲವಾದರೆ ಅದಕ್ಕೆ ಕಾರಣ ಇಂತಹದೊಂದು ಯುದ್ಧ ಸಿಡಿಯದಂತೆ ತಡೆಯುವಲ್ಲಿ ಸೋವಿಯತ್ ಒಕ್ಕೂಟ ವಹಿಸಿದ ದೊಡ್ಡ ಪಾತ್ರ.

ಅಕ್ಟೋಬರ್ ಕ್ರಾಂತಿ ತನ್ನ ಜನಗಳಿಗೆ ಕೆಲಸದ ಹಕ್ಕು, ಶಿಕ್ಷಣದ ಹಕ್ಕು, ಆರೋಗ್ಯದ ಹಕ್ಕು ವಸತಿಯ ಹಕ್ಕು ಹಾಗೂ ಇತರ ಹಲವು ಸಾಮಾಜಿಕ ಹಕ್ಕುಗಳ ಭರವಸೆ ಒದಗಿಸುವಲ್ಲಿ ಯಶಸ್ವಿಯಾಗಿದೆ. ಯಾವುದೇ ಬಂಡವಾಳಶಾಹೀ ದೇಶಕ್ಕೆ ಸಾಧ್ಯವಾಗದ ಸಾಧನೆಯಿದು. ಬಂಡವಾಳಶಾಹೀ ದೇಶಗಳಲ್ಲಿ ಇದೆಯೆನ್ನಲಾಗುವ ಸಾಮಾಜಿಕ ಭದ್ರತಾ ಕ್ರಮಗಳು ಕೂಡಾ ಅಕ್ಟೋಬರ್ ಕ್ರಾಂತಿಯ ಪ್ರಭಾವದಿಂದಾಗಿ ಅವರು ಜ್ಯಾರಿಗೆ ತರಬೇಕಾಗಿ ಬಂದ ಕ್ರಮಗಳು.

ಸಾಮ್ರಾಜ್ಯಶಾಹಿ ಧಾಳಿಗಳನ್ನು ತಾಳಿಕೊಳ್ಳಲಾಗದೆ ಈಗ ಹಲವು ಕಮ್ಯುನಿಸ್ಟ್ ಪಕ್ಷಗಳು ರಕ್ಷಣಾತ್ಮಕ ನಿಲುವು ತಳೆದಿದ್ದರೂ, ತಾವು ಈಗ ಆರಿಸಿಕೊಂಡಿರುವ ದಾರಿ ಸ್ವಯಂ ವಿನಾಶದ ದಾರಿ, ಮೊದಲ ಮಹಾಯುದ್ಧದ ವೇಳೆಗೆ ಯುರೋಪ್‌ನಲ್ಲಿ ಸಾಮಾಜಿಕ ಪ್ರಜಾಪ್ರಭುತ್ವ ಪಕ್ಷಗಳು ಓಡಿದ ದಾರಿ ಎಂದು ಬೇಗನೇ ಅವಕ್ಕೆ ತಿಳಿಯಲಿದೆ.

ಅಕ್ಟೋಬರ್ ಕ್ರಾಂತಿಯನ್ನು ಚರ್ಚಿಸುವಾಗ ನಾವು ಕಾರ್ಮಿಕ ವರ್ಗದ ಕ್ರಾಂತಿಯಲ್ಲಿ ಅಡಕವಾಗಿರುವ ಮೂಲಭೂತ ನೀತಿಗಳ ಬಗ್ಗೆ ಮಾತನಾಡುತ್ತೇವೆ. ಇದರರ್ಥ ಕ್ರಾಂತಿ ನಡೆಸುವಾಗ ಆಯಾಯ ದೇಶಗಳಲ್ಲಿನ ನಿರ್ದಿಷ್ಟ ಸನ್ನಿವೇಶಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕಿಲ್ಲ ಎಂದು ಅರ್ಥವಲ್ಲ. ಈ ಬಗ್ಗೆ ಲೆನಿನ್ ಮತ್ತೆ ಮತ್ತೆ ಎಚ್ಚರಿಸಿದ್ದಾರೆ. ವಾಸ್ತವವಾಗಿ ಅವರು ಕೂಡಾ ರಶ್ಯಾದಲ್ಲಿ ಕ್ರಾಂತಿ ನಡೆಸುವಾಗ ಅಲ್ಲಿನ ಸನ್ನಿವಶಕ್ಕೆ ಸರಿಹೊಂದುವಂತೆ ಬದಲಾವಣೆಗಳನ್ನು ಮಾಡುತ್ತಲೇ ಇದ್ದರು. ಅವರ 'ಹೊಸ ಆರ್ಥಿಕ ನೀತಿ' ಇದಕ್ಕೊಂದು ಉದಾಹರಣೆ ನಮ್ಮಂತಹ ದೇಶಗಳಿಗೆ ಇದು ಮಹತ್ವದ ಸಂಗತಿ. ಏಕೆಂದರೆ ಇಲ್ಲಿ ಇನ್ನೂ ಬಹುಪಾಲು ಜನ ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ. ಅವರ ಆಸ್ತಿಯ ಭಾವನೆಗಳು ಇನ್ನೂ ಗಟ್ಟಿಯಾಗಿ ಉಳಿದಿವೆ. ಸಮಾಜವಾದದಲ್ಲಿನ ವಿಕೃತಿಗಳು, ವಿಫಲತೆಗಳಿಂದಲೂ ನಾವು ಪಾಠ ಕಲಿಯಬೇಕು. ಸಮಾಜವಾದ ಕಟ್ಟುವ ಕೆಲಸ ಒಂಟಿ ದಿಕ್ಕಿನ ಪ್ರವಾಹವಲ್ಲ. ಪ್ರತಿಯೊಂದು ದೇಶದ ನಿರ್ದಿಷ್ಟ ಸನ್ನಿವೇಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಇದೊಂದು ದೀರ್ಘ ಪ್ರಕ್ರಿಯೆ.


ಸಾಮಾಜಿಕ ಪರಿವರ್ತನೆಗಾಗಿ, ಆ ಮೂಲಕ ಸಾಮಾಜಿಕ ಉದ್ಧಾರಕ್ಕಾಗಿ, ಮನುಷ್ಯನಿಂದ ಮನುಷ್ಯನ, ದೇಶದಿಂದ ದೇಶದ ಶೋಷಣೆ ಕೊನೆಗೊಳಿಸುವುದಕ್ಕಾಗಿ ನಡೆಸುವ ಹೋರಾಟದಲ್ಲಿ ಅಕ್ಟೋಬರ್ ಕ್ರಾಂತಿ, ವಿಶ್ವಾದ್ಯಂತ ಕಾರ್ಮಿಕ ವರ್ಗಕ್ಕೆ ದುಡಿಯುವ ರೈತಾಪಿ ವರ್ಗಗಳಿಗೆ ಹಾಗೂ ಇತರ ದುಡಿಯುವ ಜನಗಳಿಗೆ ಮುಂದೆಯೂ ಸ್ಫೂರ್ತಿ ತುಂಬುತ್ತಿರುತ್ತದೆ. ಢ.



ಕಾರ್ಮಿಕ ವರ್ಗದ ಕ್ರಾಂತಿಯ ಅಂತಿಮ ನಿರ್ಣಾಯಕ ಧಾಳಿ
- ಚಳಿಗಾಲದ ಅರಮನೆಗೆ ನುಗ್ಗುತ್ತಿರುವ ಕ್ರಾಂತಿ ಶಕ್ತಿಗಳು

ಅಕ್ಟೋಬರ್ ಕ್ರಾಂತಿ ಏಕೆ? ಹೇಗೆ?

- ಪಿ. ರಾಮಚಂದ್ರನ್



ಕಳೆದ ಎಪ್ಪತ್ತೈದು ವರ್ಷಗಳಲ್ಲಿ ವಿಶ್ವದ ಇತಿಹಾಸದ ಮೇಲೆ ಪ್ರಭಾವ ಬೀರಿರುವ ಐತಿಹಾಸಿಕ ಮಹತ್ವಹೊಂದಿದ ಅಕ್ಟೋಬರ್ ಕ್ರಾಂತಿ. ಇದಲ್ಲದೆ 1917ರ ಎರಡು ಕ್ರಾಂತಿಗಳ ಅನುಭವದ ಅಧ್ಯಯನ ಸಮಾಜವಾದದ ಹೋರಾಟದಲ್ಲಿ ಆಸಕ್ತಿಯಿರುವವರಿಗೆಲ್ಲಾ ಪ್ರಯೋಜನಕಾರಿ. ಆದ್ದರಿಂದ ಈ ಕ್ರಾಂತಿಯ ಹಿನ್ನೆಲೆ ಏನು, ಅದು ಏಕೆ ನಡೆಯಿತು, ಹೇಗೆ ನಡೆಯಿತು ಎಂದು ಈ ಲೇಖನದಲ್ಲಿ ಕಾಂ. ಪಿ. ರಾಮಚಂದ್ರನ್ ಪರಿಶೀಲಿಸಿದ್ದಾರೆ.

ಈ ಕ್ರಾಂತಿ ಇತಿಹಾಸದ ದಾರಿತಪ್ಪಿದ ಒಂದು ಘಟನೆಯೆಂದೋ, ಲೆನಿನ್‌ರಂತಹ ದುರುಳ ವ್ಯಕ್ತಿಗಳ ದುಷ್ಟ ಪಿತೂರಿಯೆಂದೋ ಹೇಳುವವರಿದ್ದಾರೆ. ಗೊರ್ಬಚೆವ್ ಮಾರ್ಕ್ಸ್‌ವಾದದ ಮೇಲೆ ಧಾಳಿ ಹರಿಯಬಿಟ್ಟ ಮೇಲೆ ರಶ್ಯನ್‌ಕ್ರಾಂತಿಯ ಊರ್ಜಿತತೆಯನ್ನೆ ಪ್ರಶ್ನಿಸುವ ಸಂದೇಹವಾದಿಗಳು ಬಹಳ ಕಾಣಬರುತ್ತಿದ್ದಾರೆ.

ಮೊದಲ ಮಹಾಯುದ್ಧ ಸೃಷ್ಟಿಸಿದ ಪ್ರಕ್ಷುಬ್ಧ ಸನ್ನಿವೇಶದ ಸಂದರ್ಭದಲ್ಲಿ ರಷ್ಯಾದೊಳಗೆ ಮೂಡುತ್ತಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯ ವೈರುಧ್ಯಗಳ ಸ್ಫೋಟದ ಫಲವೇ ರಶ್ಯನ್ ಕ್ರಾಂತಿ. ಚರಿತ್ರೆ ಈ ಕ್ರಾಂತಿಯಾಗುವುದನ್ನೇ ಕಾಯುತ್ತಿದ್ದಂತಿತ್ತು.

ಮಾರ್ಕ್ಸ್-ಎಂಗೆಲ್ಸ್ ಮುಂಗಂಡಿದ್ದರು

ವೈಜ್ಞಾನಿಕ ಸಮಾಜವಾದದ ವಿದ್ವಾಂಸರು 19ನೇ ಶತಮಾನದ ಕೊನೆಯ ವರ್ಷಗಳಲ್ಲಿ ಮುಂದಿನ ಕ್ರಾಂತಿ ಜರ್ಮನಿಯಲ್ಲಲ್ಲ ರಷ್ಯಾದಲ್ಲಿ ಭುಗಿಲೆನ್ನುತ್ತದೆ ಎಂದು ಭವಿಷ್ಯ ನುಡಿದಿದ್ದರು. 1877ರಲ್ಲಿ ಮಾರ್ಕ್ಸ್‌ರವರು ಸೋರ್ಜ್‌ಗೆ ಬರೆದ ಪತ್ರದಲ್ಲಿ *"ರಷ್ಯಾ ಬಹಳ ದಿನಗಳಿಂದ ಒಂದು ಉತ್ಕ್ರಾಂತಿಯ ಹೊಸ್ತಿಲಲ್ಲಿ ನಿಂತಿದೆ. ಉತ್ಕ್ರಾಂತಿಯ ಎಲ್ಲಾ ಅಂಶಗಳೂ ಸಿದ್ಧವಾಗಿವೆ. ರಶ್ಯನ್ ಸಮಾಜದ ಎಲ್ಲಾ ವಿಭಾಗಗಳು ಆರ್ಥಿಕವಾಗಿ ನೈತಿಕವಾಗಿ, ಬೌದ್ಧಿಕವಾಗಿ ಸಂಪೂರ್ಣ ವಿಘಟನೆ ಹೊಂದುತ್ತಿವೆ. ಈ ಬಾರಿ ಕ್ರಾಂತಿ ಪೂರ್ವದಿಂದ, ಇದುವರೆಗೆ ಪ್ರತಿಕ್ರಾಂತಿಯ ಕೋಟೆಯಾಗಿರುವ, ಪ್ರತಿಕ್ರಾಂತಿಯ ಮೀಸಲಿಟ್ಟ ಸೇನೆಯಾಗಿರುವ ಪೂರ್ವದಿಂದ ಆರಂಭವಾಗುತ್ತದೆ"* ಎಂದಿದ್ದರು.

ಎಂಗೆಲ್ಸ್‌ಸ್ಜಾಲುಸಿಶ್‌ರವರಿಗೆ ಬರೆದ ಪತ್ರದಲ್ಲಿ *"ನನ್ನ ಮಟ್ಟಿಗೆ ಅತ್ಯಂತ ಮಹತ್ವದ ವಿಷಯವೆಂದರೆ ಕ್ರಾಂತಿ ಭುಗಿಲೆನ್ನಲಿರುವ ರಶ್ಯಾವನ್ನು.... ಪರಿಸ್ಥಿತಿ ಅತ್ಯಂತ ಸಂಘರ್ಷದಿಂದ ಕೂಡಿರುವ, ಕ್ರಾಂತಿಕಾರಿ ಶಕ್ತಿಗಳು ಒಂದು ಆಕಸ್ಮಿಕ(?)ವನ್ನು ನಡೆಸುವ ಮಟ್ಟದವರೆಗೆ ಕ್ರೋಢೀಕರಣಗೊಂಡಿರುವ, ಜನಸಮೂಹಗಳ ಆರ್ಥಿಕ ಪರಿಸ್ಥಿತಿ ಪ್ರತಿದಿನ ಹೆಚ್ಚೆಚ್ಚು ಶೋಚನೀಯವಾಗುತ್ತಿರುವ ಆದಿಕಾಲದ ಕಮ್ಯುನಿಸಂನಿಂದ ಹಿಡಿದು ಆಧುನಿಕ ದೊಡ್ಡ ಪ್ರಮಾಣದ ಕೈಗಾರಿಕೆ ಹಾಗೂ ಉಚ್ಚ ಹಣಕಾಸಿನವರೆಗೆ ವಿಶ್ವ ಅಭಿವೃದ್ಧಿಯ ಪ್ರತಿಯೊಂದು ಘಟ್ಟವೂ ಪ್ರಾತಿನಿಧ್ಯ ಪಡೆದಿರುವ, ಎಲ್ಲಾ ವೈರುಧ್ಯಗಳನ್ನು ಹಿಂಸಾತ್ಮಕವಾಗಿ ಒತ್ತಿ ಇಟ್ಟಿರುವ ಅಭೂತ ಪೂರ್ವ ನಿರಂಕುಶ ಪ್ರಭುತ್ವ ಇರುವ ರಷ್ಯವನ್ನು ಮುಂದೆ ತಳ್ಳಬೇಕಾದ ಒಂದು ಅಂಶ ಬೇಕಾಗಿದೆಯೆಷ್ಟೆ... ಅಲ್ಲಿ ಒಂದು ಹೊಸ 1789 ಆರಂಭವಾಗುತ್ತದೆ"* ಎಂದಿದ್ದರು.

ಕ್ರಾಂತಿ ಮೊದಲಿನ ಝಾರ್‌ಶಾಹೀ ರಶ್ಯಾ

ಕ್ರಾಂತಿ ಮೊದಲಿನ ರಶ್ಯಾ ಸಾಕಷ್ಟು ಮೇಲ್ಮಟ್ಟದ ಬಂಡವಾಳಶಾಹೀ ಅಭಿವೃದ್ಧಿ ಪಡೆದಿದ್ದ ಒಂದು ದೇಶವಾಗಿತ್ತು. ಬ್ರಿಟನ್, ಜರ್ಮನಿ, ಫ್ರಾನ್ಸ್ ಹಾಗೂ ಅಮೇರಿಕಾ ನಂತರ ಅದು ಕೈಗಾರಿಕಾ ಜಗತ್ತಿನಲ್ಲಿ ಐದನೇ ಸ್ಥಾನ ಪಡೆದಿತ್ತು. ಬಹುಪಾಲು 200 ಗುತ್ತೇದಾರಿ ಸಂಘಗಳು ಕೈಗಾರಿಕೆಗಳ

ಮೊದಲ ಮಹಾಯುದ್ಧ ಸೃಷ್ಟಿಸಿದ ಪ್ರಕ್ಷುಬ್ಧ ಸನ್ನಿವೇಶದ ಸಂದರ್ಭದಲ್ಲಿ ರಷ್ಯಾದೊಳಗೆ ಮೂಡುತ್ತಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯ ವೈರುಧ್ಯಗಳ ಸ್ಫೋಟದ ಫಲವೇ ರಶ್ಯನ್ ಕ್ರಾಂತಿ. ಚರಿತ್ರೆ ಈ ಕ್ರಾಂತಿಯಾಗುವುದನ್ನೇ ಕಾಯುತ್ತಿದ್ದಂತಿತ್ತು.

ಮೇಲೆ ಹತೋಟಿ ಹೊಂದಿದ್ದವು. ಕೆಲವು ಮಹತ್ವದ ಉದ್ದಿಮೆಗಳಲ್ಲಿ 52 ಶೇ. ವಿದೇಶಿ ಬಂಡವಾಳವಿತ್ತು ಎಂಬುದು ಗಮನಾರ್ಹ.

ಕಾರ್ಮಿಕವರ್ಗ ಜನಸಂಖ್ಯೆಯಲ್ಲಿ 20ಶೇ. ಇತ್ತು. 1917ರಲ್ಲಿದ್ದ ಕಾರ್ಮಿಕರ ಸಂಖ್ಯೆ ಸುಮಾರು 2ಕೋಟಿ. ಇವರಲ್ಲಿ 3.5. ಲಕ್ಷ ದೊಡ್ಡ ಪ್ರಮಾಣದ ಕೈಗಾರಿಕೆಗಳಲ್ಲಿದ್ದರು. ನಗರಗಳಲ್ಲಿ ಹಾಗೂ ಸುತ್ತಮುತ್ತ ದೊಡ್ಡ ಕೈಗಾರಿಕೆಗಳ ಕೇಂದ್ರೀಕರಣ ಒಂದು ಮುಖ್ಯ ಅಂಶವಾಗಿತ್ತು 500 ಕಾರ್ಮಿಕರಿಗಿಂತಲೂ ಹೆಚ್ಚಿರುವ ಕಾರ್ಖಾನೆಗಳಲ್ಲೇ ದೇಶದ 60ಶೇ. ಕಾರ್ಮಿಕರು ದುಡಿಯುತ್ತಿದ್ದರು. ಕಾರ್ಮಿಕವರ್ಗದ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಪ್ರಾಥಮಿಕ ಕಾರ್ಮಿಕ ಸಂಘಟನೆಯ ಹಕ್ಕುಗಳೂ ಇಲ್ಲದೆ ಅಲ್ಪ ಕೂಲಿಗಾಗಿ ಗಂಟೆಗಟ್ಟಲೇ ಕೆಲಸಮಾಡಬೇಕಾಗಿದ್ದ ಅದು ಶೋಷಿತ ವಿಭಾಗವಾಗಿತ್ತು. ಈ ವರ್ಗದ ಬಹುಪಾಲು ಮಂದಿ ಸಂಘಟಿತರಾಗಿದ್ದರು, ರಾಜಕೀಯ ಚಟುವಟಿಕೆ ಈ ವರ್ಗದ ವಿಶೇಷ ಲಕ್ಷಣವಾಗಿತ್ತು.

ಗ್ರಾಮೀಣ ಪ್ರದೇಶಗಳಲ್ಲಿ ಕಾಣಬರುತ್ತಿದ್ದುದು ಊಳಿಗಮಾನ್ಯ ಹಾಗೂ ಅರೆ ಊಳಿಗಮಾನ್ಯ ಅವನತಿ. ರೈತ ವರ್ಗದ ನಿರ್ದಯ ಶೋಷಣೆ ನಡೆಯುತ್ತಿತ್ತು. ಜೀತಗಾರಿಕೆ ವ್ಯಾಪಕವಾಗಿತ್ತು. ಎಂಗೆಲ್ಸ್ ಗ್ರಾಮೀಣ ಪರಿಸ್ಥಿತಿಯನ್ನು ಹೀಗೆ ವರ್ಣಿಸಿದ್ದಾರೆ - *"ರಷ್ಯಾಕ್ಕೆ ಅತ್ಯಂತ ಅಗತ್ಯವಾದ(ಮತ್ತೆ ಭೋಗ್ಯ ಪಡೆಯುವ ಇತ್ಯರ್ಥದಿಂದಾ) ಕೃಷಿ ಉತ್ಪಾದನೆಯಿತಿ 1861ರ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ದೊಡ್ಡ ಭೂಮಾಲಕರಿಗೆ ಸಾಕಷ್ಟು ಕೂಲಿಯಾಳುಗಳು ಸಿಗುತ್ತಿಲ್ಲ, ರೈತರಿಗೆ ಸಾಕಷ್ಟು ಭೂಮಿಯಿಲ್ಲ, ತೆರಿಗೆಗಳು ಹಾಗೂ ಲೇವಾದೇವಿಗಾರರಿಂದ ಶೋಷಣೆಗೊಳಗಾಗಿದ್ದಾರೆ, ಕೃಷಿ ಇಳುವರಿ ವರ್ಷದಿಂದ ವರ್ಷ ಇಳಿಯುತ್ತಾ ಬಂದಿದೆ."* ಉದ್ದಿಮೆಗಳ ಕಾರ್ಮಿಕರು ಹಾಗೂ ಹಳ್ಳಿಗಳ ಅರೆ ಕಾರ್ಮಿಕರು ಹಾಗೂ ಸೇರಿ ಜನಸಂಖ್ಯೆಯ ಒಟ್ಟು 64ಶೇ. ಆಗುತ್ತಿತ್ತು.

ಝಾರ್‌ಶಾಹಿ ಪ್ರಭುತ್ವ ನಿರಂಕುಶಪ್ರಭುತ್ವದ ಇನ್ನೊಂದು ಹೆಸರು. ಜನಗಳಿಗೆ ಯಾವುದೇ ಪ್ರಜಾಪ್ರಭುತ್ವ ಹಕ್ಕುಗಳಿರಲಿಲ್ಲ. ಅಹಂಕಾರೀ ಪೋಲೀಸರು ಜನಗಳ ಮೇಲೆ ಸವಾರಿ ಮಾಡುತ್ತಿದ್ದರು. ವಿರೋಧದ ದನಿಗಳನ್ನು ಒಂದೂ ಬಿಡದೆ ಹತ್ತಿಕ್ಕುತ್ತಿದ್ದರು. ಕ್ರಾಂತಿಪೂರ್ವದ ರಶ್ಯಾದ ಪರಿಸ್ಥಿತಿಯನ್ನು ಎಂಗೆಲ್ಸ್ ಹೀಗೆ ವರ್ಣಿಸಿದ್ದಾರೆ. *"ರಷ್ಯಾ ಕ್ರಾಂತಿಯ ಹೊಸ್ತಿಲಲ್ಲಿದೆ ಎಂಬುದರಲ್ಲಿ ಸಂಶಯವಿಲ್ಲ. ಹಣಕಾಸು ಅತ್ಯಂತ ಅವ್ಯವಸ್ಥಿತವಾಗಿದೆ. ಹೆಚ್ಚುತ್ತಿರುವ ತೆರಿಗೆಗಳಿಂದಲೂ ಪ್ರಯೋಜನವಿಲ್ಲದಾಗಿದೆ. ಪ್ರಭುತ್ವದ ಹಳೆಯ ಸಾಲಗಳ ಬಡ್ಡಿಗಳನ್ನೆಲ್ಲಾ ಹೊಸ ಸಾಲದ ಮೂಲಕ ತೆರಲಾಗುತ್ತಿದೆ. ಪ್ರತಿ ಹೊಸ ಸಾಲ ಇನ್ನಷ್ಟು ಸಂಕಷ್ಟ ತರುತ್ತಿದೆ. ಆಡಳಿತ ಅಡಿಯಿಂದ ಮುಡಿಯವರೆಗೂ ಭ್ರಷ್ಟವಾಗಿದೆ. ಅಧಿಕಾರಿಗಳು ಸಂಬಳಕ್ಕಿಂತ ಹೆಚ್ಚಾಗಿ ಕಳ್ಳತನ, ಲಂಚ, ಸುಲಿಗೆಗಳ ಮೇಲೆಯೇ ಅವಲಂಬಿಸಿದ್ದಾರೆ."*

"ದೇಶಗಳ ಸೆರೆಮನೆ"

ಝಾರ್‌ಶಾಹಿ ರಶ್ಯಾ ಹಲವಾರು ದೇಶಿ ಗುಂಪುಗಳ ಒಂದು ದೊಡ್ಡ ಸೆರೆಮನೆ ಎಂದು ಪರಿಗಣಿಸಲಾಗಿತ್ತು.52ಶೇ. ಜನಸಂಖ್ಯೆ ಶೋಷಣೆಗೊಳಗಾದ ರಷ್ಯನೇತರರದ್ದಾಗಿತ್ತು. ಇದರಿಂದಾಗಿ ರಾಷ್ಟ್ರೀಯ ದಮನ ಎಲ್ಲಾ ರೀತಿಯಲ್ಲೂ ರಶ್ಯಾದೊಳಗಿನ ಸಂಘರ್ಷಗಳನ್ನು ತೀವ್ರಗೊಳಿಸಿತ್ತು. ದೇಶೀಯತೆ ಪ್ರಶ್ನೆಯ ಮೇಲಿನ ಘರ್ಷಣೆಗಳು ಸ್ಫೋಟಕ ಸ್ಥಿತಿ ತಲುಪಿದ್ದವು ರಶ್ಯನ್ ಸಂಕುಚಿತವಾ-

ಝಾರ್‌ಶಾಹಿ ಪ್ರಭುತ್ವ ನಿರಂಕುಶಪ್ರಭುತ್ವದ ಇನ್ನೊಂದು ಹೆಸರು. ಜನಗಳಿಗೆ ಯಾವುದೇ ಪ್ರಜಾಪ್ರಭುತ್ವ ಹಕ್ಕುಗಳಿರಲಿಲ್ಲ. ಅಹಂಕಾರೀ ಪೋಲೀಸರು ಜನಗಳ ಮೇಲೆ ಸವಾರಿ ಮಾಡುತ್ತಿದ್ದರು. ವಿರೋಧದ ದನಿಗಳನ್ನು ಒಂದೂ ಬಿಡದೆ ಹತ್ತಿಕ್ಕುತ್ತಿದ್ದರು.

ದದ ಬೂದು ಕಾಲುಗಳಡಿ ನಲುಗಿದ್ದ ವಿವಿಧ ದೇಶೀ ಗುಂಪುಗಳ ಜನಗಳು ಕ್ರೋಧ, ದ್ವೇಷದಿಂದ ತಪ್ತರಾಗಿದ್ದರು.

ಹೀಗೆ ರಷ್ಯನ್ ಸಮಾಜದೊಳಗೆ ಒಂದು ಕ್ರಾಂತಿಗೆ ಅಗತ್ಯವಾದ ವಸ್ತುಸ್ಥಿತಿ ಪಕ್ವಗೊಳ್ಳುತ್ತಿತ್ತು. 20ನೇ ಶತಮಾನದ ಆರಂಭದ ವೇಳೆಗೆ ರಶ್ಯಾ ಬೃಹತ್ ರೈತ ಬಂಡಾಯಗಳ ಕಾರ್ಮಿಕ ವರ್ಗದ ಸಾಮೂಹಿಕ ಕಾರ್ಯಾಚರಣೆಗಳ, ದಮನಕ್ಕೊಳಗಾಗಿದ್ದ ದೇಶೀ ಗುಂಪುಗಳ ಹೋರಾಟಗಳ, ಪ್ರಜಾಪ್ರಭುತ್ವವಾದಿಗಳ ಪ್ರತಿಭಟನಾ ಆಂದೋಲನಗಳ ತಾಣವಾಗಿತ್ತು.

*1905*ರ ಕ್ರಾಂತಿಯ ಪಾಠಗಳು

ಸಾಮೂಹಿಕ ರಾಜಕೀಯ ಮುಷ್ಕರಗಳು ಬೀದಿಕಾಳಗ, ಸೇನೆ,ಹಾಗೂ ನಾವಿಕ ಪಡೆಗಳಲ್ಲಿ ಬಂಡಾಯ, ರೈತರ ಉತ್ಕ್ರಾಂತಿ, ಪ್ರಭುತ್ವಶಕ್ತಿಯ ಕುಸಿತ ಇದು 1905ರ ಕ್ರಾಂತಿಯ ವಿಶಿಷ್ಟ ಲಕ್ಷಣಗಳಾಗಿದ್ದವು. ಇವು 1917ರ ಕ್ರಾಂತಿಯ ಪೂರ್ವಾಭ್ಯಾಸದಂತೆ ಕಂಡುಬರುತ್ತಿದ್ದವು. ಲೆನಿನ್ "1905ರ ಪಾಠಗಳು" ಎಂಬ ಒಂದು ಚಿಂತನಾ ಪೂರ್ಣ ಅಧ್ಯಯನದಲ್ಲಿ ಈ ಕ್ರಾಂತಿಯ ಅನುಭವವನ್ನು ಹೀಗೆ ವಿಶ್ಲೇಷಿಸಿದ್ದಾರೆ- *"ಯುರೋಪಿನ ಸ್ಮಶಾನ ಮೌನದಿಂದ ಮೋಸಹೋಗಬಾರದು. ಯುರೋಪು ಕ್ರಾಂತಿಗರ್ಭಿತವಾಗಿದೆ. ಸಾಮ್ರಾಜ್ಯಶಾಹೀಯುದ್ಧದ ಭಯಾನಕತೆ, ಎಲ್ಲೆಡೆ ವಿಪರೀತ ಜೀವನವೆಚ್ಚ ತಂದ ಸಂಕಷ್ಟಗಳು ಒಂದು ಕ್ರಾಂತಿಕಾರಿ ಭಾವನೆ ಮೂಡಿಸಿವೆ. ಆಳುವ ವರ್ಗ, ಬೂರ್ಜ್ವಾ ವರ್ಗ ಹಾಗೂ ಅದರ ಅಡಿಯಾಳು ಸರಕಾರ ಹೆಚ್ಚೆಚ್ಚಾಗಿ ಮುಂದಿನ ದಾರಿಗಾಣದೆ ಕುರುಡುಗಲ್ಲಿಗಳಲ್ಲಿ ಅಲೆದಾಡುತ್ತಿವೆ. ಭಾರಿ ಉತ್ಪಾತಗಳಿಲ್ಲದೆ ಇವುಗಳಿಂದ ತಪ್ಪಿಸಿಕೊಳ್ಳುವುದು ಅವರಿಗೆ ಎಂದೂ ಸಾಧ್ಯವಿಲ್ಲ."*

ಲೆನಿನ್ ಈ ಸಾಲುಗಳನ್ನು ಫೆಬ್ರವರಿ 1917ರ ಕ್ರಾಂತಿಯ ಮೂರು ತಿಂಗಳ ಮೊದಲು ಬರೆಯುತ್ತಿದ್ದರು ಎಂಬುದೊಂದು ಅದ್ಭುತ.

ವೈರುಧ್ಯಗಳು ಉಲ್ಬಣಗೊಂಡವು

1905ರ ಕ್ರಾಂತಿಯ ಸೋಲಿನ ನಂತರ ಹಲವು ವರ್ಷಗಳ ಪ್ರತಿಗಾಮಿತನದ ಅವಧಿ ಕಂಡ ನಂತರವೇ ರಶ್ಯಾದೊಳಗೆ ಮೊದಲ ಮಹಾಯುದ್ಧ ಆರಂಭವಾದಾಗ ಹೊಸ ಆಂದೋಲನಗಳು ಕಂಡು ಬರಲಾರಂಭಿಸಿದವು. ರಶ್ಯಾ ಈ ಸಾಮ್ರಾಜ್ಯಶಾಹೀ ಯುದ್ಧವನ್ನು ಬ್ರಿಟನ್, ಫ್ರಾನ್ಸ್ ಹಾಗೂ ಅದರ ಮಿತ್ರ ದೇಶಗಳ ಪಕ್ಷದಲ್ಲಿ ಸೇರಿಕೊಂಡಿತು. ಈ ಯುದ್ಧ ಸಾಮ್ರಾಜ್ಯಶಾಹೀ ದೇಶಗಳ ನಡುವೆ ಸಂಘರ್ಷಗಳನ್ನು ಆಳಗೊಳಿಸಿತು. ರಶ್ಯಾಕ್ಕೆ ಸೋಲಿನ ಮೇಲೆ ಸೋಲಾಯಿತು. ಪರಿಣಾಮವಾಗಿ ದೇಶಾದ್ಯಂತ ತ್ವರಿತವಾಗಿ ನಿರುತ್ಸಾಹದ ಅಲೆಹಬ್ಬಿತು. ಇದು ಹೆಚ್ಚಾಗಿ ತಟ್ಟಿದ್ದು ಸಶಸ್ತ್ರಪಡೆಗಳನ್ನು. ಯುದ್ಧದಿಂದ ಸುಸ್ತಾಗಿ, ಶೋಚನೀಯ ಪರಿಸ್ಥಿತಿಯ ಬಾಳಿನಿಂದಾಗಿ ಸೈನಿಕರಲ್ಲಿ ಅಸಂತೃಪ್ತಿ ತುಳುಕುತ್ತಿತ್ತು. ಆಹಾರದ ಅಭಾವ, ಎಲ್ಲಾ ಅವಶ್ಯಕ ವಸ್ತುಗಳ ಅಭಾವ, ವಿಪರೀತ ಜೀವನವೆಚ್ಚ, ಭ್ರಷ್ಟಾಚಾರ, ದುರಾಡಳಿತ ಜನಗಳಲ್ಲಿ ವಿಪರೀತ ದ್ವೇಷ ತುಂಬಿತು. ನಾಗರಿಕ ಹಾಗೂ ಮಿಲಿಟರಿ ಆಡಳಿತವೆರಡೂ ಅಸ್ತವ್ಯಸ್ತ ಸ್ಥಿತಿಯಲ್ಲಿದ್ದವು. ಗ್ರಾಮೀಣ ಪ್ರದೇಶಗಳಲ್ಲಿ ರೈತರೂ ಭಾರೀ ಸಂಕಷ್ಟಗಳಿಗೊಳಗಾಗಿದ್ದರು. ಒಟ್ಟಿನಲ್ಲಿ, ಯುದ್ಧ ರಶ್ಯಾದ ಸಮಾಜದೊಳಗಿದ್ದ ಎಲ್ಲಾ ವೈರುಧ್ಯಗಳನ್ನು ಉಲ್ಬಣಗೊಳಿಸಿತ್ತು. ದೇಶ ಒಂದು ಕ್ರಾಂತಿಯ ಅವಧಿಯನ್ನು ಪ್ರವೇಶಿಸುತ್ತಿತ್ತು.

20ನೇ ಶತಮಾನದ ಆರಂಭದ ವೇಳೆಗೆ ರಶ್ಯಾ ಬೃಹತ್ ರೈತ ಬಂಡಾಯಗಳ ಕಾರ್ಮಿಕ ವರ್ಗದ ಸಾಮೂಹಿಕ ಕಾರ್ಯಾಚರಣೆಗಳ, ದಮನಕ್ಕೊಳಗಾಗಿದ್ದ ದೇಶೀ ಗುಂಪುಗಳ ಹೋರಾಟಗಳ, ಪ್ರಜಾಪ್ರಭುತ್ವವಾದಿಗಳ ಪ್ರತಿಭಟನಾ ಆಂದೋಲನಗಳ ತಾಣವಾಗಿತ್ತು.

ಬಹುಪಾಲು ಕಾರ್ಮಿಕರ ಸಮರ ಪ್ರವೇಶ

ಆದರೆ 1917ರ ಆರಂಭದ ಕ್ರಾಂತಿಕಾರಿ ಘಟನೆಗಳ ಒಂದು ಮಹತ್ವಪೂರ್ಣ ಅಂಶವೆಂದರೆ ಕಾರ್ಮಿಕ ವರ್ಗದ ಪಾತ್ರ. ಸಾಮೂಹಿಕ ರಾಜಕೀಯ ಸಾರ್ವತ್ರಿಕ ಮುಷ್ಕರಗಳು ಈ ಕ್ರಾಂತಿಕಾರೀ ಅಲೆಗೆ ಹೊಸ ಹುರುಪು ನೀಡಿದ್ದವು. ಪೆಟ್ರೋಗ್ರಾಡ್ ಒಂದರಲ್ಲೇ ಮೂರುಲಕ್ಷಕ್ಕೂ ಹೆಚ್ಚು ಕಾರ್ಮಿಕರು ಇವುಗಳಲ್ಲಿ ಭಾಗವಹಿಸಿದ್ದರು. ಮಾಸ್ಕೋದಲ್ಲಿ ಮತ್ತಿತ್ತರ ಕೈಗಾರಿಕಾ ನಗರಗಳಲ್ಲಿ ಕಾರ್ಮಿಕ ವರ್ಗದ ಸಾಮೂಹಿಕ ರಾಜಕೀಯ ಕಾರ್ಯಾಚರಣೆ ಒಂದು ಸಾಮಾನ್ಯ ಸುದ್ದಿಯಾಗಿ ಬಿಟ್ಟಿತ್ತು. ರಶ್ಯಾದ 50ಶೇ.ಕ್ಕಿಂತಲೂ ಹೆಚ್ಚು ಕಾರ್ಮಿಕರು ಸಮರವನ್ನು ಪ್ರವೇಶಿಸಿದ್ದರು.

ಗ್ರಾಮೀಣ ಪ್ರದೇಶಗಳಲ್ಲಿ ರೈತರೂ ಸ್ವಯಂ ಸ್ಫೂರ್ತಿಯಿಂದ ಭೂಮಾಲಿಕರ ವಿರುದ್ಧ ಬಂಡೆದ್ದರು, ಬಚ್ಚಿಟ್ಟ ಧಾನ್ಯಗಳನ್ನು ಹೊರಗೆಳೆದರು, ಪಾಳೆಯಗಾರೀ ಮಹಲುಗಳನ್ನು, ಮನೆ-ಗಳನ್ನು, ಭೂಮಾಲಿಕರ ಜಮೀನುಗಳನ್ನು ವಶಪಡಿಸಿಕೊಂಡರು.

ಸೇನೆಯಲ್ಲಿ ಬಂಡಾಯದ ಬಾವುಟ

ಆದರೆ ಕ್ರಾಂತಿಕಾರೀ ಭಾವೋದ್ವೇಗ ಅತೀ ಹೆಚ್ಚು ಕಂಡು ಬಂದದ್ದು ಸಶಸ್ತ್ರಪಡೆಗಳಲ್ಲಿ. ಸೈನ್ಯದ ಒಂದು ತುಕಡಿಯ ನಂತರ ಇನ್ನೊಂದು, ಒಂದು ಯುದ್ಧ ಹಡಗಿನ ನಂತರ ಇನ್ನೊಂದು ಹೀಗೆ ಪ್ರತಿ-ದಿನವೆಂಬಂತೆ ಬಂಡಾಯದ ಬಾವುಟ ಏರಲಾರಂಭಿಸಿತು. ಸಮರಶೀಲತೆ ತಾರಕಕ್ಕೇರುತ್ತಿತ್ತು. ಇದಕ್ಕೆ ಒಂದು ಉದಾಹರಣೆ ನೋಡಿ- ಫೆಬ್ರವರಿ 27,1917ರಂದು 67,700 ಸಶಸ್ತ್ರ ಪಡೆಯ ಸದಸ್ಯರು ಬಂಡೆದ್ದರು. ಮರುದಿನ ಫೆಬ್ರವರಿ 28ಕ್ಕೆ ಇದು 1,44,700ಕ್ಕೇರಿತು. ಎಲ್ಲೆಡೆ ಇದೇ ಕಥೆ.

ಒಟ್ಟಿನಲ್ಲಿ, ಕಾರ್ಮಿಕರ ರಾಜಕೀಯ ಸಾರ್ವತ್ರಿಕ ಮುಷ್ಕರ, ರೈತರ ಬಂಡಾಯ ಹಾಗೂ ಸಶಸ್ತ್ರ ಪಡೆಗಳ ಬಹುಮಂದಿ ಜನತೆಯ ಪಕ್ಷ ವಹಿಸಿದ್ದು ಫೆಬ್ರವರಿ ಕ್ರಾಂತಿಯ ವಿಜಯಕ್ಕೆ ಕಾರಣವಾಯಿತು. ಫೆಬ್ರವರಿ ಕ್ರಾಂತಿ ಝಾರ್‌ಶಾಹಿಯ ನಿರಂಕುಶ ಪ್ರಭುತ್ವವನ್ನು ಕೊನೆಗೊಳಿಸಿತು. ಆದರೆ ಆ ಘಟ್ಟದಲ್ಲಿ ವರ್ಗ ಬಲಾಬಲ ಹೇಗಿತ್ತೆಂದರೆ ಕೆರೆನ್ಸ್ಕಿ ನೇತೃತ್ವದಲ್ಲಿ ಬೂರ್ಜ್ವಾ ರಾಜಕೀಯ ಶಕ್ತಿಗಳು ಅಧಿಕಾರ ಗ್ರಹಣಮಾಡಿ ಸರಕಾರ ರಚಿಸಿದವು.

ಪರ್ಯಾಯ ಅಧಿಕಾರ

ಫೆಬ್ರವರಿ ನಂತರದ ಸನ್ನಿವೇಶದ ಒಂದು ಮಹತ್ವಪೂರ್ಣ ಅಂಶವೆಂದರೆ ರಾಜಧಾನಿಯಲ್ಲಿ ಬೂರ್ಜ್ವಾ ನೇತೃತ್ವದ ಸರಕಾರ ಬಂದರೂ ವಾಸ್ತವವಾಗಿ ದೇಶದ ಎಲ್ಲೆಡೆ ಅಧಿಕಾರದ ಸ್ವರೂಪ ಬೇರೆಯೇ ಆಗಿತ್ತು. ಇದನ್ನು 'ದ್ವಂದ್ವ ಅಧಿಕಾರ' ಎನ್ನಲಾಗುತ್ತಿದೆ. ಈ ಪರ್ಯಾಯ ಅಧಿಕಾರ ಸೋವಿ-ಯೆತ್‌ಗಳ ರಚನೆಯ ಮೂಲಕ ವ್ಯಕ್ತಗೊಂಡ ಜನಸಮೂಹಗಳ ಅಧಿಕಾರವಾಗಿತ್ತು. ಕಾರ್ಮಿಕರು ಕಾರ್ಖಾನೆಗಳಲ್ಲಿ ಸೋವಿಯೆತ್‌ಗಳನ್ನು ಚುನಾಯಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ರೈತರು ರೈತ ಸೋವಿಯೆತ್‌ಗಳನ್ನು ರಚಿಸಿಕೊಳ್ಳಲಾರಂಭಿಸಿದರು. *ಸೋವಿಯೆತ್‌ಗಳ ಸ್ಥಾಪನೆ ಜನಸಮೂಹ-ಗಳ ಕ್ರಾಂತಿಕಾರಿ ಮುತುವರ್ಜಿಯನ್ನು ಪ್ರತಿಬಿಂಬಿಸುತ್ತಿತ್ತು. ಲೆನಿನ್ ಸಾಮೂಹಿಕ ಕ್ರಾಂತಿಕಾರಿ ಚಟುವಟಿಕೆಗಳ*

> **ಕಾರ್ಮಿಕರ ರಾಜಕೀಯ ಸಾರ್ವತ್ರಿಕ ಮುಷ್ಕರ, ರೈತರ ಬಂಡಾಯ ಹಾಗೂ ಸಶಸ್ತ್ರ ಪಡೆಗಳ ಬಹುಮಂದಿ ಜನತೆಯ ಪಕ್ಷ ವಹಿಸಿದ್ದು ಫೆಬ್ರವರಿ ಕ್ರಾಂತಿಯ ವಿಜ-ಯಕ್ಕೆ ಕಾರಣವಾಯಿತು.**

ಅರ್ಧ ಯುದ್ಧ ಮುಗಿದಂತಾಗಿದೆ

-- ಬರ್ಟೋಲ್ಟ್ ಬ್ರೆಕ್ಟ್
ಅನು: ಉದಯ

ಫೆಬ್ರವರಿ ಕ್ರಾಂತಿ ಕೊನೆಗೊಂಡು
ಜನತೆಯ ಚಳುವಳಿ ಮುಗಿದಾಗ
ಯುದ್ಧವಿನ್ನೂ ಮುಗಿದಿರಲಿಲ್ಲ
ರೈತರಿಗೆ ಭೂಮಿಯಿರಲಿಲ್ಲ
ಕಾರ್ಮಿಕರು ಹಸಿದಿದ್ದರು
ಸೋವಿಯಟ್ಟು ಎಲ್ಲರಿಂದಲೂ
ಚುನಾಯಿಸಲ್ಪಟ್ಟಿದ್ದರೂ
ಪ್ರತಿನಿಧಿಸಿದ್ದು ಕೆಲವರನ್ನಷ್ಟೇ
ಎಲ್ಲವೂ ಹಿಂದಿನ ಹಾಗೇ ಇತ್ತು
ಬದಲಾವಣೆಯೇನೂ ಗೋಚರಿಸಲಿಲ್ಲ
ಬೋಲ್ಶೆವಿಕ್ಕರು ಸೋವಿಯಟುಗಳಲ್ಲಿ
ಅಪರಾಧಿಗಳಂತೆ ಅಲೆದಾಡುತ್ತಿದ್ದರು
ಏಕೆಂದರೆ ಅವರು
ಬಂದೂಕುಗಳನ್ನು
ಶ್ರಮ ಜೀವಿಗಳ ಶತ್ರುಗಳೆಡೆಗಾಗಿ
ಗುರಿಯಿಡಬೇಕೆಂದು ಒತ್ತಾಯಿಸುತ್ತಿದ್ದರು
ಆದ್ದರಿಂದಲೇ ಅವರಿಗೆ
ವಂಚಕರೆಂಬ ಡಕಾಯಿತರೆಂಬ
ಕ್ರಾಂತಿ ವಿರೋಧಿಗಳೆಂಬ
ಮುದ್ರೆಯೊತ್ತಲಾಗಿತ್ತು
ಅವರ ನಾಯಕ ಲೆನಿನ್ ಗೂಢಚಾರನೆಂದೂ
ನೆಲಮಾಳಿಗೆಯಲ್ಲಿ ಅವಿತಿರುವನೆಂದೂ
ಆಪಾದಿಸಲಾಯಿತು.



ಮೇ 1, 1917ರ ಒಂದು ಪೋಸ್ಟರ್

ಜನರು ಎತ್ತೆತ್ತಲೋ ನೋಡುತ್ತಿದ್ದರು
ಎಲ್ಲೆಡೆಯೂ ಮೌನವೇ ಆವರಿಸಿತ್ತು
ಯಾವ್ಯಾವುದೋ ಬಾವುಟಗಳ ಹಿಂದೆ
ಜನ ಸಮೂಹ ಧಾವಿಸುತ್ತಿತ್ತು
ಬೂರ್ಜ್ವಾ ಜನರಲ್‌ಗಳೂ ಮತ್ತು ವರ್ತಕರೂ
ಬೋಲ್ಶೆವಿಕ್ ಕ್ರಾಂತಿ ಅವಸಾನ ಹೊಂದಿತೋ
ಎನ್ನುವ ಮಟ್ಟಿಗೆ ತಾವೇ ಎಲ್ಲೆಡೆ
ಮೆರೆಯ ತೊಡಗಿದರು
ಬೋಲ್ಶೆವಿಕರು ಮಾತ್ರ
ತಮ್ಮ ಕೆಲಸ ತಾವು ಮಾಡುತ್ತಲೇ ಇದ್ದರು
ತುಳಿತಕ್ಕೊಳಗಾದವರ ಪರವಾಗಿ
ನವೋತ್ಸಾಹದಿಂದ ಹೋರಾಡುತ್ತಿದ್ದರು
ಹೀಗಿರುವಾಗ ಅವರೊಂದು ವಿಷಯ
ಗಮನಿಸಿದರು
ಸ್ಮೋಲ್ನಿಯ ಉಪಹಾರ ಗೃಹದ
ಪರಿಚಾರಕನೊಬ್ಬ
ಇತರರಿಗೆ ಒದಗಿಸುವುದಕ್ಕಿಂತ
ಉತ್ತಮವಾದ ಉಪಹಾರವನ್ನು
ಬೋಲ್ಶೆವಿಕ್ಕರಿಗೆ ಬಡಿಸುತ್ತಿದ್ದ
ತಮಗೆ ಇಲ್ಲೊಬ್ಬ ಹಿತೈಷಿಯಿರುವುದನ್ನು
ಬೋಲ್ಶೆವಿಕ್ಕರು ಕಂಡು ಕೊಂಡರು
ಇದೇ ರೀತಿ ಸ್ಮೋಲ್ನಿಯ ಜಾಡಿಸುವವರೂ
ಸಂದೇಶವಾಹಕರು, ಸೆಂಟ್ರಿಗಳು, ಎಲ್ಲರೂ
ತಮ್ಮತ್ತಲೇ ತುಯ್ಯತೊಡಗಿರುವುದನ್ನು
ಬೋಲ್ಶೆವಿಕರು ಅರಿತು ಕೊಂಡರು
ಆಗವರು ನಸುನಗುತ್ತಾ ಹೇಳಿದರು
'ಅರ್ಧ ಯುದ್ಧ ಮುಗಿದಂತಾಗಿದೆ'

ಈ ಅಂಶಕ್ಕೆ ಅತಿ ಹೆಚ್ಚು ಮಹತ್ವ ನೀಡಿದ್ದರು. ಹೀಗೆ ಅಸ್ತಿತ್ವಕ್ಕೆ ಬಂದ ದ್ವಂದ್ವ ಅಧಿಕಾರ ಭವಿಷ್ಯದ ಜನತೆಯ ರಾಜಕೀಯ ಅಧಿಕಾರದ ಮೂನ್ಸೂಚಿಯಾಗಿತ್ತು.

ಫೆಬ್ರವರಿ ಮತ್ತು ಅಕ್ಟೋಬರ್‌ಗಳ ನಡುವಿನ ಅವಧಿ ಸರಕಾರ ಹಾಗೂ ಆಳುವ ವರ್ಗಗಳ ವಿವಿಧ ವಿಭಾಗಗಳ ನಡುವೆ ಸತತ ಸಂಘರ್ಷ, ವೈಷಮ್ಯಗಳನ್ನು ಕಂಡ ಅವಧಿ. ಸರಕಾರ ನಡೆಸುವುದಾಗಲಿ, ತಮ್ಮ ಅಧಿಕಾರ ಜ್ಯಾರಿಗೊಳಿಸುವುದಾಗಲೀ ಆಳುವ ವರ್ಗಗಳಿಗೆ ಆಗಲಿಲ್ಲ. ಮತ್ತೆ ಮತ್ತೆ ರಾಜಕೀಯ ಬಿಕ್ಕಟ್ಟು ದೇಶವನ್ನು ಅಲುಗಾಡಿಸಿತು.

ಜನಗಳ ಮಟ್ಟಿಗೆ ಹೇಳುವುದಾದರೆ ಅವರು ಬಹುವಾಗಿ ಕಾದಿದ್ದ ಶಾಂತಿ ಮರಳಲೇ ಇಲ್ಲ. ಇದರಿಂದಾಗಿ ಯುದ್ಧ-ವಿರೋಧಿ ಭಾವನೆ ಹೆಚ್ಚುತ್ತಿತ್ತು. ಸಶಸ್ತ್ರ ಪಡೆಗಳು ಹತಾಶರಾಗಿ ಶಾಂತಿ ಯಾವಾಗ ಬಂದೀತೆಂದು ತವಕಪಡುತ್ತಿದರು, ನಗರಗಳಲ್ಲಿ, ಗ್ರಾಮಗಳಲ್ಲಿ ಹಸಿವು, ಸಂಕಷ್ಟ ತ್ವರಿತವಾಗಿ ಬೆಳೆಯಿತು. ಜನಗಳ ನಡುವೆ ಮತ್ತೆ ಸಿಟ್ಟು, ದ್ವೇಷದ ಭಾವೋದ್ರೇಕ ಕಾಣಲಾರಂಭಿಸಿತು. ಈಗ ಅದು ಹೊಸ ಆಳರಸರ ವಿರುದ್ಧ ಎರಗಿತ್ತು. ಇದರಿಂದ ಹೊಸದೊಂದು ಕ್ರಾಂತಿಕಾರಿ ಪ್ರಜ್ಞೆ ಎದ್ದಿತ್ತು. ಬೂರ್ಜ್ವಾ ರಾಜಕೀಯ ಪಕ್ಷಗಳು ವಿಪರೀತ ಗೊಂದಲದಲ್ಲಿದ್ದವು. ಮೆನ್ಶೆವಿಕ್‌ರು, 'ಸೋಶಲಿಸ್ಟ್ ಕ್ರಾಂತಿಕಾರಿ'ಗಳಂತಹ ಪುಟ್ಟ-ಬೂರ್ಜ್ವಾ ಪಕ್ಷಗಳು ಮುಂದೇನು ಎಂದು ದಾರಿಗಾಣದೆ ನಿಂತಿದ್ದವು.

ಅಕ್ಟೋಬರ್‌ನತ್ತ

ಬೊಲ್ಶೆವಿಕ್ ಪಕ್ಷ (ರಶ್ಯನ್ ಸಾಮಾಜಿಕ ಪ್ರಜಾಪ್ರಭುತ್ವ ಕಾರ್ಮಿಕ ಪಕ್ಷ) ಮಾತ್ರವೇ ಕ್ರಾಂತಿಯನ್ನು ಮುಂದಿನ ಸಮಾಜವಾದೀ ಕ್ರಾಂತಿಯ ಘಟ್ಟದತ್ತ ಮುಂದೊಯ್ಯುವ ದಾರಿಯೇನು ಎಂಬುದನ್ನು ಪೂರ್ಣ ಪ್ರಮಾಣದಲ್ಲಿ ದೇಶದ ಮುಂದಿಟ್ಟಿತು. ಬೊಲ್ಶೆವಿಕ್ ಪಕ್ಷ ಕಾರ್ಮಿಕವರ್ಗ ರೈತಾಪಿವರ್ಗದೊಡಗೂಡಿ ಕ್ರಾಂತಿಯನ್ನು ಮುಂದೊಯ್ಯುವ ಹೊಸ ವರ್ಗ ಸಂಯೋಜನೆಯ ಅಗತ್ಯದ ಬಗ್ಗೆ ಜನಗಳಿಗೆ ಶಿಕ್ಷಣ ನೀಡಿತು. ಪಕ್ಷ ಈ ಘೋಷಣೆಗಳನ್ನು ಅಮೂರ್ತ ಸೈದ್ಧಾಂತಿಕ ಪದಗಳಲ್ಲಿ ನೀಡದೆ ಜನಸಮೂಹಗಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ನೀಡಿತು. ಎಂಬುದನ್ನು ಗಮನಿಸಬೇಕು. "ಶಾಂತಿ, ಭೂಮಿ ಮತ್ತು ರೊಟ್ಟಿ" ಎಂಬ ಈ ಘೋಷಣೆಗಲು ದೇಶಾದ್ಯಂತ ಅಲೆಲೆಯಾಗಿ ಅನುರಣನಗೊಂಡವು. ಏಕೆಂದರೆ ಇವು ಜನಗಳ ವಾಸ್ತವಿಕವಾದ ಪ್ರಜ್ಞೆಯ ಪ್ರತಿಬಿಂಬವಾಗಿದ್ದವು.

ರೈತರೂ ದೊಡ್ಡ ಪ್ರಮಾಣದಲ್ಲಿ ಕ್ರಾಂತಿ ಪ್ರವಾಹದಲ್ಲಿ

ಫೆಬ್ರವರಿಯಿಂದ ಅಕ್ಟೋಬರ್ ನಡುವಿನ ಅವಧಿ ಎಲ್ಲಾ ರಂಗಗಳಲ್ಲೂ ಸಾಮೂಹಿಕ ಚಟುವಟಿಕೆಗಳು ಉತ್ತುಂಗಕ್ಕೇರಿದ್ದ ಸಮಯ. ಬೊಲ್ಶೆವಿಕ್ ಪಕ್ಷ ತೀವ್ರ ರಾಜಕೀಯ ಪ್ರಚಾರ ಮಾಡಿದ್ದಲ್ಲದೆ ಜನಸಮೂಹಗಳನ್ನು ಸಂಘಟಿಸಲು ಕೂಡಾ ಗಮನಾರ್ಹ ಪ್ರಯತ್ನ ಹಾಕಿತು. ಕಾರ್ಮಿಕಸಂಘಗಳ ಸದಸ್ಯ ಸಂಖ್ಯೆಯಲ್ಲಿ ಭಾರಿ ಹೆಚ್ಚಳ ಇದಕ್ಕೊಂದು ನಿದರ್ಶನ. ಅದು ಮಾರ್ಚ್ 1917 ರಲ್ಲಿ ಐದು ಲಕ್ಷವಿದ್ದದ್ದು ಅಕ್ಟೋಬರ್ ವೇಳೆಗೆ 30ಲಕ್ಷಕ್ಕೇರಿತು. ಕಾರ್ಮಿಕ ವರ್ಗ ಪ್ರತಿಯೊಂದು ರಾಜಕೀಯ ಪ್ರಶ್ನೆಯ ಮೇಲೂ ನಡೆಸಿದ ಪ್ರದರ್ಶನಗಳು ರಾಜಕೀಯ ಮುಷ್ಕರಗಳು ಜನಗಳ ಪ್ರಜ್ಞೆಯನ್ನು

ಬೊಲ್ಶೆವಿಕ್ ಪಕ್ಷ ಕಾರ್ಮಿಕವರ್ಗ ರೈತಾಪಿವರ್ಗದೊಡಗೂಡಿ ಕ್ರಾಂತಿಯನ್ನು ಮುಂದೊಯ್ಯುವ ಹೊಸ ವರ್ಗ ಸಂಯೋಜನೆಯ ಅಗತ್ಯದ ಬಗ್ಗೆ ಜನಗಳಿಗೆ ಶಿಕ್ಷಣ ನೀಡಿತು. ಪಕ್ಷ ಈ ಘೋಷಣೆಗಳನ್ನು ಅಮೂರ್ತ ಸೈದ್ಧಾಂತಿಕ ಪದಗಳಲ್ಲಿ ನೀಡದೆ ಜನಸಮೂಹಗಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ನೀಡಿತು. ಎಂಬುದನ್ನು ಗಮನಿಸಬೇಕು.

ಜಾಗೃತಗೊಳಿಸಿದವು. ಈ ಅವಧಿಯಲ್ಲಿ ಕಾರ್ಖಾನೆಗಳಲ್ಲಿ ಕಾರ್ಮಿಕರು ತಮ್ಮದೇ ಸಶಸ್ತ್ರ ಪಡೆಗಳನ್ನು ರಚಿಸಿಕೊಂಡರು. ಇದೊಂದು ಅತ್ಯಂತ ಮಹತ್ವದ ಬೆಳವಣಿಗೆ.

ಕಾರ್ಮಿಕ ವರ್ಗದ ಯಶಸ್ವಿನಿಂದ, ದೇಶದಲ್ಲೆದ್ದ ಕ್ರಾಂತಿಕಾರಿ ಭಾವನೆಗಳಿಂದ ಸ್ಫೂರ್ತಿ ಪಡೆದ ರೈತಾಪಿ ವರ್ಗ ಕೂಡ ದೊಡ್ಡ ಪ್ರಮಾಣದಲ್ಲಿ ಸಮರವನ್ನು ಪ್ರವೇಶಿಸಿತು. ದೇಶದ ಹಲವಡೆ ರೈತ ಬಂಡಾಯಗಳು ರೈತಾಪಿ ವರ್ಗವನ್ನು ಕ್ರಾಂತಿಕಾರಿ ಪ್ರವಾಹಕ್ಕೆ ತಂದವು. ಸೆಪ್ಟೆಂಬರ್-ಅಕ್ಟೋಬರ್ 1917ರಲ್ಲಿ ಭೂಮಾಲಕರು ಬಚ್ಚಿಟ್ಟ ಅಪಾರಧಾನ್ಯಗಳನ್ನು ಹೊರಗೆಳೆಯಲು, ಭೂಮಿಯನ್ನು ವಶಪಡಿಸಿಕೊಳ್ಳಲು 3500 ಸಶಸ್ತ್ರ ರೈತ ಕಾರ್ಯಾಚರಣೆಗಳು ನಡೆದವು.

ಪಕ್ಷದ ನೇತೃತ್ವ-
ಅಧಿಕಾರ ಗ್ರಹಣ

ಈ ಕ್ರಾಂತಿಕಾರಿ ಸನ್ನಿವೇಶದಲ್ಲಿ ಬೊಲ್ಶೆವಿಕ್ ಪಕ್ಷ ಜನಗಳಿಗೆ ನೇತೃತ್ವ ನೀಡುವ ಪ್ರಮುಖ ಸಂಘಟಿತ ಶಕ್ತಿಯಾಗಿ ಮೂಡಿಬಂತು. ಪಕ್ಷ ತ್ವರಿತವಾಗಿ ವಿಸ್ತಾರಗೊಂಡಿತು. ಸದಸ್ಯತ್ವ ಫೆಬ್ರವರಿ 1917ರಲ್ಲಿ 24,000 ಇದ್ದದ್ದು ಎಪ್ರಿಲ್ ವೇಳೆಗೆ 1,00,000ಕ್ಕೇರಿತು. ಕ್ರಾಂತಿಯ ಅತ್ಯಂತ ಸಮರಶೀಲ ಪ್ರಜ್ಞಾನಂತ ವ್ಯಕ್ತಿಗಳು ಪಕ್ಷ ಸೇರುತ್ತಿದ್ದರು.

ಕೆರೆನ್ಸ್ಕಿಯ ಸರಕಾರದ ಅಧಿಕಾರ ತ್ವರಿತವಾಗಿ ಕುಸಿಯುತ್ತಿದ್ದಂತೆ, ಅತ್ತ ಅತ್ಯಂತ ಪ್ರತಿಗಾಮಿ ಕ್ರಾಂತಿ ವಿರೋದಿಗಳು ಅಧಿಕಾರ ಕಿತ್ತುಕೊಳ್ಳಲು ಹವಣಿಸುತ್ತಿದ್ದಂತೆ ಬೊಲ್ಶೆವಿಕ್ ಪಕ್ಷ ಫೆಬ್ರವರಿ ಕ್ರಾಂತಿಯ ಸಾಧನೆಗಳನ್ನು ಉಳಿಸಿಕೊಳ್ಳುವ ಏಕೈಕ ದಾರಿಯೆಂದರೆ ಬಂಡಾಯದ ಮಾರ್ಗ ಹಿಡಿದು ಒಂದು ಸಮಾಜವಾದೀ ಕ್ರಾಂತಿಯತ್ತ ಮುನ್ನಡೆಯುವುದು ಎಂದು ಘೋಷಿಸಿತು.

ಆಗ ಲೆನಿನ್ ಅತ್ಯಂತ ದಕ್ಷತೆಯಿಂದ, ಸೂಕ್ಷ್ಮ ವಿವರಗಳೊಂದಿಗೆ ರೂಪಿಸಿ ಅದನ್ನು ಜಾರಿಗೊಳಿಸಿದ ಸಶಸ್ತ್ರ ಬಂಡಾಯದ ವರ್ಣನೆಗಳು ಅಸಂಖ್ಯ ಪುಸ್ತಕಗಳಲ್ಲಿ ದೊರಕುತ್ತವೆ.

ಬೊಲ್ಶೆವಿಕ್ ಪಕ್ಷದ ನೇತೃತ್ವದಲ್ಲಿ ಲೆನಿನ್‌ರ ಮಾರ್ಗದರ್ಶನದಲ್ಲಿ ನವೆಂಬರ್ 7 1917ರಂದು ಕಾರ್ಮಿಕ ವರ್ಗದ ಸಶಸ್ತ್ರ ಸ್ವಯಂ ಸೇವಕ ಪಡೆಗಳು ಬಂಡೆದ್ದ ಸಶಸ್ತ್ರ ಪಡೆಗಳ ತುಕಡಿಗಳೊಂದಿಗೆ ಅಧಿಕಾರ ಕಿತ್ತುಕೊಂಡರು. ಲೆನಿನ್ ವಿಶ್ವ ಇತಿಹಾಸದಲ್ಲಿ ಹೊಸದೊಂದು ಯುಗದ ಉದಯವನ್ನು ಘೋಷಿಸಿದರು.

ಅಮೂಲ್ಯ ಪಾಠಗಳು

ಅಕ್ಟೋಬರ್ ಕ್ರಾಂತಿ ಎಲ್ಲಾ ಕ್ರಾಂತಿಕಾರಿಗಳಿಗೆ ಅತ್ಯಂತ ಅಮೂಲ್ಯ ಪಾಠಗಳನ್ನು ನೀಡಿದೆ. ಯಾವುದೇ ಕ್ರಾಂತಿ ಯಶಸ್ವಿಗೆ ಅಗತ್ಯವಾದ ಅನುಕೂಲ ವಸ್ತುಸ್ಥಿತಿ ಹಾಗೂ ವ್ಯಕ್ತಿ ಸ್ಥಿತಿ ಈ ಕ್ರಾಂತಿಗೆ ದೊರೆತುದರಿಂದ ಅದು ಯಶಸ್ವಿಯಾಯಿತು. ಸಾಮ್ರಾಜ್ಯಶಾಹಿ ಶಕ್ತಿಗಳು ಪರಸ್ಪರ ಮರಣಾಂತಿಕ ಸೆಣಸಾಟದಲ್ಲಿದ್ದುದರಿಂದ, ನಾಲ್ಕು ವರ್ಷಗಳ ಯುದ್ಧದಲ್ಲಿ ದುರ್ಬಲವಾಗಿದ್ದರಿಂದ ಕ್ರಾಂತಿಯನ್ನು ಸೋಲಿಸಲು ನೇರ ಹಸ್ತಕ್ಷೇಪ ಮಾಡುವ ಸ್ಥಿತಿಯಲ್ಲಿರಲಿಲ್ಲ. ಝಾರ್‌ಶಾಹಿ ಕಟ್ಟಿ ಬೆಳೆಸಿದ ನಿರಂಕುಶ ಪ್ರಭುತ್ವದ ಕುಸಿತ ಕ್ರಾಂತಿಕಾರಿಗಳಿಗೆ ಬಹಳ ಅನುಕೂಲಕರವಾದ ಅಂಶ. ಕಾರ್ಮಿಕವರ್ಗ ಮತ್ತು


ರೈತಾಪಿವರ್ಗ ಅತ್ಯಂತ ಸಮರಧೀರ ಕಾರ್ಯಾಚರಣೆಗೆ ಇಳಿದದ್ದು ಕ್ರಾಂತಿಯ ಯಶಸ್ಸಿನಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿತು.

ಆದರೆ ಕ್ರಾಂತಿಯ ಯಶಸ್ಸಿನಲ್ಲಿ ಜೀವನ್ಮರಣ ಪಾತ್ರ ವಹಿಸಿದ್ದು ಸಶಸ್ತ್ರಪಡೆಗಳಲ್ಲಿನ ಬಂಡಾಯ. ಮಾರ್ಕ್ಸ್ ಹಾಗೂ ಏಂಗೆಲ್ಸ್ ಮೊದಲೇ ನಿರೀಕ್ಷಿಸಿದಂತೆ ಕ್ರಾಂತಿಯ ವಿಶಾಲ ಹರಹು ಸಶಸ್ತ್ರ ಪಡೆಗಳನ್ನು ತಟ್ಟಿತ್ತು. ಸೇನೆಯ ಒಂದು ವಿಭಾಗ ಕ್ರಾಂತಿಯ ಪಕ್ಷದಲ್ಲಿ ಬಂದುದರಿಂದ ಕ್ರಾಂತಿಕಾರಿಗಳ ಕೆಲಸಸ್ವಲ್ಪ ಸುಲಭವಾಯಿತು. ಇದರೊಂದಿಗೆ ಕಾರ್ಮಿಕರ ಸಶಸ್ತ್ರ ಸ್ವಯಂಸೇವಕ ಪಡೆ ಕೂಡಾ ಒಂದು ನಿರ್ಣಾಯಕ ಅಂಶವಾಯಿತು. ಸೇನೆ ಹಾಗೂ ನಾವಿಕ ಪಡೆಗಳ ಕ್ರಾಂತಿಕಾರಿ ವಿಭಾಗಗಳು ಮತ್ತು ಸಶಸ್ತ್ರ ಸ್ವಯಂಸೇವಕ ಪಡೆಗಳ ಸಂಯೋಜನೆ ಕ್ರಾಂತಿಯ ಯಶಸ್ಸಿಗೆ ಒಂದು ಶಕ್ತಿಶಾಲೀ ಅಂಶವಾಯಿತು.

ಹಿಂದೆ ಹೇಳಿದಂತೆ ಕಾರ್ಖಾನೆಗಳಲ್ಲಿ, ಗ್ರಾಮಗಳಲ್ಲಿ ಹಾಗೂ ಸಶಸ್ತ್ರ ಪಡೆಗಳಲ್ಲಿ ಚುನಾಯಿತ ಸೋವಿಯೆತ್‌ಗಳು ಮೂಡಿ ಬಂದದ್ದು ಜನ ಸಮೂಹಗಳ ಕ್ರಾಂತಿಕಾರಿ ಮುತವರ್ಜಿಯನ್ನು ಪ್ರತಿನಿಧಿಸಿತು. ಮೊದಲು ಹೋರಾಟದ ಅಂಗಗಳಾದ ಈ ಸೋವಿಯೆತ್‌ಗಳು ಮುಂದೆ ರಾಜಕೀಯ ಅಧಿಕಾರದ ಅಂಗಗಳಾದವು.

ಎಲ್ಲಕ್ಕೂ ಮಿಗಿಲಾಗಿ ಕಾರ್ಮಿಕವರ್ಗದ ಕ್ರಾಂತಿಕಾರಿಪಕ್ಷ ನೇತೃತ್ವವಹಿಸಿದ್ದರಿಂದ ಕ್ರಾಂತಿ ಯಶಸ್ವಿಯಾಯಿತು. ಅಸಂಖ್ಯ ಹೋರಾಟಗಳಲ್ಲಿ ಗಟ್ಟಿಯಾದ, ತನ್ನೆಡೆಗೆ ಎಲ್ಲಾ ವರ್ಗಗಳ ಅತ್ಯುತ್ತಮ ಕ್ರಾಂತಿಕಾರಿ ವ್ಯಕ್ತಿಗಳನ್ನು ಸೆಳೆದ ಪಕ್ಷ ಕ್ರಾಂತಿಯ ನೇತೃತ್ವವನ್ನು ವಹಿಸುವ ಸಾಮರ್ಥ್ಯ ಪಡೆದ ಪಕ್ಷವಾಗಿ ಮೂಡಿಬಂದಿತ್ತು. ಪಕ್ಷದ ಅಂಗಗಳ ವ್ಯಾಪಕ ಜಾಲದಿಂದಾಗಿ ಕ್ರಾಂತಿಕಾರಿ ಹೋರಾಟಗಳನ್ನು ಪ್ರವೇಶಿಸುವ ಜನ ಸಮೂಹಗಳಿಗೆ ನೇತೃತ್ವ ನೀಡಲು ಪಕ್ಷಕ್ಕೆ ಸಾಧ್ಯವಾಯಿತು. ಈ ಪಕ್ಷ ಮಾರ್ಕ್ಸ್‌ವಾದದ ಕ್ರಾಂತಿಕಾರಿ ಸಿದ್ಧಾಂತದ ಮೇಲೆ ದೃಢವಾಗಿ ನಿಂತುದರಿಂದ, ಕ್ರಾಂತಿಗೆ ಹಾನಿಕಾರಕವಾದ ಎಲ್ಲಾ ತಪ್ಪು ದಾರಿಗಳ ವಿರುದ್ಧ ರಾಜಕೀಯವಾಗಿ ಹೋರಾಡಿ ತನ್ನನ್ನು ಕ್ರೋಢಿಕರಿಸಿಕೊಂಡುದರಿಂದ ತನ್ನ ಚಾರಿತ್ರಿಕ ಪಾತ್ರವನ್ನು ಏರಿಸಲು ಸಾಧ್ಯವಾಯಿತು. ಲೆನಿನ್‌ರಂತಹ ಮಹಾನ್ ಧೀಮಂತ ನಾಯಕರಿದ್ದುರಿಂದ ಬೋಲ್ಶೆವಿಕ್ ಪಕ್ಷ ಯಶಸ್ವಿಯಾಯಿತು.

ಅನು : ಕೆ.ವಿ.






"ಯುದ್ಧದ ಪರಿಣಾಮದ ವಿರುದ್ಧ ಯುದ್ಧ ಸಾರುತ್ತೇವೆ" - ಒಂದು ಸೋವಿಯತ್ ಪೋಸ್ಟರ್

ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಆಧುನಿಕಗೊಳಿಸಿದ ಕಾರ್ಮಿಕ ವರ್ಗದ ಪ್ರಭುತ್ವ

- ಸೀತಾರಾಂ ಯೆಚೂರಿ

ಇಂದು ಅಂತರ್ರಾಷ್ಟ್ರೀಯ ರಾಜಕೀಯದಲ್ಲಿ ಭಾರತದಂತಹ ದೇಶಗಳಿಗೆ ಸ್ಥಾನಮಾನಗಳಿವೆಯಾದರೆ ಅದಕ್ಕೆ ಕಾರಣ ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಈಗ ಬೇರು ಬಿಟ್ಟಿರುವ ಆಧುನಿಕ ಪರಿಕಲ್ಪನೆಗಳು. ಈ ಪರಿಕಲ್ಪನೆಗಳ ಬೀಜ ಬಿತ್ತಿದ್ದು ಬೋಲ್ಶೆವಿಕ್ ಕ್ರಾಂತಿ ಸ್ಥಾಪಿಸಿದ ಕಾರ್ಮಿಕರ ಮೊದಲ ಪ್ರಭುತ್ವದ ವಿದೇಶಾಂಗ ನೀತಿಯೆಂಬುದು ಬಹಳ ಮಂದಿಯ ಅರಿವಿಗೆ ಬಂದಿರಲಿಕ್ಕಿಲ್ಲ.



ವಿವಿಧ ಘಟ್ಟಗಳಲ್ಲಿ ಸೋವಿಯೆತ್ ಪ್ರಭುತ್ವದ ವಿದೇಶಾಂಗ ನೀತಿ ಹೇಗೆ ಒಟ್ಟು ಮಾನವಕುಲದ ವಿಕಾಸದ ಪರವಾದ ಕಣ್ಣೋಟದ ಅಂಗವಾಗಿಯೂ ಮುಂದೆ ಬಂತು ಎಂದು ಈ ಲೇಖನದಲ್ಲಿ ಕಾಂ. ಸೀತಾರಾಂ ಯೆಚೂರಿ ಪರಿಶೀಲಿಸಿದ್ದಾರೆ. ಇದನ್ನು ಅವರು ಸೋವಿಯೆತ್ ವಿದೇಶಾಂಗ ನೀತಿ ಕುರಿತಾದ ಟಿಪ್ಪಣಿಗಳು ಎಂದಿದ್ದಾರೆ.

ಇಂದು ಕಮ್ಯುನಿಸಂ ವಿರುದ್ಧ ವಿಷಕಾರಿ ಅಪಪ್ರಚಾರದ ಮೂಲಕಅಂತರ್ರಾಷ್ಟ್ರೀಯ ರಾಜಕೀಯದ ಮೇಲೆ ಬೋಲ್ಶೆವಿಕ್ ಕ್ರಾಂತಿ ಬೀರಿದ ತೀವ್ರಗಾಮಿ ಹಾಗೂ ಆಳವಾದ ಪ್ರಭಾವವನ್ನು ಮರೆಮಾಚಲು ಯತ್ನಿಸಲಾಗುತ್ತಿದೆ. ಆದರೆ ವಾಸ್ತವವಾಗಿ ಈಗ ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ, ಕಾನೂನುಗಳಲ್ಲಿ ಕಾಣುತ್ತಿರುವ ನೀತಿ- ನಿಯಮಗಳು, ಮೌಲ್ಯಗಳೆಲ್ಲಾ ಸಮಾಜವಾದಿ ಸೋವಿಯೆತ್ ಒಕ್ಕೂಟದ ವಿದೇಶಾಂಗ ನೀತಿಯಲ್ಲದಿದ್ದರೆ ಮೂಡಿ ಬರುತ್ತಲೇ ಇರಲಿಲ್ಲ.

ಪ್ರಭುತ್ವ ಆಳುವ ವರ್ಗಗಳ ಅಂಗ. ಆದ್ದರಿಂದ ಅದರ ಧೋರಣೆಗಳು - *ಆಂತರಿಕ ಹಾಗೂ ಬೇರೆ ದೇಶಗಳೊಂದಿಗೆ ಅದರ ಸಂಬಂಧಗಳನ್ನು ನಿರ್ಧರಿಸುವ ವಿದೇಶಾಂಗ ಇವೆರಡೂ* - ಸದಾ ಆಳುವ ವರ್ಗದ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ನಿರ್ಧಾರವಾಗುತ್ತವೆ. ಸಮಾಜವಾದೀ ವರ್ಗ ವಿಭಜನೆ ಆರಂಭವಾದಂದಿನಿಂದ ಇದು ನಿಜ. ಈ ವರ್ಗ ವಿಭಜನೆ ಇರುವವರೆಗೂ, ಅದರಿಂದಾಗಿ ಪ್ರಭುತ್ವ ಎಂಬುದು ಇರುವರೆಗೂ ಇದು ನಿಜವಾಗಿರುತ್ತದೆ ಕೆಲವೊಮ್ಮೆ ವಿಶೇಷವಾಗಿ ವಿದೇಶೀ ಆಕ್ರಮಣದ ಕಾಲದಲ್ಲಿ ಆಳುವ ವರ್ಗದ ಹಿತಾಸಕ್ತಿಗಳು ಮತ್ತು ಇಡೀ ದೇಶದ ಹಿತಾಸಕ್ತಿ ಒಂದೇ ಆಗಬಹುದು. ಹಾಗೆಂದ ಮಾತ್ರಕ್ಕೆ ಯಾವುದೇ ಪ್ರಭುತ್ವದ ವಿದೇಶಾಂಗ ನೀತಿ ಒಂದು ವರ್ಗಧೋರಣೆ ಎಂಬುದನ್ನು ಅದು ಸುಳ್ಳಾಗಿಸುವುದಿಲ್ಲ.

ಬಂಡವಾಳಶಾಹಿ ಪ್ರಭುತ್ವಗಳ ವಿದೇಶಾಂಗ ನೀತಿ ಆ ವರ್ಗದ ಸಾಮಾಜಿಕಗುಣದಂತೆ ಸದಾ ವಿಸ್ತರಣೆಯ, ಆಕ್ರಮಣದ ಪ್ರವೃತ್ತಿಯನ್ನು ತೋರ್ಪಡಿಸುತ್ತದೆ. ಶೋಷಣೆಯ ವಲಯವನ್ನು ಕಾಪಾಡಿಕೊಳ್ಳುವ ಬಲಪಡಿಸುವ ಹಾಗೂ ವಿಸ್ತರಿಸುವ ಆಕಾಂಕ್ಷೆಅವರ ವಿದೇಶಾಂಗ ನೀತಿಯ ಹಿಂದಿರುವ ಚಾಲಕ ಶಕ್ತಿ. ಸಾಮ್ರಾಜ್ಯಶಾಹಿ ಘಟ್ಟದಲ್ಲಿ ಈ ಆಕ್ರಮಣ ಪ್ರವೃತ್ತಿ ಇನ್ನಷ್ಟು ತೀಕ್ಷ್ಣಗೊಳ್ಳುತ್ತದೆ. ಮಹಾಯುದ್ಧಕ್ಕೆ ಕಾರಣವಾದ ಜರ್ಮನ್ ಸಾಮ್ರಾಜ್ಯಶಾಹಿಯ, ಹಿಟ್ಲರ್ ಫ್ಯಾಸಿಸಂನ ಕೊಳ್ಳೆ ಹೊಡೆಯುವ ನೀತಿಯನ್ನೇ ನೋಡಿ. ಇಂದಿನ ಸಂದರ್ಭದಲ್ಲಿ ಅಮೆರಿಕಾದ ವಿದೇಶಾಂಗ ನೀತಿವಿಶ್ವ ಪ್ರಾಬಲ್ಯಗಳಿಸುವ ಅಮೆರಿಕನ್ ಗುತ್ತೇದಾರಿ ಬಂಡವಾಳದ ಆಕಾಂಕ್ಷೆಯ ಅಭಿವ್ಯಕ್ತಿಯಲ್ಲದೆ ಮತ್ತೇನೂ ಅಲ್ಲ.

ವಿದೇಶೀ ಧೋರಣೆಯ ಸ್ವರೂಪ ಬದಲಾಯಿತು.

ಬೋಲ್ಶೆವಿಕ್ ಕ್ರಾಂತಿ ಈ ಸನ್ನಿವೇಶವನ್ನು ತೀವ್ರರೂಪದಲ್ಲಿ ಬದಲಿಸಿತು. ಮಾನವೇತಿಹಾಸದಲ್ಲಿ ಮೊದಲ ಬಾರಿಗೆ ಅಲ್ಪಸಂಖ್ಯೆಯಲ್ಲಿರುವ ಶೋಷಕ ವರ್ಗಗಳ ಪ್ರಭುತ್ವದ ಸ್ಥಾನದಲ್ಲಿ ಹಿಂದೆ ಶೋಷಿತರಾಗಿದ್ದ ಬಹುಸಂಖ್ಯೆಯಲ್ಲಿರುವ ದುಡಿಯುವ ಜನರ ಒಂದು ಪ್ರಭುತ್ವ ಸ್ಥಾಪನೆಗೊಂಡಿತು. ಮಾನವ ಸಮಾಜದ ವಿನಾಶದಲ್ಲಿ ಒಂದು ದೊಡ್ಡ ನೆಗೆತ ಇದು. ಸಹಜವಾಗಿಯೇ ಇದು ವಿಶ್ವ ಬದಲಾವಣೆಗಳ ಮೇಲೆ ಯುಗಾಂತರಕಾರಿ ಪ್ರಭಾವ ಬೀರಿ ವಿದೇಶೀ ಧೋರಣೆಯ ಸ್ವರೂಪವನ್ನು ಕೂಡಾ ಬದಲಿಸಿತು. ಕ್ರಾಂತಿಯ ಮರುದಿನವೇ ಶಾಂತಿ ಕುರಿತು ಡಿಕ್ರಿ ಹೊರಡಿಸಿ ಸೋವಿಯೆತ್ ಪ್ರಭುತ್ವ ಇದನ್ನು ತಕ್ಷಣ ಪ್ರದರ್ಶಿಸಿತು. ಯುದ್ಧಕೋರತನ ಮೊದಲ ಮಹಾಯುದ್ಧದಲ್ಲಿ ತೊಡಗಿದ್ದ ದೇಶಗಳ ನೀತಿಗಳ ಪ್ರಮುಖ ಲಕ್ಷಣವಾಗಿದ್ದ ಸಮಯದಲ್ಲಿ ಸಮಾಜವಾದೀ ಪ್ರಭುತ್ವ ಬಹುಸಂಖ್ಯೆಯಲ್ಲಿರುವ ದುಡಿಯುವ ಜನಗಳ ಹಿತಾಸಕ್ತಿಗಳನ್ನು ಎತ್ತಿಹಿಡಿದು ಶಾಂತಿ ತನ್ನ ಧೋರಣೆ ಎಂದು ಘೋಷಿಸಿತು. ಅಂದಿನಿಂದ ಶಾಂತಿ ಮತ್ತು ಸಮಾಜವಾದ ಅಭಿನ್ನ ತತ್ವಗಳಾಗಿವೆ.

ಸೋವಿಯತ್ ವಿದೇಶಾಂಗ ನೀತಿಯ ಬಾಹ್ಯ ರೇಖೆಗಳು ಕ್ರಾಂತಿ ವಿಜಯಶಾಲಿಯಾದ,

ಬಂಡವಾಳಶಾಹಿ ಪ್ರಭುತ್ವಗಳ ವಿದೇಶಾಂಗ ನೀತಿ ಆ ವರ್ಗದ ಸಾಮಾಜಿಕಗುಣದಂತೆ ಸದಾ ವಿಸ್ತರಣೆಯ, ಆಕ್ರಮಣದ ಪ್ರವೃತ್ತಿಯನ್ನು ತೋರ್ಪಡಿಸುತ್ತದೆ, ಶೋಷಣೆಯ ವಲಯವನ್ನು ಕಾಪಾಡಿಕೊಳ್ಳುವ ಬಲಪಡಿಸುವ ಹಾಗೂ ವಿಸ್ತರಿಸುವ ಆಕಾಂಕ್ಷೆ ಅವರ ವಿದೇಶಾಂಗ ನೀತಿಯ ಹಿಂದಿರುವ ಚಾಲಕ ಶಕ್ತಿ.

ಯು[illegible]ರತನ ಮೊದಲ ಮಹಾಯುದ್ಧದಲ್ಲಿ ತೊಡಗಿದ್ದ ದೇಶಗಳ ನೀತಿಗಳ [illegible] ಲಕ್ಷಣವಾಗಿದ್ದ ಸಮಯದಲ್ಲಿ ಸಮಾಜವಾದೀ ಪ್ರಭುತ್ವ ಬಹುಸಂಖ್ಯಾ[illegible]ರುವ ದುಡಿಯುವ ಜನಗಳ ಹಿತಾಸಕ್ತಿಗಳನ್ನು ಎತ್ತಿಹಿಡಿದು ಶಾಂತಿ ತನ್ನ [illegible]ರಣೆ ಎಂದು ಘೋಷಿಸಿತು.

ನಂತರ ಅದು [illegible]ಯುದೇಕಾದ ವೈಷಮ್ಯ ಪೂರ್ಣವಾದ ಮೂರ್ತ ಪರಿಸ್ಥಿತಿಗಳಿಗೆ ಅನುಗುಣವಾಗಿ ರೂ[illegible]ಡಿದ್ದರೂ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ನೀತಿಗಳೇ ಸದಾ ಅದರ ಸಾರಸತ್ವ[illegible]. ಬೊಲ್ಶೆವಿಕ್ ಕ್ರಾಂತಿ ಬಂಡವಾಳದಿಂದ ಸಮಾಜವಾದದತ್ತ ವಿಶ್ವವ್ಯಾಪಿ ಪರಿವರ್ತನೆಯ [illegible] ಜಯಘೋಷ ಎಂಬುದನ್ನು ಎಂದಿಗೂ ಮರೆಯದೆ ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋ[illegible]ವನ್ನು, ವಿಶ್ವ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಮುನ್ನಡೆಸುವುದು ಸೋವಿಯೆತ್ ವಿದೇಶಾಂಗ ನೀತಿಯ ಕೇಂದ್ರ ಗುರಿಯಾಗಿತ್ತು.ಆದರೆ ಇದನ್ನು ಆಗಿನ ವಾಸ್ತವಿಕ ಪರಿಸ್ಥಿತಿಗೆ ಅನ್ವಯಿಸಿ ಹೊಂದಿಸಬೇಕಾಗಿತ್ತು.

ಶಾಂತಿಯುತ ಸಹ ಅಸ್ತಿತ್ವ
ವರ್ಗ ಹೋರಾಟದ ಒಂದು ರೂಪ

ಸಮಕಾಲೀನ ಸಾಮ್ರಾಜ್ಯಶಾಹಿಯ ಅಧ್ಯಯನ ಮಾಡಿದ ಲೆನಿನ್ ಬಂಡವಾಳಶಾಹಿಯ ಅಸಮಾನ ಬೆಳವಣಿಗೆಯ ನಿಯಮವನ್ನು ಕಂಡುಹಿಡಿದು ಒಂದು ಮಹತ್ವಪೂರ್ಣ ನಿರ್ಣಯಕ್ಕೆ ಬಂದರು - *"ಸಮಾಜವಾದ ಎಲ್ಲಾ ದೇಶಗಳಲ್ಲಿ ಏಕಕಾಲದಲ್ಲಿ ವಿಜಯಗಳಿಸುವುದು ಸಾಧ್ಯವಿಲ್ಲ, ಮೊದಲಿಗೆ ಅದು ಒಂದು ಅಥವಾ ಕೆಲವು ದೇಶಗಳಲ್ಲಿ ಜಯಗಳಿಸುತ್ತದೆ, ಇತರ ದೇಶಗಳು ಕೆಲವು ಕಾಲ ಬೂರ್ಜ್ವಾ ಅಥವಾ ಅದಕ್ಕೂ ಹಿಂದಿನ ಘಟ್ಟದಲ್ಲೇ ಉಳಿಯುತ್ತವೆ"* (ಲೆನಿನ್ ಸಂಗ್ರಹಿತ ಕೃತಿಗಳು - ಸಂಪುಟ 23) ಈ ತೀರ್ಮಾನ ಸರಿಯೆಂದು ಬೊಲ್ಶೆವಿಕ್ ಕ್ರಾಂತಿಯ ನಂತರದ ವಾಸ್ತವಿಕ ಸನ್ನಿವೇಶ ತೋರಿಸಿಕೊಟ್ಟಿತು. 1917ರಿಂದ ಆರಂಭವಾದ [illegible] ಎರಡು ಭಿನ್ನ ಸಾಮಾಜಿಕ ವ್ಯವಸ್ಥೆಗಳು ಜೊತೆಜೊತೆಗೇ ಅಸ್ತಿತ್ವದಲ್ಲಿರುವ ಕಾಲಘಟ್ಟ, ಸ[illegible]ಯೊಂದಿಗೆ ಪರಸ್ಪರ ತೀವ್ರವಾಗಿ ಸೆಣಸುತ್ತಲೇ ಇರುವ ಕಾಲಘಟ್ಟ. ಹೀಗಿರುವಾಗ ಇಂತಹ [illegible]ಗಳ ನಡುವಿನ ಸಂಬಂಧಗಳ ಸ್ವರೂಪವೇನು ಎಂಬ ಪ್ರಶ್ನೆ ಎದ್ದಿತು. ಈ ಪ್ರಶ್ನೆಗೆ [illegible]ವಾಗಿ [illegible]ಂತಿಯುತ ಸಹಅಸ್ತಿತ್ವದ ಲೆನಿನ್‌ವಾದೀ ಪರಿಕಲ್ಪನೆ. ಇದು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ವರ್ಗ [illegible]ರಾಟದ ಒಂದು ರೂಪವಾಗಿ ಮೂಡಿಬಂದ ಪರಿಕಲ್ಪನೆ.

ಸಾಮ್ರಾ[illegible] ಸಮಾಜವಾದದ ಅಸ್ತಿತ್ವವನ್ನು ಒಪ್ಪಿಕೊಳ್ಳಲಿಲ್ಲ, ಒಪ್ಪಿಕೊಳ್ಳುವುದಿಲ್ಲ. ಸಾಮ್ರಾಜ್ಯಶಾ[illegible]ರಿ ಮೂಲಕ ಹಸ್ತಕ್ಷೇಪ ಮಾಡುವ ಅಪಾಯದ ಬಗ್ಗೆ ಲೆನಿನ್ ಸದಾ ಎಚ್ಚ[illegible]ಲೇ ಇ[illegible]ವಿಯೆತ್ ಪ್ರಭುತ್ವದ ಮಿಲಿಟರಿ ಸಾಮರ್ಥ್ಯವನ್ನು ಬಲಗೊಳಿಸಲು ಎಲ್ಲಾ ಕ್ರಮಗಳನ್ನು ಕೈ[illegible]. ಸಮಾ[illegible]ವಾದಿ ಕ್ರಾಂತಿಯ ಸಾಧನೆಗಳನ್ನು ಕಾಪಾಡಿಕೊಳ್ಳಲು ಇದು ಅಗತ್ಯವಾಗಿತ್ತು. [illegible]ಯೆತ್ ಪ್ರಭುತ್ವ ಆರಂಭದಿಂದಲೇ ಒಂದು ದೃಢ ಹಾಗೂ ತೀವ್ರ ಹೋರಾಟ [illegible] ಕ್ರಾಂತಿ [illegible]ಶಾಲಿಯಾಗಿತ್ತಷ್ಟೆ. ಆಗಲೇ ಸಾಮ್ರಾಜ್ಯಶಾಹೀ ದೇಶಗಳು [illegible] ಸೈನಿಕ ಹಸ್ತಕ್ಷೇಪ ನಡೆಸಿದರು. ಸಮಾಜವಾದವನ್ನು ಕಾದುಕೊಳ್ಳಬೇಕಾದ [illegible]-20ರ ಅವಧಿಯಲ್ಲಿ ದೇಶವನ್ನು ಆವರಿಸಿದ್ದ ಅಂತರ್ಯುದ್ಧವನ್ನು ಗೆಲ್ಲಲೇ [illegible]ತ್ತು. [illegible]ತ ಸಹ ಅಸ್ತಿತ್ವದ ಲೆನಿನ್‌ವಾದೀ ಪರಿಕಲ್ಪನೆಯ ಅರ್ಥ ಆಕ್ರಮಣಗಳನ್ನು [illegible] ಸೈನಿಕ ಸಾಮರ್ಥ್ಯವನ್ನು ಬೆಳೆಸುವುದು ಎಂದು. [illegible]ಯುದ್ಧ [illegible]ವನ್ನು ಕ್ರೋಢೀಕರಿಸಲು, ಬಲಗೊಳಿಸಲು ಅನುಕೂಲವಾದ ಪರಿಸ್ಥಿತಿ, ಅವಕಾಶಗಳನ್ನು [illegible]ವುದು ಎಂದು ಕೂಡಾ ಆ ಪರಿಕಲ್ಪನೆಯ ಅರ್ಥವಾಗಿತ್ತು. ಹೀಗೆ ಶಾಂತಿಯುತ

ಸಹ ಅಸ್ತಿತ್ವ ಹೊಸ ಯುಗದ ಮೂರ್ತ ಸನ್ನಿವೇಶಕ್ಕೆ ವಿಶಿಷ್ಟವಾದ ವರ್ಗ ಹೋರಾಟದ ಒಂದು ರೂಪವಾಗಿತ್ತು.

ಮೊದಲ ಪರೀಕ್ಷೆಯಲ್ಲಿ ಗದ್ದಿತು

ಇಂತಹದೊಂದು ಧೋರಣೆಯ ಮೊದಲ ಪರೀಕ್ಷೆ ಅಕ್ಟೋಬರ್ ಕ್ರಾಂತಿಯ ಅರುಣೋದಯದ ಕಾಲದಲ್ಲೇ ನಡೆಯಿತು. ಜನವರಿ 1918ರಲ್ಲಿ ಬ್ರೆಸ್ಟ್-ಲಿಟೋವ್ಸ್ಕ್ ಶಾಂತಿ ಮಾತುಕತೆಗಳಲ್ಲಿ ಸೋವಿಯೆತ್ ಪ್ರಭುತ್ವ ಒಂದು ಜೀವನ್ಮರಣ ಮಹತ್ವದ ನಿರ್ಣಯಕ್ಕೆ ಬರಬೇಕಾಗಿತ್ತು- ಮೊದಲ ಮಹಾಯುದ್ಧನಂತರ ಜರ್ಮನಿ ಮಂಡಿಸಿದ ಕಠಿಣ ಶರತ್ತುಗಳನ್ನೆಲ್ಲಾ ಒಪ್ಪಿ ಶಾಂತಿ ಒಪ್ಪಂದ ಮಾಡಿಕೊಳ್ಳಬೇಕೆ ಬೇಡವೇ ಎಂಬ ಪ್ರಶ್ನೆಯಿತ್ತು. ಬೊಲ್ಶೆವಿಕ್ ಪಕ್ಷದ ಪ್ರಮುಖ ಸಂಸ್ಥೆಗಳಲ್ಲಿ ಈ ಬಗ್ಗೆ ಗಂಭೀರ ಭಿನ್ನಾಭಿಪ್ರಾಯವಿತ್ತು. ಜರ್ಮನರೊಂದಿಗೆ ಒಂದು ಪ್ರತ್ಯೇಕ ಶಾಂತಿ ಒಪ್ಪಂದ ಮಾಡಿಕೊಳ್ಳಲು ಲೆನಿನ್ ತೀವ್ರವಾಗಿ ಸೆಣಸಬೇಕಾಯಿತು. "ರಶ್ಯಾದ ಸಮಾಜವಾದೀ ಸರಕಾರದ ಎದುರು ಒಂದು ಪ್ರಶ್ನೆಯಿದೆ. ಈ ಪ್ರಶ್ನೆಗೆ ವಿಳಂಬವಿಲ್ಲದೆ ಉತ್ತರ ಬೇಕಾಗಿದೆ. ಕೆಲವು ಪ್ರದೇಶಗಳು ವಿದೇಶೀಯರ ಸ್ವಾಧೀನದಲ್ಲಿರುವ ಶರತ್ತಿನೊಂದಿಗೆ ಶಾಂತಿಯನ್ನು ಒಪ್ಪಬೇಕೇ ಅಥವಾ ತಕ್ಷಣ ಒಂದು ಕ್ರಾಂತಿಕಾರೀ ಯುದ್ಧ ನಡೆಸಬೇಕೇ ಎಂಬ ಪ್ರಶ್ನೆಗೆ ಉತ್ತರ ಬೇಕಾಗಿದೆ". ಎಂದ ಲೆನಿನ್ ಈ ಒಪ್ಪಂದಮಾಡಿಕೊಳ್ಳಲಾಗದ ಕಾರಣಗಳನ್ನು ಹೇಳುತ್ತಾರೆ - *"ನಾವು ಈ ಕ್ಷಣಕ್ಕೆ ಎಷ್ಟು ಸಾಧ್ಯವೋ ಅಷ್ಟು ನಮ್ಮ ವಿರುದ್ಧ ಕತ್ತಿಮಸೆಯುತ್ತಿರುವ ಸಾಮ್ರಾಜ್ಯಶಾಹೀ ಗುಂಪುಗಳಿಂದ ನಮ್ಮನ್ನು ಮುಕ್ತಗೊಳಿಸಿಕೊಂಡು, ಅವರ ಪ್ರಸ್ತುತ ವೈಲಕ್ಷಣ್ಯ, ಯುದ್ಧದ ಲಾಭ ಪಡೆಯಬೇಕು. ಸಮಾಜವಾದೀ ಕ್ರಾಂತಿಯನ್ನು ಮುನ್ನಡೆಸಲು, ಅದನ್ನು ಕ್ರೋಢೀಕರಿಸಲು ಒಂದು ನಿರ್ದಿಷ್ಟ ಅವಧಿಯವರೆಗೆ ನಮ್ಮ ಕೈಗಳು ಮುಕ್ತವಾಗಿರಬೇಕು"* (ಲೆನಿನ್ ಸಂಗ್ರಹಿತ ಕೃತಿಗಳು-ಸಂಪುಟ 26) ಬುಖಾರಿನ್ ಹಾಗೂ ಟ್ರಾಟ್ಸ್ಕಿ ನೇತೃತ್ವದ ಒಂದು ಪ್ರಭಾವಶಾಲೀ ವಿಭಾಗ ಈ ಮಾರ್ಗವನ್ನು ವಿರೋಧಿಸಿ ಜರ್ಮನಿಯೊಂದಿಗೆ ಮಿಲಿಟರಿ ಸಂಘರ್ಷಕ್ಕೆಡೆ ಮಾಡಿಕೊಡಬಹುದಾದ ಮಾರ್ಗ ಪ್ರತಿಪಾದಿಸಿತು. ವಾಸ್ತವವಾಗಿ ಒಂದು ಘಟ್ಟದಲ್ಲಿ ಲೆನಿನ್‌ರ ಪ್ರಸ್ತಾಪಕ್ಕೆ ಪಕ್ಷದ ಕೇಂದ್ರ ಸಮಿತಿಯ 1/3ರಷ್ಟು ಬೆಂಬಲ ಮಾತ್ರವೇ ಇತ್ತು. ಆದರೂ ಲೆನಿನ್ ತನ್ನ ಅಭಿಪ್ರಾಯವನ್ನು ದೃಢವಾಗಿ ಪ್ರತಿಪಾದಿಸುತ್ತಾ ಜರ್ಮನಿಯೊಂದಿಗೆ ಯುದ್ಧವನ್ನು ಆ ಘಟದಲ್ಲಿ ಪುನರಾರಂಭಿಸಿದರೆ ಪೆಟ್ರೋಗ್ರಾಡ್ ಪತನವಾಗಿ ಕ್ರಾಂತಿ ಕುಸಿದು ಬೀಳುತ್ತದೆ ಎಂದು ವಾದಿಸಿದರು. ಸೇನೆ ಪ್ರತಿರೋಧ ಒಡ್ಡುವ ಸ್ಥಿತಿಯಲ್ಲಿಲ್ಲ, ಜನ ಶಾಂತಿಗಾಗಿ ತವಕ ಪಡುತ್ತಿದ್ದಾರೆ ಎಂದರು. ತೀವ್ರ ಸೆಣಸಾಟದ ನಂತರ ಕೇಂದ್ರ ಸಮಿತಿ ಅಂತಿಮವಾಗಿ ಲೆನಿನ್‌ರ ನಿಲುವನ್ನು ಸ್ವೀಕರಿಸಿತು. ಬುಖಾರಿನ್-ಟ್ರಾಟ್ಸ್ಕಿ ನಿಲುವು ಆಗ ಗೆದ್ದಿದ್ದರೆ ಸಮಾಜವಾದಿ ಕ್ರಾಂತಿ ಕುಸಿಯಲು ಏಳು ದಶಕಗಳು ಬೇಕಾಗುತ್ತಿರಲಿಲ್ಲ, ಕೆಲವೇ ವಾರಗಳು ಸಾಕಾಗಿತ್ತು. ಸಮಾಜವಾದಿ ಕ್ರಾಂತಿಯನ್ನು ಕಾಪಾಡಿಕೊಂಡು ಮುನ್ನಡೆಸುವ ಕಾರ್ಯ ಎಷ್ಟು ಕ್ಲಿಷ್ಟವಾದುದು ಎಂಬುದನ್ನು ಇದು ತೋರಿಸುತ್ತದಷ್ಟೆ.

ಹೀಗೆ ಸೋವಿಯತ್ ವಿದೇಶಾಂಗ ಧೋರಣೆಗೆ ಮಾರ್ಗದರ್ಶನ ನೀಡಿದ ಶಾಶ್ವತ ನೀತಿಯೆಂದರೆ ಸಮಾಜವಾದೀ ಕ್ರಾಂತಿಯನ್ನು ರಕ್ಷಿಸುವ, ಕಾಪಾಡಿಕೊಳ್ಳುವ ಹಾಗೂ ಕ್ರೋಢೀಕರಿಸುವ ಅಗತ್ಯ. ಇದೇ ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನದ ಮುನ್ನಡೆಗೆ ಒಂದು ದೊಡ್ಡ ಕಾಣಿಕೆ. ಅಂತರಾಷ್ಟ್ರೀಯ ಆಂದೋಲನದ ಮುನ್ನಡೆಗೆ ಒಂದು ದೊಡ್ಡ ಕಾಣಿಕೆ ಶಾಂತಿಯುತ ಸಹ-

> **ಶಾಂತಿಯುತ ಸಹ ಅಸ್ತಿತ್ವದ ಲೆನಿನ್‌ವಾದೀ ಪರಿಕಲ್ಪನೆಯ ಅರ್ಥ ಆಕ್ರಮಣಗಳನ್ನು ಹಿಮ್ಮೆಟ್ಟಿಸಲು ಅಗತ್ಯವಾದ ಸೈನಿಕ ಸಾಮರ್ಥ್ಯವನ್ನು ಬೆಳೆಸುವುದು ಎಂದು. ಇನ್ನೊಂದೆಡೆ ಯುದ್ಧ ತಪ್ಪಿಸಿ ಸಮಾಜವಾದವನ್ನು ಕ್ರೋಢೀಕರಿಸಲು, ಬಲಗೊಳಿಸಲು ಅನುಕೂಲವಾದ ಪರಿಸ್ಥಿತಿ, ಅವಕಾಶಗಳನ್ನು ನಿರ್ಮಿಸುವುದು ಎಂದು ಕೂಡಾ ಆ ಪರಿಕಲ್ಪನೆಯ ಅರ್ಥವಾಗಿತ್ತು.**

ಶಾಂತಿಯುತ ಸಹಬಾಳ್ವೆಯ ಹೋರಾಟ ಅಂತರ್ರಾಷ್ಟ್ರೀಯ ಆಂದೋಲನದ ವಿವಿಧ ತುಕಡಿಗಳು ತಮ್ಮ-ತಮ್ಮ ರಂಗಗಳ ಹೋರಾಟಗಳಲ್ಲಿ ಮುನ್ನಡೆಯಲು ಅಗತ್ಯವಾದ ಸನ್ನಿವೇಶಗಳನ್ನು ಸೃಷ್ಟಿಸುವ ಹೋರಾಟವಾಗಿತ್ತು.

ಬಾಳ್ವೆಯ ಹೋರಾಟ ಅಂತರ್ರಾಷ್ಟ್ರೀಯ ಆಂದೋಲನದ ವಿವಿಧ ತುಕಡಿಗಳು ತಮ್ಮ-ತಮ್ಮ ರಂಗಗಳ ಹೋರಾಟಗಳಲ್ಲಿ ಮುನ್ನಡೆಯಲು ಅಗತ್ಯವಾದ ಸನ್ನಿವೇಶಗಳನ್ನು ಸೃಷ್ಟಿಸುವ ಹೋರಾಟವಾಗಿತ್ತು.

ವಸಾಹತು ಜನಗಳಿಗೆ ನೆರವಾದ ಅಂತರ್ರಾಷ್ಟ್ರೀಯತೆ

ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಸಂಗತಿಯೆಂದರೆ ಲೆನಿನ್ ವಸಾಹತುಗಳ ಜನಗಳ ಹೋರಾಟಗಳಿಗೆ ಮತ್ತು ಈ ಹೋರಾಟಗಳಿಗೂ ಸಾಮ್ರಾಜ್ಯಶಾಹಿಯ ವಿರುದ್ಧ ವಿಶ್ವ ಕಾರ್ಮಿಕ ವರ್ಗದ ಹೋರಾಟಕ್ಕೂ ಇರುವ ಪ್ರತ್ಯೇಕಿಸಲಾಗದ ನಂಟಿಗೆ ನೀಡಿದ ಮಹತ್ವ. *"ಪೌರ್ವಾತ್ಯ ಜನಗಳ ಕ್ರಾಂತಿಕಾರೀ ಆಂದೋಲನ ಈಗ ಅಂತರ್ರಾಷ್ಟ್ರೀಯ ಸಾಮ್ರಾಜ್ಯಶಾಹಿಯ ವಿರುದ್ಧ ಸೋವಿಯೆತ್ ಗಣತಂತ್ರದ ಕ್ರಾಂತಿಕಾರಿ ಹೋರಾಟದೊಂದಿಗೆ ನೇರ ಸಂಪರ್ಕದಿಂದ ಮಾತ್ರವೇ ಪರಿಣಾಮಕಾರಿಯಾಗಿ ಬೆಳೆಯಲು, ಒಂದು ಯಶಸ್ವಿ ಹಂತ ತಲುಪಲು ಸಾಧ್ಯ"* ಎಂದರು ಲೆನಿನ್ ನವೆಂಬರ್ 1919ರಲ್ಲಿ ನಡೆದ ಪೌರ್ವಾತ್ಯ ಜನಗಳ ಕಮ್ಯುನಿಸ್ಟ್ ಸಂಘಟನೆಗಳ ಎರಡನೇ ಮಹಾಧಿವೇಶನದ ವರದಿಯಲ್ಲಿ.(ಲೆನಿನ್ ಸಂಗ್ರಹಿತ ಕೃತಿಗಳು - ಸಂಪುಟ 30)

1920ರಲ್ಲಿ ಕೊಮಿಂಟರ್ನ್ (ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ ಸಂಘಟನೆ) ನ ಎರಡನೇ ಮಹಾಧಿವೇಶನದಲ್ಲಿ ಮಂಡಿಸಿದ ದೇಸೀ ಮತ್ತು ವಸಾಹತು ಪ್ರಶ್ನೆ ಕುರಿತಾದ ಪ್ರಾಥಮಿಕ ಕರಡು ಪ್ರಬಂಧದಲ್ಲಿ ಲೆನಿನ್ *"ಈ ಪ್ರಶ್ನೆಯ ಮೇಲೆ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಸಮಸ್ತ ಧೋರಣೆ ಮುಖ್ಯವಾಗಿ ಭೂಮಾಲಕ ಒಡೆಯರನ್ನು ಹಾಗೂ ಬೂರ್ಜ್ವಾಗಳನ್ನು ಕಿತ್ತೊಗೆಯುವ ಒಂದು ಜಂಟಿ ಕ್ರಾಂತಿಕಾರಿ ಹೋರಾಟದಲ್ಲಿ ಎಲ್ಲಾ ದೇಶೀ ಗುಂಪುಗಳ, ರಾಷ್ಟ್ರಗಳ ಕಾರ್ಮಿಕ ವರ್ಗದ, ದುಡಿಯುವ ಜನಸಮೂಹಗಳ ನಿಕಟ ಐಕ್ಯತೆಯನ್ನು ಆಧರಿಸಿರಬೇಕು"* ಎಂದರು (ಸಂಗ್ರಹಿತ ಕೃತಿಗಳು ಸಂಪುಟ 31)

ಮುಂದುವರಿದು ಲೆನಿನ್ ವಿವಿಧ ದೇಶಗಳ ದುಡಿಯುವ ಜನಗಳ ನಡುವೆ ನಿಕಟ ಐಕ್ಯತೆಯ ಘೋಷಣೆ ಮಾಡಿದರಷ್ಟೇ ಸಾಲದು, ಎಲ್ಲಾ ರಾಷ್ಟ್ರೀಯ ಹಾಗೂ ವಸಾಹತುಗಳ ವಿಮೋಚನಾ ಆಂದೋಲನಗಳು ಹಾಗೂ ಸೋವಿಯೆತ್ ರಶ್ಯಾದ ಅತ್ಯಂತ ನಿಕಟ ಮೈತ್ರಿಯನ್ನು ಸಾಧಿಸಬಲ್ಲ ಒಂದು ನೀತಿಯನ್ನು ಅನುಸರಿಸಬೇಕು ಎಂದು ಎಚ್ಚರಿಸಿದರು. ಈ ಮೈತ್ರಿಯ ಸ್ವರೂಪವನ್ನು ಆಯಾ ದೇಶದಕಾರ್ಮಿಕ ವರ್ಗದಲ್ಲಿ ಕಮ್ಯುನಿಸ್ಟ್ ಆಂದೋಲನದ ಬೆಳವಣಿಗೆಯ ಮಟ್ಟಕ್ಕೆ ಹಾಗೂ ಹಿಂದುಳಿದ ದೇಶಗಳಲ್ಲಿ ಅಥವಾ ಹಿಂದುಳಿದ ದೇಶೀ ಗುಂಪುಗಳಲ್ಲಿ ಕಾರ್ಮಿಕರ, ರೈತರ ಬೂರ್ಜ್ವಾ ಪ್ರಜಾಪ್ರಭುತ್ವ ಆಂದೋಲನಗಳ ಬೆಳವಣಿಗೆಯ ಮಟ್ಟಕ್ಕೆ ಅನುಗುಣವಾಗಿ ನಿರ್ಧರಿಸಬೇಕು ಎಂದರು.

ಅಂತರ್ರಾಷ್ಟ್ರೀಯತೆಯ ಈ ಲೆನಿನ್‌ವಾದೀ ಪರಿಕಲ್ಪನೆಯ ಫಲವಾಗಿಯೇ ಒಂದೆಡೆ 'ಪೌರ್ವಾತ್ಯ ಶ್ರಮಜೀವಿಗಳ ವಿಶ್ವವಿದ್ಯಾಲಯ' ಮುಂತಾದ ಸಂಸ್ಥೆಗಳ ಮೂಲಕ ನೆರವು ಹಾಗೂ ಇನ್ನೊಂದೆಡೆ ವಿಶ್ವವ್ಯಾಪಿ ವಸಾಹತುಶಾಹಿ ವಿರೋಧಿ ಹೋರಾಟಕ್ಕೆ ಸೋವಿಯೆತ್ ಒಕ್ಕೂಟದ ಅಪಾರ ನೈತಿಕ ಹಾಗೂ ಭೌತಿಕ ನೆರವು ಸಿಗುವುದು ಸಾಧ್ಯವಾದದ್ದು. ಆರಂಭದ ಕಷ್ಟಕರವಾದ ದಿನಗಳಲ್ಲೂ ಅದು ತುರ್ಕಿ, ಇರಾನ್, ಅಫಘಾನಿಸ್ತಾನ್, ಚೀಣಾ ಇತ್ಯಾದಿಗಳಿಗೆ ಮಹತ್ವದ ನೆರವು ನೀಡಿತು. ಇವನ್ನೆಲ್ಲಾ ಪಟ್ಟಿ ಮಾಡುವ ಬದಲು ಹೊಚಿಮಿನ್ಹ್‌ರವರ ಈ ಮಾತುಗಳನ್ನು ಕೇಳಿದರೆ

ಸಾಕು--

"ವಸಾಹತು ಪ್ರಶ್ನೆಯ ಸರಿಯಾದ ಪರಿಹಾರ ವಿಶ್ವ ಕ್ರಾಂತಿಗೆ ನೀಡುವ ಕಾಣಿಕೆಯ ಪೂರ್ಣ ಮಹತ್ವವನ್ನು ಮೊದಲು ಅರಿತವರು ಲೆನಿನ್.....ವಸಾಹತುಗಳ ಜನಗಳನ್ನು ಕ್ರಾಂತಿಕಾರಿ ಆಂದೋಲನಕ್ಕೆ ಸೆಳೆಯುವುದರ ಪೂರ್ಣ ಮಹತ್ವವನ್ನು ಮೊದಲು ಅರಿತವರು ಲೆನಿನ್........ ಈ (ರಾಷ್ಟ್ರೀಯ ವಿಮೋಚನಾ) ಆಂದೋಲನಕ್ಕೆ ನೆರವು ನೀಡಿದರೆ ವಿಶ್ವ ಕಾರ್ಮಿಕ ವರ್ಗಕ್ಕೆ ಸಮಾಜವಾದೀ ಕ್ರಾಂತಿಯ ಹೋರಾಟದಲ್ಲಿ ಹೊಸ, ಶಕ್ತಿಶಾಲಿ ಮಿತ್ರರು ದೊರೆಯುತ್ತಾರೆ ಎಂದು ಅವರು ಅರಿತರು."

ಸಮಗ್ರ ಕಣ್ಣೋಟದ ಅಭಿನ್ನ ಅಂಗ

ಅಕ್ಟೋಬರ್ ಕ್ರಾಂತಿಯ ಮೊದಲೇ ಲೆನಿನ್ ಇದನ್ನು ನಿರ್ದಿಷ್ಟವಾಗಿ ಯೋಚಿಸಿದ್ದರು. ವಿಶ್ವ ಕ್ರಾಂತಿಯ ಬಗ್ಗೆ ಅವರ ಕಣ್ಣೋಟ ಒಂದು ಸಮಗ್ರ ಕಣ್ಣೋಟ ಎಂದು ಇದರಿಂದ ತಿಳಿಯುತ್ತದೆ "ಕಾರ್ಮಿಕ ವರ್ಗ ತನ್ನದೇ ದೇಶ ದಮನ ಮಾಡುತ್ತಿರುವ ವಸಾಹತುಗಳನ್ನು, ದೇಶಗಳನ್ನು ರಾಜಕೀಯವಾಗಿ ಪ್ರತ್ಯೇಕಿಸಬೇಕೆಂದು ಒತ್ತಾಯಿಸಬೇಕು. ಇಲ್ಲವಾದರೆ ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆ ಒಂದು ಟೊಳ್ಳು ಮಾತಾಗುತ್ತದೆ, ದಮನ ಮಾಡುವ ಹಾಗೂ ದಮನಕ್ಕೊಳಗಾದ ದೇಶಗಳ ಕಾರ್ಮಿಕರ ನಡುವೆ ವಿಶ್ವಾಸವಾಗಲಿ, ವರ್ಗ ಸೌಹಾರ್ದವಾಗಲಿ ಸಾಧ್ಯವಾಗುವುದಿಲ್ಲ" ಎಂದು ಕ್ರಾಂತಿಯ ಮೊದಲೇ ಲೆನಿನ್ ಹೇಳಿದ್ದರು (ಸಂಗ್ರಹಿತ ಕೃತಿಗಳು-ಸಂಪುಟ 22)

ಸಮಾಜವಾದೀ ವಿದೇಶಾಂಗ ನೀತಿ ಧೋರಣೆಯನ್ನು ನಿರ್ಧರಿಸಿದ ತಿರುಳಿಕೆ ಇದಾಗಿತ್ತು. ಒಂದೆಡೆ ಅದು ಸಮಾಜವಾದೀ ಪ್ರಭುತ್ವದ ಕ್ರೋಢೀಕರಣವನ್ನು ಖಚಿತಪಡಿಸಿದರೆ ಜಗತ್ತಿನ ಶೋಷಿತ ಜನರ ಹೋರಾಟ ಮುನ್ನಡೆಯಿತು, ಇನ್ನೊಂದೆಡೆ ಅದನ್ನು ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕ ವರ್ಗದ ಹೋರಾಟಗಳೊಂದಿಗೆ ಸಮಗ್ರಗೊಳಿಸಿತು.

ಈ ನಿಲುವಿಗನುಗುಣವಾಗಿಯೇ ಸೋವಿಯತ್ ಒಕ್ಕೂಟ ಎರಡನೇ ಮಹಾಯುದ್ಧದ ಹಿಂದಿನ ದಶಕಗಳಲ್ಲಿ ಬಂಡವಾಳಶಾಹೀ ದೇಶಗಳ ಕಾರ್ಮಿಕ ವರ್ಗ ಆಂದೋಲನಗಳಿಗೆ ಸಕ್ರಿಯ ನೆರವು ಬೆಂಬಲ ನೀಡಿತು. ಇಂತಹ ನೆರವುಗಳ ದಾಖಲೆಗಳಿಂದ ಮಹತ್ವದ ಒಂದು ಘಟನೆಯನ್ನು - ಸ್ಪೇನಿಷ್ ಜನತೆಗೆ ಅಲ್ಲಿನ ಅಂತರ್ಯುದ್ಧಕಾಲದಲ್ಲಿ ನೀಡಿದ ಅಂತರರಾಷ್ಟ್ರೀಯವಾದಿ ನೆರವನ್ನು ನೆನಪಿಸಿಕೊಳ್ಳಬಹುದು. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗೊತ್ತಿ ಸೋವಿಯತ್ ಜನತೆ ಸ್ಪೇನಿನಲ್ಲಿ ಫ್ಯಾಸಿಸ್ಟ್ ಸರ್ವಾಧಿಕಾರದ ವಿರುದ್ಧ ಜನರ ಹೋರಾಟಕ್ಕೆ ಮಹತ್ವದ ಕಾಣಿಕೆ ನೀಡಿದರು. "ಸೋವಿಯತ್ [illegible]

[illegible]


ಯಾವ ಊರಿನ ಕಾರ್ಮಿಕನಯ್ಯಾ ನೀನು! ನಾವು ಇವತ್ತು ರಾತ್ರಿ ಕ್ರಾಂತಿ ಮಾಡುತ್ತಿದ್ದೇವೆ ನಿನಗೆ ಗೊತ್ತಿಲ್ವಾ?

1917ರ ನವಂಬರ್ 6ರ ಸಂಜೆ 6 ಗಂಟೆ. ಲೆನಿನ್ ತಾವು ತಲೆಮರೆಸಿಕೊಂಡಿದ್ದ ಮನೆಯ ಕಾಮ್ರೇಡ್ ಫೋಫನೋವಳನ್ನು ಆಗಲೇ ಕೇಂದ್ರ ಸಮಿತಿ ಕಚೇರಿಗೆ ಮೂರು ಬಾರಿ ಕಳಿಸಿದ್ದರು. ತಾನು ಕೇಂದ್ರ ಸಮಿತಿ ಕಚೇರಿಗೆ ಬರಬಹುದೇ ಅಂತ. ಎರಡು ಬಾರಿ ಕೇಂದ್ರ ಸಮಿತಿ ನಿರಾಕರಿಸಿತ್ತು. ಅದೇ ರಾತ್ರಿ ದಂಗೆ ಆರಂಭವಾಗಬೇಕೆಂದು ಮೊದಲೇ ನಿರ್ಧರಿಸಲಾಗಿತ್ತು. ಅದು ನಿಜವಾಗಿಯೂ ಕಾರ್ಯಗತವಾಗುತ್ತೋ ಇಲ್ಲವೋ ಎಂದು ಲೆನಿನ್‌ಗೆ ಆತಂಕ. ಮೂರನೇ ಬಾರಿ ಫೋಫನೋವ ವಾಪಸು ಬರುವುದನ್ನು ಕಾಯದೆ ಹೊರಟೇ ಬಿಟ್ಟರು. ಮಾರು ವೇಷ ಹಾಕಿಕೊಂಡಿದ್ದರು. ಹಳೆಯ ಕೋಟು, ಬೇರೆ ರೀತಿಯ ಟೋಪಿ ಮತ್ತು ಹಲ್ಲು ನೋವಿದ್ದವರ ಹಾಗೆ ಕೆನ್ನೆ ಊದಿಸಿಕೊಂಡಿದ್ದರು! ಜತೆಗೆ ಕಾಮ್ರೇಡ್ ರಾಹ್‌ಜಾ ಇದ್ದರು. ಸ್ವಲ್ಪ ದೂರ ಹೋಗುತ್ತಿದ್ದಂತೆ ಒಂದು ಟ್ರಾಮ್ ಬಂತು. ಫಿನ್ಲೆಂಡ್ ರೈಲ್ವೇ ಸ್ಟೇಷನ್ ಕಡೆಗೆ ಹೋಗುತ್ತಿತ್ತು. ಇಬ್ಬರೂ ಟ್ರಾಮ್ ಹತ್ತಿಕೊಂಡರು. ಕಂಡಕ್ಟರನನ್ನು ಯಾವ ಕಡೆಗೆ ಹೋಗುತ್ತಿದ್ದೀರಿ ಎಂದು ಕೇಳಿದರು. ಆ ಕಂಡಕ್ಟರ್ ಲೆನಿನ್‌ರನ್ನು ಅಡಿಯಿಂದ ಮುಡಿಯವರೆಗೆ ನೋಡಿ "ನಿನಗೆ ತಲೆ ಸೆಟ್ಟಾಗಿದೆಯೋ ಇಲ್ಲವೋ? ಇವತ್ತು ಪೆಟ್ರೋಗ್ರಾಡ್‌ನಲ್ಲಿ ಏನಾಗುತ್ತಿದೆ ಎಂದು ಗೊತ್ತಿಲ್ವ? " ಎಂದು ಕೇಳಿದ. "ಇಲ್ಲ" ಎಂದರು ಲೆನಿನ್.

"ಯಾವ ಊರಿನ ಕಾರ್ಮಿಕನಯ್ಯಾ ನೀನು! ನಾವು ಇವತ್ತು ರಾತ್ರಿ ಕ್ರಾಂತಿ ಮಾಡಲು ಹೊರಟಿದ್ದೇವೆ! ಬೂರ್ಜ್ವಾಗಳನ್ನು ಒದ್ದು ಹಾಕುತ್ತೇವೆ" ಎಂದ ಕಂಡಕ್ಟರ್.

ಕಾಮ್ರೇಡ್ ರಾಹ್‌ಜಾರಿಗೆ ಎದೆ ಡವಡವ ಎನ್ನುತ್ತಿತ್ತು. ಯಾರಾದರೂ ಏಜೆಂಟರು ಟ್ರಾಮ್‌ನಲ್ಲಿದ್ದರೆ, ಲೆನಿನ್‌ರ ಗುರುತು ಹಿಡಿದುಬಿಟ್ಟರೆ ಏನು ಗತಿ ಎಂದು. ಲೆನಿನ್ ಮಾತ್ರ ಕಂಡಕ್ಟರ್ ಜತೆ ಕ್ರಾಂತಿಗಳನ್ನು ಹೇಗೆ ಮಾಡಬಹುದು ಎಂಬ ಗಂಭೀರ ಚರ್ಚೆಯಲ್ಲಿ ತೊಡಗಿದ್ದರು! ಕಂಡಕ್ಟರ್ ಪೆಟ್ರೋಗ್ರಾಡ್ ಕಾರ್ಮಿಕರು ಹೇಗೆ ಕ್ರಾಂತಿ ಮಾಡಲು ಹೊರಟಿದ್ದಾರೆ ಎಂದು ಲೆನಿನ್‌ರಿಗೆ ವಿವರಿಸುತ್ತಿದ್ದ!

ಐತಿಹಾಸಿಕ ಯುದ್ಧ ಹಡಗು ಅರೋರಾ - ಈ ಹಡಗಿನ ಒಂದು ತೋಪಿನ ಸಂಕೇತದೊಂದಿಗೆ ಅಕ್ಟೋಬರ್ ಕ್ರಾಂತಿ ಆರಂಭವಾಯಿತು.



ಹೊಸ ಗುಣಾತ್ಮಕ ಘಟ್ಟ

ಸೋವಿಯತ್ ವಿದೇಶಾಂಗ ನೀತಿ ಎದ್ದು ಕಂಡು ಬಂದದ್ದು ಎರಡನೇ ಮಹಾಯುದ್ಧದ ಮೊದಲು ಹಾಗೂ ಅನಂತರದ ವರ್ಷಗಳಲ್ಲಿ. ಸಮಾಜವಾದಿ ಸೋವಿಯೆತ್ ಒಕ್ಕೂಟದ ಮೇಲೆ ಫ್ಯಾಸಿಸ್ಟ್ ಆಕ್ರಮಣ ಸನ್ನಿಹಿತವಾದಾಗ, ಇತ್ತ ಬಂಡವಾಳಶಾಹೀ ದೇಶಗಳು ಸೋವಿಯೆತ್ ಒಕ್ಕೂಟದ ಸಂಪೂರ್ಣ ಪರಾಭವವನ್ನೇ ಎದುರು ನೋಡುತ್ತಿದ್ದಾಗ ಸ್ಟಾಲಿನ್ ಹಿಟ್ಲರ್‌ನೊಂದಿಗೆ ಅನಾಕ್ರಮಣ ಒಪ್ಪಂದ ಮಾಡಿಕೊಂಡರು. ಬಹಳಷ್ಟು ಟೀಕೆಗೊಳಗಾಗಿರುವ ಈ ಒಪ್ಪಂದ ವಾಸ್ತವವಾಗಿ ಅಸಾಧಾರಣ ಸೈನಿಕ ಪ್ರತಿಭೆಯ ಒಂದು ಪಟ್ಟು. ಅದು ಸೋವಿಯೆತ್ ಒಕ್ಕೂಟಕ್ಕೆ ಆಕ್ರಮಣವನ್ನು ಎದುರಿಸಲು ತಯಾರಿ ನಡೆಸುವಲ್ಲಿ ಅಮೂಲ್ಯ ಸಮಯ ಒದಗಿಸಿತು. ಲೆನಿನ್‌ರ ಅಣತಿಯನ್ನು ಅನುಸರಿಸಿದ ಸ್ಟಾಲಿನ್ ಯುದ್ಧ ಗೆಲ್ಲುವುದು ಸಮರ ಭೂಮಿಯಲ್ಲಲ್ಲ, ಕಾರ್ಖಾನೆಗಳಲ್ಲಿ ಎಂದು ಮತ್ತೆ- ಮತ್ತೆ ಒತ್ತಿ ಹೇಳಿದರು. ಆಕ್ರಮಣವನ್ನು ಎದುರಿಸಿ ಹಿಮ್ಮೆಟ್ಟಿಸುವ ಸೋವಿಯೆತ್ ಒಕ್ಕೂಟದ ಆಂತರಿಕ ಆರ್ಥಿಕ ಶಕ್ತಿಯೇ ಅಂತಿಮವಾಗಿ ನಿರ್ಣಾಯಕ ಅಂಶವಾಯಿತು.

ಸಾಮ್ರಾಜ್ಯಶಾಹೀ ಬಣದೊಳಗಿನ ವೈರುಧ್ಯಗಳನ್ನು ಬಳಸಿ ಕಾರ್ಮಿಕ ವರ್ಗದ ಕ್ರಾಂತಿಯನ್ನು ರಕ್ಷಿಸುವ ಕಾರ್ಯತಂತ್ರದ ದೃಷ್ಟಿಯಿಂದಲೂ ಇದು ಮಹತ್ವಪೂರ್ಣವಾಗಿತ್ತು. ಸಮಾಜವಾದದ ಬದ್ಧ ವೈರಿಗಳೊಂದಿಗೂ ಫ್ಯಾಸಿಸ್ಟ್ ವಿರೋಧಿ ರಂಗವನ್ನು ಬೆಸೆದದ್ದು ವೈರಿ ವರ್ಗಗಳ ನಡುವಿನ ವೈರುಧ್ಯವನ್ನು ಸಮಾಜವಾದವನ್ನು ಕ್ರೋಢೀಕರಿಸಲು ಹೀಗೆ ಬಳಸುವ ಸಾಮರ್ಥ್ಯವನ್ನು ಇದು ತೋರಿಸಿತು. ನಿರ್ಣಾಯಕ ಘಟ್ಟಗಳಲ್ಲಿ ಈ ಮಿತ್ರರು ವಿಶ್ವಾಸಘಾತ ಮಾಡಿದರೂ ಫ್ಯಾಸಿಸ್ಟ್ ಹಿಡುಗಿನಿಂದ ಮಾನವಕುಲವನ್ನು ವಿಮೋಚನೆಗೊಳಿಸಿದ ಸೋವಿಯೆತ್ ಜನತೆಯ ಮಹಾನ್ ಸಾಧನೆಯನ್ನು ಇತಿಹಾಸದಿಂದ ಅಳಿಸಿ ಹಾಕಲು ಎಂದೆಂದಿಗೂ ಸಾಧ್ಯವಿಲ್ಲ.

ಫ್ಯಾಸಿಸಂನ ಸೋಲು ಸೋವಿಯೆತ್ ವಿದೇಶಾಂಗ ಧೋರಣೆಯಲ್ಲಿ ಒಂದು ಹೊಸ ಗುಣಾತ್ಮಕವಾದ ಘಟ್ಟವನ್ನು ಆರಂಭಿಸಿತು. ಮಾನವಕುಲದ 1/3ರಷ್ಟು ಸಮಾಜವಾದವನ್ನು ಆಲಿಂಗಿಸಿದುದರಿಂದ ಈ ಬದಲಾವಣೆ ಬಂತು. ಚೀನೀ ಕ್ರಾಂತಿಯ ಚಾರಿತ್ರಿಕ ವಿಜಯ ಮಾಜಿ ವಸಾಹತುಗಳ ಜನಗಳ ಮೇಲೆ ಅಗಾಧ ಪ್ರಭಾವ ಬೀರಿತು. ಈ ವಿಜಯದಿಂದ ಚಾಲನೆ ಪಡೆದ ವಸಾಹತುಗಳ ಬಿಡುಗಡೆಯ ಪ್ರಕ್ರಿಯೆ ಕೋಟಿಗಟ್ಟಲೆ ಜನಗಳನ್ನು ವಸಾಹತುಶಾಹಿ ನೊಗದಿಂದ ವಿಮೋಚನೆಗೊಳಿಸಿತು. ಇದೀಗ ಪರಿಸ್ಥಿತಿ ತೀವ್ರವಾಗಿ ಬದಲಾಗಿ ಶಾಂತಿ, ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಶಕ್ತಿಗಳ ಪರವಾಯಿತು.

ಸೋವಿಯೆತ್ ವಿದೇಶಾಂಗ ನೀತಿ ಈ ಹೊಸ, ಮೊದಲಿಗಿಂತಲೂ ಹೆಚ್ಚು ಅನುಕೂಲಕರವಾದ ಸನ್ನಿವೇಶದಲ್ಲಿ ತನ್ನ ಮೂಲ ಅಂಶಗಳನ್ನು ಇಟ್ಟುಕೊಂಡು ಅಂತರ್ರಾಷ್ಟ್ರೀಯತೆಯನ್ನು ಮುಂದೊಯ್ಯಬೇಕಾಗಿತ್ತು. ಹೀಗೆ ಮಾಡಬೇಕಾದರೆ ಮೊದಲನೆಯದಾಗಿ ಹೊಸದಾಗಿ ಸ್ವತಂತ್ರವಾದ ದೇಶಗಳನ್ನು ನವವಸಾಹತುವಾದದ ಮೂಲಕ ಮತ್ತೆ ಗುಲಾಮಗಿರಿಗೆ ತಳ್ಳುವ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳಿಗೆ ಅಡ್ಡಗಾಲು ಹಾಕಬೇಕಾಗಿತ್ತು.

ಫ್ಯಾಸಿಸಂನ ಸೋಲು ಸೋವಿಯೆತ್ ವಿದೇಶಾಂಗ ಧೋರಣೆಯಲ್ಲಿ ಒಂದು ಹೊಸ ಗುಣಾತ್ಮಕವಾದ ಘಟ್ಟವನ್ನು ಆರಂಭಿಸಿತು. ಮಾನವಕುಲದ 1/3ರಷ್ಟು ಸಮಾಜವಾದವನ್ನು ಆಲಿಂಗಿಸಿದುದರಿಂದ ಈ ಬದಲಾವಣೆ ಬಂತು.

ಸಮಾಜವಾದದ ಮಿಲಿಟರಿ ಶಕ್ತಿಯ ಸರಿಗಟ್ಟುವ ಬಲದಿಂದಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು 'ನಾನು ಹೇಳಿದಂತೆ ಕೇಳು' ಎಂದು ಬ್ಲಾಕ್‌ಮೇಲ್ ಮಾಡಲು ಸಾಮ್ರಾಜ್ಯಶಾಹಿಗೆ ಸಾಧ್ಯವಾಗಲಿಲ್ಲ.

ನವ ಸ್ವತಂತ್ರ ದೇಶಗಳಿಗೆ
ಅಮೂಲ್ಯ ನೆರವು

ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸುವ ಈ ದೇಶಗಳ ಪ್ರಯತ್ನಗಳಿಗೆ ಸೋವಿಯೆತ್ ಒಕ್ಕೂಟ ನೀಡಿದ ಅಪಾರವಾದ ನಿಸ್ವಾರ್ಥ ನೆರವು ಹಾಗೂ [illegible] ಅಂತರ್ರಾಷ್ಟ್ರೀಯತೆಯ [illegible]ಗೊಂದು ಉಜ್ವಲ ಸಾಕ್ಷಿ. ಈ ನೆರವಿನಿಂದ ಸಾಮ್ರಾಜ್ಯಶಾಹೀ [illegible] ಎದುರಿಸಿ ನಿಲ್ಲ[illegible] ದೇಶಗಳಲ್ಲಿ ಭಾರತವೂ ಒಂದು. ಭಾರತದ ಸ್ವಾತಂತ್ರ್ಯ [illegible] ಸೋವಿಯೆತ್ [illegible] ನೆನೆಸುತ್ತಾ ಜವಾಹರಲಾಲ್ ನೆಹರೂ "[illegible] [illegible] ಅನುಸರಿಸಿತು. ಹಳೆಯ ಝಾರ್ [illegible] ವಿದೇಶಾಧಿಕಾ[illegible] [illegible] ಇದು ಎಲ್ಲಾ [illegible] ಶೋಷಿತ [illegible] ಆಗಿತ್ತು" ಎಂದಿದ್ದಾರೆ (ವಿಶ್ವ ಇತಿಹಾಸದ ಕುರಿತು ನೋಟದಲ್ಲಿ)

ನೆಹರೂ [illegible] "[illegible] ಒಂದು ವಿಶಿಷ್ಟ ಲಕ್ಷಣವಾದ ಸಾಮ್ರಾಜ್ಯಶಾಹಿ ಮತ್ತು [illegible] ವಿಮೋಚನಾ ಆಂದೋಲನಗಳಲ್ಲಿ ಜಯ [illegible] ಮಹಾಯುದ್ಧದ ನಂತರ ಅವಧಿಯಲ್ಲಿ ಸೋವಿಯೆತ್ [illegible] ಸಾಮ್ರಾಜ್ಯಶಾಹಿಯನ್ನು ತಡೆಯುವಲ್ಲಿ ರಾಷ್ಟ್ರೀಯ ಕ್ರಾಂತಿಕಾರಿ [illegible] ಒದಗಿಸಿ ಕೊಟ್ಟ ಸ್ವಾತಂತ್ರ್ಯ ಮತ್ತು ಪ್ರಗ[illegible] ಪಾತ್ರ ವಹಿಸುವಂತೆ ಮಾಡುವಲ್ಲಿ [illegible] ನಿರ್ಣಾಯಕ ಅಂಶವಾಗಿಬಿಟ್ಟಿತ್ತು" ಎಂದಿದ್ದಾರೆ ಸಂಯುಕ್ತ [illegible] ನಾಸೆರ್.

[illegible] ಅಸ್ತಿತ್ವದಲ್ಲಿಲ್ಲದಿದ್ದರೆ ಆಫ್ರಿಕಾದಲ್ಲಿ ವಸಾಹತುಶಾಹೀ [illegible] ದಮನದ ಒಟ್ಟು ಬಲವನ್ನು ಅನುಭವಿಸಬೇಕಾಗಿತ್ತು" ಎಂದಿದ್ದಾರೆ

[illegible] ಸಾಮ್ರಾಜ್ಯಶಾ[illegible] [illegible] ಸೋವಿಯೆತ್ ಒಕ್ಕೂಟದ [illegible] ಸಮಾಜವಾದದ ಮಿಲಿಟರಿ ಶಕ್ತಿಯ ಸರಿಗಟ್ಟುವ ಬಲದಿಂದಾಗಿ ಅಭಿವೃದ್ಧಿ [illegible] ದೇಶಗಳನ್ನು 'ನಾನು ಹೇಳಿದಂತೆ ಕೇಳು' ಎಂದು ಬ್ಲಾಕ್‌ಮೇಲ್ ಮಾಡಲು ಸಾಮ್ರಾಜ್ಯಶಾಹಿಗೆ ಸಾಧ್ಯವಾಗಲಿಲ್ಲ. ಶೀತಲ ಯುದ್ಧದ ಶಸ್ತ್ರಾಸ್ತ್ರ ಪೈಪೋಟಿಯಲ್ಲಿ ಸೋವಿಯೆತ್ ಒಕ್ಕೂಟ [illegible] ಕಾರಣವಾಗಿತ್ತು ಎಂದು ಈಗ ಆಪಾದಿಸುವವರು ಈ [illegible] ಶಕ್ತಿಯಿಲ್ಲದಿದ್ದರೆ ನಾಲ್ಕು ದಶಕಗಳಷ್ಟು ದೀರ್ಘಕಾಲ ಒಂದು ಜಾಗತಿಕ ಯುದ್ಧವಿಲ್ಲದ ಶಾಂತಿ ಸಾಧ್ಯವಿರುತ್ತಿರಲಿಲ್ಲ ಎಂಬುದನ್ನು ಅರಿಯುವದೊಳ್ಳೆಯದು.

ಸಾಮ್ರಾಜ್ಯಶಾಹಿಗೆ ಸರಿಸಾಟಿಯಾದ ಶಕ್ತಿ

"ಅಂತರ್ರಾಷ್ಟ್ರೀಯ ವಿವಾದಗಳನ್ನು ಇತ್ಯರ್ಥ ಮಾಡುವ ಸಾಧನವಾಗಿ ಯುದ್ಧವನ್ನು ಬಳಸದಿರುವುದು. ಹಾಗೂ ಅವನ್ನು ಮಾತುಕತೆಗಳ ಮೂಲಕ ಬಗೆಹರಿಸುವುದು ದೇಶಗಳ ನಡುವೆ ಸಮಾನತೆ, ಪರಸ್ಪರ ತಿಳುವಳಿಕೆ, ಮತ್ತು ವಿಶ್ವಾಸ; ಪರಸ್ಪರ ಹಿತಾಸಕ್ತಿಗಳ ಪರಿಗಣನೆ; ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದು; ತಮ್ಮ ದೇಶಗಳ; ಸಮಸ್ಯೆಗಳನ್ನು ತಾವೇ ಪರಿಹರಿಸುವ ಪ್ರತಿಯೊಬ್ಬರ ಹಕ್ಕಿಗೆ ಮನ್ನಣೆ; ಎಲ್ಲಾ ದೇಶಗಳ ಪ್ರಾದೇಶಿಕ ಸಮಗ್ರತೆ ಹಾಗೂ ಸಾರ್ವಭೌಮತೆಗೆ ಕಟ್ಟುನಿಟ್ಟಾದ ವಿಶ್ವಾಸ, ಗೌರವ; ಸಂಪೂರ್ಣ ಸಮಾನತೆ ಹಾಗೂ ಪರಸ್ಪರ ಪ್ರಯೋಜನದ ಆಧಾರದ ಮೇಲೆ ಆರ್ಥಿಕ, ಸಾಂಸ್ಕೃತಿಕ ಸಹಕಾರಕ್ಕೆ ಪ್ರೋತ್ಸಾಹ" (1962ರಲ್ಲಿ ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಅಂಗೀಕರಿಸಿದ ಕಾರ್ಯಕ್ರಮದಲ್ಲಿ ನಮೂದಿಸಿದ ಸಾಲುಗಳಿವು) --ಸಮಾಜವಾದ ಹಾಗೂ ಅದರ ವರ್ಗದೃಷ್ಟಿಯ ವಿದೇಶಾಂಗ ನೀತಿ ನಿರೂಪಿಸಿದ ಆಧುನಿಕ ಅಂತರ್ರಾಷ್ಟ್ರೀಯ ಸಂಬಂಧಗಳ ಗುರಿಗಳಿವು. ಯಾವುದೇ ಆಧುನಿಕ ದೇಶ ಅಥವಾ ನಾಗರಿಕ ವ್ಯಕ್ತಿ ಈ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವೇ? ಆದರೆ ಸಾಮ್ರಾಜ್ಯಶಾಹಿ ಇದನ್ನು ಒಪ್ಪುವುದಿಲ್ಲ. ಏಕೆಂದರೆ ಜಗತ್ತಿನಲ್ಲೆಲ್ಲಾ ಪ್ರಾಬಲ್ಯ ಮೆರೆಸುವ ಅದರ ಪ್ರಯತ್ನಗಳು ಮಾನವಕುಲದ ಆಕಾಂಕ್ಷೆಗಳಿಗೆ ವ್ಯತಿರಿಕ್ತವಾದದ್ದು. ಆದರೂ ಆಧುನಿಕ ಅಂತರ್ರಾಷ್ಟ್ರೀಯ ಸಂಬಂಧಗಳಿಗೆ ಇಂತಹ ಒಂದು ತಿಳುವಳಿಕೆಯೇ ಪ್ರಧಾನವಾಗಲು ಸಾಧ್ಯವಾಗಿರುವುದು ಸಾಮ್ರಾಜ್ಯಶಾಹಿಗೆ ತಡೆಯಾಗಿ ಸಮಾಜವಾದ ನಿರ್ಮಿಸಿದ ಆರ್ಥಿಕ ಹಾಗೂ ಸೈನಿಕ ಕೋಟೆಯ ಶಕ್ತಿಯಿಂದಾಗಿಯೇ.

ಕೆಲವು ಗಂಭೀರ ವಿಕೃತಿಗಳು

ಎರಡನೇ ಮಹಾಯುದ್ಧದ ನಂತರದ ಸನ್ನಿವೇಶದಲ್ಲಿ ಸಮಾಜವಾದಿ ಸೋವಿಯೆತ್ ಒಕ್ಕೂಟದ ಮಿಲಿಟರಿ ಮತ್ತು ಪರಮಾಣು ಸಮಬಲ ಸಾಮ್ರಾಜ್ಯಶಾಹಿಯ ವಿಶ್ವದಲ್ಲೆಲ್ಲಾ ಯಜಮಾನಿಕೆ ನಡೆಸುವ ಪ್ರಯತ್ನಗಳಿಗೆ ಪರಿಣಾಮಕಾರಿ ತಡೆಯೊಡ್ಡುವಾಗ ಕೆಲವು ವಿಕೃತಿಗಳೂ ನುಸುಳಿದವು.

ಆಧುನಿಕ ಪರಿಷ್ಕರಣವಾದದ ಪರಿಣಾಮಗಳ ಬಗ್ಗೆ ಹಾಗೂ ಜಾಗತಿಕ ಕ್ರಾಂತಿಕಾರೀ ಪ್ರಕ್ರಿಯೆಯ ಮೇಲೆ ಅದರ ವಿನಾಶಕಾರಿ ಪ್ರಭಾವದ ಬಗ್ಗೆ ಹಲವಾರು ದಸ್ತಾವೇಜುಗಳು, ಪುಸ್ತಕಗಳಿವೆ. ಭಾರತದ ಸಂದರ್ಭದಲ್ಲಿ ಹೇಳುವುದಾದರೆ ಸಿ.ಪಿ.ಐ.(ಎಂ) ಸ್ಥಾಪನೆ ಹಾಗೂ ಭಾರತದ ಸನ್ನಿವೇಶದಲ್ಲಿ ಈಗಲೂ ಅದರ ಮಹತ್ವದ ಪಾತ್ರ ಪರಿಷ್ಕರಣವಾದದ ಅತ್ಯಂತ ಪರಿಣಾಮಕಾರಿ ನಿರಾಕರಣೆಯಾಗಿದೆ. ಆದರೆ ಅಂತರ್ರಾಷ್ಟ್ರೀಯ ಸಂಬಂಧಗಳ ವಲಯದಲ್ಲಿ ಒಂದು ಮಹತ್ವದ ಅಂಶವನ್ನು ಗಮನಿಸಬೇಕು. ವಸಾಹತುಶಾಹಿ ನೊಗದಿಂದ ಸ್ವಾತಂತ್ರ್ಯದ ನಂತರ ಹೊಸ ಆಂತರಿಕ ಆಳುವ ವರ್ಗಗಳು ಬೆಳೆಸಿದ ಶೋಷಕ ಸಾಮಾಜಿಕ ವ್ಯವಸ್ಥೆಯಿಂದ ಮುಕ್ತಿ ಪಡೆಯಲು ಆದೇಶಗಳ ಜನಗಳು ನಡೆಸುತ್ತಿರುವ ಹೋರಾಟವನ್ನು ನಿರ್ಲಕ್ಷಿಸಲಾಯಿತು. ವಿಶ್ವವ್ಯಾಪಿ ಶಾಂತಿ ಹೋರಾಟ ಪರಿಧಿಯಲ್ಲಿ ಆಳುವ ವರ್ಗಗಳ ವರ್ಗಧೋರಣೆಗಳೂ ಇಡೀ ಜನಸಮೂಹದ ಹಿತಾಸಕ್ತಿಗಳೂ ಒಂದೇ ಎಂದೂ ಬಗೆಯಲಾಯಿತು. ಹೀಗೆ ಮಾಡುವಾಗ ಹೊಸದಾಗಿ ಸ್ವತಂತ್ರವಾದ ದೇಶಗಳಲ್ಲಿನ ಆಂತರಿಕ ವರ್ಗ ವೈರುಧ್ಯಗಳನ್ನು ಬದಿಗೊತ್ತಿ ಆ ದೇಶಗಳ ಮುಖಂಡರುಗಳನ್ನು ಹಾಡಿ ಹೊಗಳಲಾಯಿತು ಈ ಮೂಲಕ

> ***ಹೊಸದಾಗಿ ಸ್ವತಂತ್ರವಾದ ದೇಶಗಳಲ್ಲಿನ ಆಂತರಿಕ ವರ್ಗ ವೈರುಧ್ಯಗಳನ್ನು ಬದಿಗೊತ್ತಿ ಆ ದೇಶಗಳ ಮುಖಂಡರುಗಳನ್ನು ಹಾಡಿ ಹೊಗಳಿ ಕ್ರಾಂತಿಕಾರೀ ಲೆನಿನ್‌ವಾದೀ ವಿದೇಶಾಂಗ ನೀತಿಯ ಮೂಲಭೂತ ಅಂಶವನ್ನು ಬುಡಮೇಲು ಮಾಡಲಾಯಿತು.***

ಅಂತರ್ರಾಷ್ಟ್ರೀಯಕಾರ್ಮಿಕ ಆಂದೋಲನದ ಹೋರಾಟದೊಂದಿಗೆ ಸಮಾಜವಾದೀ ದೇಶಗಳು ತಮ್ಮನ್ನು ಬಲಪಡಿಸಿಕೊಳ್ಳುವ ಹೋರಾಟವನ್ನು ಕ್ರಾಂತಿಕಾರೀ ಲೆನಿನ್‌ವಾದೀ ವಿದೇಶಾಂಗ ನೀತಿಯ ಮೂಲಭೂತ ಅಂಶವನ್ನು ಬುಡಮೇಲು ಮಾಡಲಾಯಿತು. ಇಂದಿರಾಗಾಂಧಿಯ ತುರ್ತುಪರಿಸ್ಥಿತಿಗೆ ಸೋವಿಯೆತ್ ಬೆಂಬಲ ಲೆನಿನ್‌ವಾದೀ ಅಂತರಾಷ್ಟ್ರೀಯತೆಯ ನೀತಿಯ ಇಂತಹ ವಿಕೃತಿಗೆ ಒಂದು ಜ್ವಲಂತ ಉದಾಹರಣೆ. ಈ ಧೋರಣೆ ಅಂತರ್ರಾಷ್ಟ್ರೀಯ ಆಂದೋಲನಕ್ಕೆ ಅಪಾರ ಹಾನಿಯುಂಟು ಮಾಡಿದೆ. ವಿಶ್ವಸನ್ನಿವೇಶ ಫ್ಯಾಸಿಸಂನ ಸೋಲಿನನಂತರ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಶಕ್ತಿಗಳಿಗೆ ಒಂದೆಂದೂ ಕಂಡಿರದ ರೀತಿಯಲ್ಲಿ ಅನುಕೂಲಕರವಾಗಿದ್ದಾಗ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟವನ್ನು ತೀಕ್ಷ್ಣಗೊಳಿಸುವ ಬದಲು ಪರಿಷ್ಕರಣವಾದ ಅದನ್ನು ಮೊಟಕುಗೊಳಿಸಿತು. ಸಿ.ಪಿ.ಐ.(ಎಂ)ನ ಹದಿನಾಲ್ಕನೇ ಮಹಾಧಿವೇಶನದ ನಿರ್ಣಯಗಳು ಈ ವಿಕೃತಿಯ ಹಲವು ಅಂಶಗಳನ್ನು, ವಿಶ್ವ ಕ್ರಾಂತಿಕಾರಿ ಪ್ರಕಿಯೆಯ ಮೇಲೆ ಅದರ ಪ್ರತಿಗಾಮಿ ಪ್ರಭಾವದ ಬಗ್ಗೆ ಹೇಳಿವೆ.

ಮಾನವ ಕುಲದ ವಿಮೋಚನೆಯ ಏಕ ಮಾತ್ರ ಆಧಾರ


ಆಗರೂ ಸಮಾಜವಾದೀ ವಿದೇಶಾಂಗ ನೀತಿ, ಅದು ಅಭಿನ್ನ ಅಂಶವಾದ ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನಕ್ಕೆ ಹಾಗೂ ಅಂತರ್ರಾಷ್ಟ್ರೀಯ ಕ್ರಾಂತಿಕಾರಿ ಪ್ರಕ್ರಿಯೆಗೆ ಬದ್ಧತೆ ಈಗಲೂ ಪ್ರಸ್ತುತ ಅಂತರಾಷ್ಟ್ರೀಯ ಸಂಬಂಧಗಳನ್ನು ನಿರೂಪಿಸುವ ಅತ್ಯಂತ ಸಮರ್ಥ ಶಕ್ತಿ.

ಸಮಾಜವಾದ ಸತ್ತಿತೆಂದು ಹರ್ಷಪಡುವವರು ದೇಶಗಳ ಸೌರ್ವಭೌಮತ್ವ, ಜನಗಳ ಸ್ವಯಂನಿರ್ಧಾರದ ಹಕ್ಕು, ತಮಗೆ ಸರಿಕಂಡ ಸಾಮಾಜಿಕ ವ್ಯವಸ್ಥೆಯನ್ನು ಆರಿಸಿಕೊಳ್ಳಲು ಹಕ್ಕು ಇತ್ಯಾದಿ ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಕುರಿತಾದ ಮೂಲಭೂತ ಅಂಶಗಳು ಸಮಾಜವಾದ ಮತ್ತು ಅಂತರಾಷ್ಟ್ರೀಯತಾವಾದದ ನೀತಿಬದ್ಧ ಧೋರಣೆಗಳಿಂದಾಗಿ ಜನಗಳ ಪ್ರಜ್ಞೆಯಲ್ಲಿ ಆಳವಾಗಿ ಬೇರುಬಿಟ್ಟು ಪರಿಕಲ್ಪನೆಗಳಾಗಿವೆ ಎಂಬುದನ್ನು ನೆನಪಿಸಿ ಕೊಳ್ಳುವುದು ಒಳ್ಳೆಯದು. ದೇಶಗಳ, ವ್ಯಕ್ತಿಗಳ ಆತ್ಮಗೌರವಕ್ಕೆ, ಸ್ವಾತಂತ್ರ್ಯಕ್ಕೆ ತಳಹದಿ ಹಾಕಿಕೊಟ್ಟಿದ್ದು ಸಾಮ್ರಾಜ್ಯಶಾಹಿಯಲ್ಲ, ಸಮಾಜವಾದ.

ಬೊಲ್ಶೆವಿಕ್ ಕ್ರಾಂತಿಯ 75ನೇ ವಾರ್ಷಿಕೋತ್ಸವ ಆಚರಿಸುವಾಗ ನಾವೆಲ್ಲಾ ಮಾನವನಿಂದ ಮಾನವನ, ಒಂದು ದೇಶದಿಂದ ಇನ್ನೊಂದು ದೇಶದ ಶೋಷಣೆಯಿಂದ ಮುಕ್ತವಾದ ಒಂದು ಸಾಮಾಜಿಕ ವ್ಯವಸ್ಥೆ ಸಾಧಿಸುವ ಹೋರಾಟಕ್ಕೆ ಮಾನವ ಕುಲದ ಪ್ರಯತ್ನಗಳಿಗೆ ನಮ್ಮನ್ನು ಮತ್ತೊಮ್ಮೆ ಅರ್ಪಿಸಿಕೊಳ್ಳೋಣ, ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆಯೇ ಸಮಸ್ತ ಮಾನವಕುಲದ ವಿಮೋಚನೆಯ ಏಕ ಮಾತ್ರ ಆಧಾರವಾಗಬಲ್ಲದು.

ಅನು : ಕೆ.ವಿ.

> "ಮೂಕರಿಗೆ ದನಿ ಸಿಕ್ಕಿತು, ಅಜ್ಞಾನಿಗಳು ತಮ್ಮ ಮನಸ್ಸಿನ ಪರದೆಗಳನ್ನು ಕೊಡವಿ ಹಾಕಿದರು, ಅಸಹಾಯಕರು ತಮ್ಮ ಶಕ್ತಿ ಏನೆಂಬುದನ್ನು ಅರಿತು ಕೊಂಡರು ಮತ್ತು ಅವನತಿಯಲ್ಲಿದ್ದವರು ಸಮಾಜದ 'ಕರಾಳ ಕೂಪ' ದಿಂದ ಹೊರಬಂದು ಇತರರೊಂದಿಗೆ ಸಮಾನತೆಯನ್ನು ಕೇಳತೊಡಗಿದರು. ಇದು ಕೇವಲ ಎಂಟು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿನ ಸೋವಿಯತ್ ರಷ್ಯಾದ ಸಾಧನೆ" -ರವೀಂದ್ರನಾಥ್ ಟಾಗೋರ್.




ವಿಶ್ವದಲ್ಲೆಲ್ಲಾ ಸಂಚರಿಸುವ ಒಂದಿನ ಸೋವಿಯತ್ ಒಕ್ಕೂಟದ ರಾಷ್ಟ್ರೀಯ ಜಾನಪದ ತಂಡ - ಯುರೋಪಿನ, ಏಷ್ಯಾದ ದೇಶೀ ಗುಂಪುಗಳ ಈ ಮುಖಗಳು ಸಮಾಜವಾದ ಕಟ್ಟಿದ ಹೊಸ ಒಕ್ಕೂಟದ ಪ್ರತೀಕಗಳು

ಮಹಾನ್ ಕ್ರಾಂತಿಯ ಅನುಪಮ ಸಾಧನೆ :

ರಾಷ್ಟ್ರೀಯದಮನದಿಂದಮುಕ್ತಿನೀಡಿದಸಮಾಜವಾದ

- ಪ್ರಕಾಶ್ ಕಾರಟ್

ಸಮಾನತೆಯ ಮತ್ತು ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯ ಭಾವನೆಯ ಮೇಲೆ ನಿಂತ ದೇಶಗಳ ಸಂಘವೊಂದರ ಲೆನಿನ್‌ವಾದೀ ಕನಸನ್ನು ಸಾಕಾರಗೊಳಿಸಿದ ಸೋವಿಯತ್ ಒಕ್ಕೂಟ ಇಂದಿಲ್ಲ. ಆದರೆ [illegible] ಇದು ಬೂರ್ಜ್ವಾ ರಾಷ್ಟ್ರೀಯತೆಯ ವಿಜಯವನ್ನು ಸಾರುವ ಬದಲು ಲೆನಿನ್‌ವಾದೀ ಧೋರಣೆಯ ಸತ್ಯತೆಯನ್ನೇ ಎತ್ತಿ ಹಿಡಿದಿದೆ ಎನ್ನುತ್ತಾರೆ ಕಾಂ. ಪ್ರಕಾಶ್ ಕಾರಟ್ ಈ ಲೇಖನದಲ್ಲಿ.



ಭಾರತವೂ ಸ್ವತಃ ಒಂದು ಸಂಕೀರ್ಣ ಬಹುರಾಷ್ಟ್ರೀಯ ರಾಷ್ಟ್ರವಾಗಿರುವುದರಿಂದ, ಈ ಅನುಪಮ ಸಾಧನೆಯ, ಸೋವಿಯತ್ ಒಕ್ಕೂಟದ ಶ್ರೀಮಂತ ಅನುಭವಗಳ ಅಧ್ಯಯನ ಹಾಗೂ ಅವುಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು ನಮಗೆ ಪರಮ ಅವಶ್ಯಕ ಎನ್ನುತ್ತಾರೆ ಅವರು.

ಒಂದು ಸಮಾಜವಾದೀ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದ ಮೊದಲ ಕಾರ್ಮಿಕ ವರ್ಗದ ನೇತೃತ್ವದ 1917ರ ಅಕ್ಟೋಬರ್ ಕ್ರಾಂತಿ ದೇಶೀ ಪ್ರಶ್ನೆಗೆ ಅಥವಾ ರಾಷ್ಟ್ರೀಯತೆಯ ಪ್ರಶ್ನೆಗೆ ಒಂದು ಸಮಾಜವಾದೀ ಪರಿಹಾರ ಕಂಡುಹಿಡಿಯಲು ಕೂಡ ದಾರಿ ಮಾಡಿಕೊಟ್ಟಿತು. ರಾಷ್ಟ್ರೀಯ ದಮನದ ಮತ್ತು ದೇಶಗಳ ಸ್ವಯಂನಿರ್ಧಾರದ ಸಮಸ್ಯೆಗಳನ್ನು ಕುರಿತಂತೆ ಕ್ರಾಂತಿಯ ವೇಳೆಗಾಗಲೇ ಲೆನಿನ್ ಮತ್ತು ಬೊಲ್ಶೆವಿಕ್ ಪಕ್ಷ ಒಂದು ಸ್ಪಷ್ಟ ನಿಲುವಿಗೆ ಬಂದಿದ್ದರು. ರಾಷ್ಟ್ರೀಯ ಸ್ವಯಂನಿರ್ಧಾರಗಳ ಬಗ್ಗೆ ಬೂರ್ಜ್ವಾ ನಿಲುವು ಆಗಲೇ ಮುಂದಿನ ದಾರಿಗಾಣದೆ ನಿಂತಿತ್ತು. ಬೂರ್ಜ್ವಾ ಪಂಡಿತರು ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾನತೆಯ ಬಗ್ಗೆ ಬಾಯಲ್ಲಿ ಮಾತಾಡಿದರೂ, ವಾಸ್ತವದಲ್ಲಿ ತದ್ವಿರುದ್ಧವಾದ ವರ್ತನೆ ಅಂದರೆ ಬಂಡವಾಳಶಾಹಿ ದೇಶಗಳು ಜಗತ್ತನ್ನು ತಮ್ಮ ಸಾಮ್ರಾಜ್ಯಗಳಾಗಿ ಹಂಚಿಕೊಂಡು ವಿವಿಧ ದೇಶಗಳನ್ನು ದಮನಮಾಡುವ ವಾಸ್ತವ ಪರಿಸ್ಥಿತಿಯಿಂದಾಗಿ ದಮನಕ್ಕೊಳಗಾದ ಜನಗಳಲ್ಲಿ ಅವರ ಬಾಯಿಮಾತುಗಳ ಬಗ್ಗೆ ವಿಶ್ವಾಸ ಉಳಿದಿರಲಿಲ್ಲ.

ಮೊದಲ ಮಹಾಯುದ್ಧ ನಂತರ ಕ್ರಾಂತಿ, ಅದರ ನಂತರ ಅಂತರ್ಯುದ್ಧ ಇವುಗಳಲ್ಲಿ ಛಿದ್ರಗೊಂಡು, ಚೆಲ್ಲಾಪಿಲ್ಲಿಯಾದ ರಶ್ಯಾದ ಝಾರ್‌ಶಾಹಿಯ ಅಧಿಪತ್ಯಕ್ಕೊಳಗಾಗಿದ್ದ ಸುಮಾರಾಗಿ ಎಲ್ಲಾ ದೇಶಗಳನ್ನು ಮರುಸಂಯೋಜನೆಗೊಳಿಸಿದ್ದು ಲೆನಿನ್‌ರ ಒಂದು ಅದ್ಭುತ ಸಾಧನೆ. ಇದರ ನಿರ್ಣಾಯಕ ಅಂಶವೆಂದರೆ ಸೋವಿಯತ್ ದೇಶೀಯತೆ ಕುರಿತಾದ ನೀತಿ ಎಂದಿದ್ದಾರೆ ಅಕ್ಟೋಬರ್ ಪ್ರಖ್ಯಾತ ಕ್ರಾಂತಿಯ ಇತಿಹಾಸಕಾರ ಇ.ಹೆಚ್.ಕಾರ್

ಈ ಅದ್ಭುತ ಸಾಧನೆ ಏನು?

ಝಾರ್‌ಶಾಹಿ ರಷ್ಯಾ ವಿವಿಧ ದೇಸೀ ಗುಂಪುಗಳ ಒಂದು ಸೆರೆಮನೆ ಎನ್ನಲಾಗುತ್ತಿತ್ತು. ಇದರಲ್ಲಿ ದೊಡ್ಡ ರಷ್ಯನ್ ದೇಶದ ಆಧಿಪತ್ಯಕ್ಕೆ ದಮನಕ್ಕೆ ಇತರೆಲ್ಲಾ ದೇಶಗಳು ಒಳಗಾಗಿದ್ದವು. ರಷ್ಯನ್ ಪ್ರಾಂತ್ಯಗಳಲ್ಲಿ ಮಾತ್ರ ಕೈಗಾರಿಕೀಕರಣವಾಗಿತ್ತು. ರೈಲ್ವೇ ಕಾರ್ಮಿಕರೂ ಸೇರಿದಂತೆ ಝಾರ್‌ಸಾಮ್ರಾಜ್ಯದಲ್ಲಿ ಇದ್ದ 28ಲಕ್ಷ ಕಾರ್ಮಿಕರಲ್ಲಿ 22ಲಕ್ಷ ರಷ್ಯನ್ನರಾಗಿದ್ದರು. ಒಂದು ಅಂದಾಜಿನ ಪ್ರಕಾರ 1913ರಲ್ಲಿ ಮಧ್ಯ ಏಶ್ಯಾದ ಐದು ಗಣತಂತ್ರಗಳಲ್ಲಿ ಕಾಕಸಸ್‌ನಲ್ಲಿ ಕೇವಲ 30 ಹಳೆಯ ಯಂತ್ರಗಳಿದ್ದವು. ಝಾರ್‌ಸಾಮ್ರಾಜ್ಯದ ವಸಾಹತುಗಳಾಗಿದ್ದ ಈ ಎಲ್ಲಾ ದೇಶಗಳು ಮುಖ್ಯತಃ ಕೃಷಿಯನ್ನವಲಂಬಿಸಿದ್ದ, ರಷ್ಯಾಕ್ಕೆ ಕಚ್ಚಾಮಾಲು ಒದಗಿಸುವ ತಾಣಗಳಾಗಿದ್ದವಷ್ಟೆ. 1915ರಲ್ಲೂ, ಅಂದರೆ ಅಕ್ಟೋಬರ್ ಕ್ರಾಂತಿಯ ಎರಡೇ ವರ್ಷದ ಮೊದಲು ಕೂಡ ಕಝಾಕ್ ಹಾಗೂ ಕಿರಗಿಝ್ ದೇಶಗಳ ಅತ್ಯುತ್ತಮ 1.8 ಕೋಟಿ ಹೆಕ್ಟೇರ್ ಭೂಮಿಯನ್ನು ರಶ್ಯನ್ ಭೂಮಾಲಕರಿಗೆ, ಸರಕಾರೀ ಅಧಿಕಾರಿಗಳಿಗೆ, ಕುಲಕ್‌ವರ್ಗಕ್ಕೆ ನೀಡಲಾಗಿತ್ತು. ಈ ಆರ್ಥಿಕ ಹಿಂದುಳಿಕೆಯ ಜೊತೆಗೆ ಸಾಮಾಜಿಕ ಹಿಂದುಳಿಕೆ ಈ ವಸಾಹತುಗಳ ಸ್ಥಿತಿಯಾಗಿತ್ತು. ರಶ್ಯನ್ ಆಳರಸರು ಈ ವಸಾಹತುಗಳ ಸ್ಥಳೀಯ ಭಾಷೆಗಳನ್ನು, ಸಂಸ್ಕೃತಿಯನ್ನು ದಮನಮಾಡಿದ್ದರು. ಝಾರ್‌ಶಾಹಿಯ ಆಳ್ವಿಕೆಯಲ್ಲಿದ್ದ ಬಹುಪಾಲು ರಶ್ಯನೇತರ ಜನಗಳು ನಿರಕ್ಷರಿಗಳು, ಶೈಕ್ಷಣಿಕವಾಗಿ ಹಿಂದುಳಿದವರು, ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿದ್ದರು.

ವಿಮೋಚನೆಯಿಂದ ಸಮಾನತೆಯತ್ತ

ಈ ಹಿನ್ನೆಲೆಯಲ್ಲಿ ದೇಸೀ ಪ್ರಶ್ನೆಗೆ ಮಾರ್ಕ್ಸ್‌ವಾದವನ್ನು ಅನ್ವಯಿಸಿದ ಲೆನಿನ್ ಬೊಲ್ಶೆವಿಕ್ ಪಕ್ಷ ಝಾರ್‌ಶಾಹಿ ರಷ್ಯಾದೊಳಗೆ ದಮನಕ್ಕೊಳಗಾಗಿದ್ದ ಎಲ್ಲಾ ದೇಸೀ ಗುಂಪುಗಳಿಗೂ ಸ್ವಯಂನಿರ್ಧಾರದ ಹಕ್ಕು ಇದೆ ಎಂದು ಬಲವಾಗಿ ಪ್ರತಿಪಾದಿಸಬೇಕು ಎಂದರು. ಝಾರ್‌ಶಾಹಿ

ಆಕ್ಷಿಕೆಯನ್ನು, ಊಳಿಗಮಾನ್ಯ ಅಧಿಕಾರವನ್ನು ಕಿತ್ತೊಗೆಯುವ ಹೋರಾಟದಲ್ಲಿ ರಷ್ಯಾದ ಕಾರ್ಮಿಕ ವರ್ಗ ಈ ದೇಸೀ ಗುಂಪುಗಳ ಜನಗಳ ಹೆಗಲಿಗೆ ಹೆಗಲು ಕೊಟ್ಟು ನಿಲ್ಲಬೇಕು, ಅಕ್ಟೋಬರ್ ಕ್ರಾಂತಿಯ ನಂತರ ಸಮಾನತೆಯ ಆಧಾರದ ಮೇಲೆ ದೇಶಗಳ ಒಕ್ಕೂಟವೊಂದನ್ನು ರಚಿಸೋಣ ಎಂದು ಕರೆ ನೀಡಿದರು ಲೆನಿನ್. ಅಂತರ್ಯುದ್ಧ ಮುಗಿದ ಮೇಲೆ ಲೆನಿನ್ ಮಾರ್ಗದರ್ಶನದಲ್ಲಿ ಬೋಲ್ಶೆವಿಕರು ದೇಸಿ ಪ್ರಶ್ನೆಯ ಮುಂದಿನ ಹಂತದತ್ತ ಸಾಗಿದರು.- ಅಂದರೆ ವಿಮೋಚನೆಯಿಂದ ಸಮಾನತೆಯತ್ತ ಸಾಗಿದರು.

ಬೂರ್ಜ್ವಾ ವಲಯಗಳಲ್ಲಿದ್ದಂತೆ ಕೇವಲ ದೇಶಗಳ ಸ್ವಾತಂತ್ರ್ಯದ ಬಗ್ಗೆ ಮಾತನಾಡಿದರೆ ಸಾಲದು. ದೇಶಗಳ ನಡುವೆ ಸಮಾನತೆಯಿರುವಂತೆ ಮಾಡಿ ಈ ಸ್ವಾತಂತ್ರ್ಯ ನಿಜವಾಗುವಂತೆ ಮಾಡಬೇಕು. ದೇಶಗಳ ನಡುವಿನ ಆರ್ಥಿಕ, ಸಾಮಾಜಿಕ ಅಸಮಾನತೆಗಳನ್ನು ನಿರ್ಮೂಲನ ಮಾಡಬೇಕು, ಸಮಾನತೆಯ ನಿಜವಾದ ಆಧಾರವನ್ನು ನಿರ್ಮಿಸಬೇಕು. ಸೋವಿಯತ್ ಒಕ್ಕೂಟದಲ್ಲಿ ಹೊಸ ಸಮಾಜವಾದಿ ವ್ಯವಸ್ಥೆ ಕಟ್ಟುವಾಗ ಈ ಹೊಸ ಕ್ರಾಂತಿಕಾರಿ ನಿಲುವನ್ನು ತಳೆಯಲಾಯಿತು. ಲೆನಿನ್ ತೋರಿದ ದಾರಿಯಲ್ಲಿ ತನ್ನ ಕರ್ತವ್ಯ ನಿಭಾಯಿಸುವಲ್ಲಿ ಸಿ.ಪಿ.ಎಸ್.ಯು ನಡೆದ ದಾರಿ ಸೋವಿಯೆತ್ ಒಕ್ಕೂಟದ ಇತಿಹಾಸದಲ್ಲೊಂದು ಭವ್ಯ ಅಧ್ಯಾಯ, ಸೋವಿಯೆತ್ ಒಕ್ಕೂಟದ ಸ್ಥಾಪಕ ಲೆನಿನ್‌ರ ದೂರದರ್ಶಿತ್ವಕ್ಕೊಂದು ಶ್ರದ್ಧಾಂಜಲಿ.

ಸಮಾನ ದೇಶಗಳ
ಹೊಸ ಒಕ್ಕೂಟ

1918ರಿಂದ 1922ರ ವರ್ಷಗಳು ತೀಕ್ಷ್ಣ ಅಂತರ್ಯುದ್ಧದ ವರ್ಷಗಳು. ರಶ್ಯನ್ ಸಾಮ್ರಾಜ್ಯದ ಒಂದಿನ ದಮನಕ್ಕೊಳಗಾದ ದೇಶಗಳಾದ ಉಕ್ರೇನ್, ಜಾರ್ಜಿಯ, ಆರ್ಮೇನಿಯಾ ಮುಂತಾದ ದೇಶಗಳ ಆಡಳಿತದಲ್ಲಿ ಬದಲಾವಣೆ ಬಂತು. 1922ರವೇಳೆಗೆ ಒಂದು ಸಮಾಜವಾದಿ ವ್ಯವಸ್ಥೆಯಡಿ ರಾಷ್ಟ್ರಗಳ ಒಂದು ಒಕ್ಕೂಟ ಸಾಧ್ಯವಾಯಿತು. ಸೋವಿಯತ್ ಸಮಾಜವಾದಿ ಗಣತಂತ್ರಗಳ ಒಕ್ಕೂಟ (ಯುಎಸ್‌ಎಸ್‌ಆರ್) ದೇಶಗಳ ಒಂದು ಸ್ವಯಂಪ್ರೇರಿತ ಸಂಘವಾಗಿ ರಚನೆಗೊಂಡಿತು. ಈ ಬೃಹತ್ ಸಾಧನೆಯ ಹಿಂದಿರುವುದು ಬೋಲ್ಶೆವಿಕ್‌ರ ಧೀರ ಚೈತನ್ಯ - ರಾಷ್ಟ್ರೀಯ ದಮನವನ್ನು ಕೊನೆಗೊಳಿಸಿ ಸ್ವಾತಂತ್ರ್ಯ ಒದಗಿಸುವ, ಅತ್ಯಂತ ಸಣ್ಣ ದೇಶಿ ಗುಂಪಿಗೂ ಸ್ವಾಯತ್ತತೆ ನೀಡುವ ತಮ್ಮ ನೀತಿಯನ್ನು ಅನುಷ್ಠಾನಕ್ಕೆ ತಂದ ಬೋಲ್ಶೆವಿಕರ ಧೀರ ಚೈತನ್ಯ. ಲೆನಿನ್ ಈ ಬೃಹತ್ ಕಾರ್ಯಕ್ಕೆ ನಿರಂತರ ಮಾರ್ಗದರ್ಶನ ನೀಡಿದರು 1918ರಲ್ಲಿ ದೇಸೀಯತೆ ವ್ಯವಹಾರಗಳ "ಕೋಮಿಸ್ಸಾರ್"ನ ಹುದ್ದೆಯನ್ನು ರಚಿಸಲಾಯಿತು. ದೇಸಿ ಧೋರಣೆ ಬಗ್ಗೆ ಲೆನಿನ್ ಮಾರ್ಗದರ್ಶನದಲ್ಲಿ ಪಕ್ಷದ ಪ್ರಮುಖ ವಕ್ತಾರರಾಗಿದ್ದ ಸ್ಟಾಲಿನ್ ಈ ಹುದ್ದೆಗೆ ನೇಮಕರಾದ ಮೊದಲ ಕೊಮಿಸ್ಸಾರ್. "ದೇಸಿಯತೆಗಳ ಜನತಾ ಕೊಮಿಸ್ಸಾರ್ ವಿಭಾಗ"ದಲ್ಲಿ ಪ್ರತಿಯೊಂದು ದೇಶೀಯ ಗುಂಪಿನ ಬಗ್ಗೆ ಪರಿಶೀಲಿಸಲು ಪ್ರತ್ಯೇಕ ವಿಭಾಗಗಳಿದ್ದವು. ಬಷ್ಕಿರ್‌ಗಳು, ತಾತಾರ್‌ಗಳು ಮುಂತಾದ ಅತಿ ಸಣ್ಣ ಗುಂಪುಗಳ ಹಿತಗಳನ್ನು ಪರಿಶೀಲಿಸಲು ಉದಾಹರಣೆಗೆ ಚುವಾಶ್ ಎಂಬ ಸಣ್ಣ ಗುಂಪಿನ ಜನಗಳ ಭಾಷೆಯಲ್ಲಿ

> *ಝಾರ್‌ಶಾಹಿ ಆಕ್ಷಿಕೆಯನ್ನು, ಊಳಿಗಮಾನ್ಯ ಅಧಿಕಾರವನ್ನು ಕಿತ್ತೊಗೆಯುವ ಹೋರಾಟದಲ್ಲಿ ರಷ್ಯಾದ ಕಾರ್ಮಿಕ ವರ್ಗ ಈ ದೇಸೀ ಗುಂಪುಗಳ ಜನಗಳ ಹೆಗಲಿಗೆ ಹೆಗಲು ಕೊಟ್ಟು ನಿಲ್ಲಬೇಕು, ಅಕ್ಟೋಬರ್ ಕ್ರಾಂತಿಯ ನಂತರ ಸಮಾನತೆಯ ಆಧಾರದ ಮೇಲೆ ದೇಶಗಳ ಒಕ್ಕೂಟವೊಂದನ್ನು ರಚಿಸೋಣ ಎಂದು ಕರೆ ನೀಡಿದರು ಲೆನಿನ್.*

ದೂರುಗಳನ್ನು ಪಡೆಯಲು ಒಂದು ಕಚೇರಿ ಸ್ಥಾಪನೆ ಅಥವಾ ಅತೀ ಸಣ್ಣಗುಂಪುಗಳ ಭಾಷೆಗಳಲ್ಲಿ ಕೂಡ ಸಂಬಂಧಪಟ್ಟ ಜನರಿಗೆ ದಿನಪತ್ರಿಕೆಗಳನ್ನು, ಕರಪತ್ರಗಳನ್ನು ಸರಕಾರೀ ಘೋಷಣೆಗಳನ್ನು ಹೇಳಲು ಜಿಲ್ಲಾ ಹಾಗೂ ಗ್ರಾಮ ಸೋವಿಯತ್‌ಗಳಿಗೆ ಸೂಚನೆ ನೀಡುವುದು ಇತ್ಯಾದಿಗಳ ಬಗ್ಗೆಯೂ ಇಲ್ಲಿ ಗಮನ ನೀಡಲಾಯಿತು.

ಯುಗಾಂತರಕಾರಿ ಪ್ರಗತಿ

ಈ ಧೋರಣೆಯ ಫಲಿತಾಂಶ ನಿಜವಾಗಿಯೂ ಅನುಪಮ. ಎಲ್ಲಾ ವಲಯಗಳಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಲಯಗಳಲ್ಲಿ ಸುಮಾರು ನೂರು ದೇಸಿಯತೆಗಳ ಜನರು ತ್ವರಿತಗತಿಯಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಿದರು. ಒಕ್ಕೂಟದಲ್ಲಿನ ಕಮ್ಮಿ ಅಭಿವೃದ್ಧಿ ಹೊಂದಿದ ದೇಶಗಳು ರಷ್ಯನ್ ದೇಸೀಯತೆಯ ಜನರ ಮಟ್ಟಕ್ಕೆ ಬರಲು ವಿಶೇಷ ನೆರವು ನೀಡಬೇಕೆಂಬುದನ್ನು ತನ್ನ ನೀತಿಯ ಮುಖ್ಯ ಅಂಶವಾಗಿಸಿತು ಹೊಸ ಸೋವಿಯೆತ್ ಪ್ರಭುತ್ವ. 1940ರ ವೇಳೆಗೆ ಮಧ್ಯ ಏಷ್ಯಾದ ಹಾಗೂ ಕಾಕೇಸಿಯಾದ ಗಣತಂತ್ರಗಳು ಸಾಧಿಸಿದ ಮುನ್ನಡೆ ಯುಗಾಂತರಕಾರಿ. 1940ರ ವೇಳೆಗೆ ಕೈಗಾರಿಕಾ ರಂಗದಲ್ಲಿ ಕಝಾಕಿಸ್ತಾನ್, ಕಿರ್ಗಿಝಿಸ್ತಾನ, ಜಾರ್ಜಿಯಾ, ಆರ್ಮೇನಿಯಾಸಾಧಿಸಿದ ಅಭಿವೃದ್ಧಿದರ ರಷ್ಯಾಕ್ಕಿಂತಲೂ ಹೆಚ್ಚಾಗಿತ್ತು. ಕನಿಷ್ಟ ಅಷ್ಟೇ ಆದರೂ ಆಗಿತ್ತು. 1960ರ ವೇಳೆಗೆ ಇದು ಇನ್ನಷ್ಟು ವ್ಯಾಪಕವಾಗಿತ್ತು. ಕ್ರಾಂತಿವೇಳೆಗೆ ಅತ್ಯಂತ ಹಿಂದುಳಿದಿದ್ದ ನಿರಕ್ಷರಿಗಳ ಮಧ್ಯ ಏಷ್ಯಾ ಗಣತಂತ್ರಗಳಲ್ಲಿ ಅರವತ್ತರ ದಶಕದ ವೇಳೆಗೆ ಒಟ್ಟು ಜನಸಂಖ್ಯೆಯಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳ ಅನುಪಾತ ಹಲವು ಪಾಶ್ಚಿಮಾತ್ಯ ದೇಶಗಳಿಗಿಂತಲೂ ಹೆಚ್ಚಿತ್ತು. ವೈದ್ಯಕೀಯ ಸೌಲಭ್ಯದ ರಂಗದಲ್ಲಿ 1940ರವೇಳೆಗೆ ಮಧ್ಯ ಏಷಿಯಾದಲ್ಲಿ ಡಾಕ್ಟರುಗಳ ಅನುಪಾತ (ಪ್ರತಿಸಾವಿರ ಜನರಿಗೆ) ಭಾರತ-ದಲ್ಲಿ 1956ರಲ್ಲಿಯೂ ಇರಲಿಲ್ಲ. ಎಲ್ಲಾ ಗಣತಂತ್ರಗಳಲ್ಲಿ ಸಮಾನಕೆಲಸಕ್ಕೆ ಸಮಾನ ವೇತನ ಕ್ರಮೇಣ ಎಲ್ಲೆಡೆ ವೇತನದಲ್ಲಿ ಸಮಾನತೆಯತ್ತ ಸಾಗಲು ನೆರವಾಯಿತು.

ಕಝಾಕಿಸ್ತಾನ್, ಉಝುಬೇಕಿಸ್ತಾನ, ಅಝುರ್‌ಬೈಝಾನ್‌ನಂತಹ ಗಣರಾಜ್ಯಗಳಲ್ಲಿ ಜೀವನ-ಮಟ್ಟ ತ್ವರಿತವಾಗಿ ಏರಿತು. ಮರಣದರ ಇಳಿಯಿತು. ಶಾಲೆಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾ-ಗುವವರ ಸಂಖ್ಯೆಯಲ್ಲಿ ದಾಪುಗಾಲಿನ ಮುನ್ನಡೆ ಕಂಡುಬಂತು.

ಲೆನಿನ್‌ವಾದೀ ದೇಸೀಯತೆಯ ನೀತಿಯಿಂದಾಗಿ ದೇಶ ಭಾಷೆಗಳ ಪುನರುತ್ಥಾನವಾಯಿತು. ಅವುಗಳ ಬಳಕೆ ಮತ್ತೆ ಆರಂಭವಾಯಿತು. ಕ್ರಾಂತಿಯ ನಂತರ ಸುಮಾರು ಐವತ್ತು ವಿವಿಧ ದೇಸಿ ಗುಂಪುಗಳಿಗೆ, ಜನಾಂಗಗಳಿಗೆ ಅವರದೇ ಅಕ್ಷರಮಾಲೆ, ಲಿಪಿ ದೊರೆಯಿತು. ಕೆಲವು ಕೇವಲ ಮಾತು ಭಾಷೆಗಳಾಗಿದ್ದವು. ಅವೀಗ ಸಿರಿಲ್ಲಿಕ್ ಲಿಪಿ ಪಡೆದು ಬರವಣಿಗೆಯ ಭಾಷೆಗಳೂ ಆದವು. ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಭಾಷೆಗಳ ಬಳಕೆ ಅಭಿವೃದ್ಧಿ ಕಂಡು ಬಂತು. 1917ರ ಅಕ್ಟೋಬರ್ 19ರಷ್ಟು ಹಿಂದೆಯೇ ಹೊರಡಿಸಿದ್ದ ಡಿಕ್ರಿಯಲ್ಲಿ ಎಲ್ಲಾ ಹಂತಗಳಲ್ಲಿ ಮೊದಲನೇ ತರಗತಿಯಿಂದ ಅತ್ಯುಚ್ಚ ಮಟ್ಟದವರೆಗೆ "ಮಾತೃಭಾಷೆಯಲ್ಲಿ ಶಿಕ್ಷಣ" ಎಂಬ ನೀತಿಯನ್ನು ಸಾರಲಾಗಿತ್ತು. ಸೋವಿಯೆತ್ ಒಕ್ಕೂಟದ ಯಾವುದೇ ಮೂಲೆಯಲ್ಲಿ ಒಕ್ಕೂಟದ ಯಾವುದೇ ಭಾಷೆಯನ್ನಾಡುವ ಜನ ತಮ್ಮ ಮಕ್ಕ-ಳಿಗೆ ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿಸುವ ಸೌಲಭ್ಯಗಳು ದೊರೆತವು.

ಅಂತರ್ರಾಷ್ಟ್ರೀಯವಾದಿ ನಿಲುವು

15 ಸಮಾಜವಾದೀ ಗಣತಂತ್ರಗಳು, 20ಸ್ವಾಯುತ್ತ ಗಣತಂತ್ರಗಳು ಹಾಗೂ ಸಣ್ಣ ದೇಶೀ ಗುಂಪುಗಳ, ಸಣ್ಣ ಜನಾಂಗೀಯ ಗುಂಪುಗಳ ಸ್ವಾಯುತ್ತ ಪ್ರದೇಶಗಳಿಂದ ಕೂಡಿದ ಒಂದು ಸ್ವಯಂಪ್ರೇರಿತ ಒಕ್ಕೂಟವಾಗಿ ಸೋವಿಯೆತ್ ಒಕ್ಕೂಟದ ಸೃಷ್ಟಿ ದೇಸೀ ಪ್ರಶ್ನೆಯ ಬಗ್ಗೆ ಮಾರ್ಕ್ಸ್‌ವಾದೀ ತಿಳುವಳಿಕೆಯನ್ನು ಸೃಜನಾತ್ಮಕವಾಗಿ ಅನ್ವಯಿಸಿದುದರ ಒಂದು ಫಲ. ಒಂದು

1917ರ ಅಕ್ಟೋಬರ್ 19ರಷ್ಟು ಹಿಂದೆಯೇ ಹೊರಡಿಸಿದ್ದ ಡಿಕ್ರಿಯಲ್ಲಿ ಎಲ್ಲಾ ಹಂತಗಳಲ್ಲಿ ಮೊದಲನೇ ತರಗತಿಯಿಂದ ಅತ್ಯುಚ್ಚ ಮಟ್ಟದವರೆಗೆ "ಮಾತೃಭಾಷೆಯಲ್ಲಿ ಶಿಕ್ಷಣ" ಎಂಬ ನೀತಿಯನ್ನು ಸಾರಲಾಗಿತ್ತು.

ದೇಶದ ಕಾರ್ಮಿಕ ವರ್ಗ ಇನ್ನೊಂದು ದೇಶವನ್ನು ದಮನಮಾಡುತ್ತಿದ್ದರೆ ಅದು ಸ್ವತಂತ್ರವಾಗಿರಲು ಸಾಧ್ಯವಿಲ್ಲ ಎಂಬ ವಿಚಾರ ಈ ತಿಳುವಳಿಕೆಯ ಮೂಲಭೂತ ಅಂಶ. ದೇಸೀ ಪ್ರಶ್ನೆಯ ಬಗ್ಗೆ ಲೆನಿನ್‌ರ ಆಳವಾದ ಅಂತರ್ದೃಷ್ಟಿ ಹಾಗೂ ತಿಳುವಳಿಕೆ ಸೋವಿಯೆತ್ ಒಕ್ಕೂಟದ ಸೃಷ್ಟಿಗೆ ನೇರ ಕಾಣಿಕೇನೀಡಿತಷ್ಟೇ ಅಲ್ಲ, ಅಂತರ್ರಾಷ್ಟ್ರೀಯವಾಗಿ ರಾಷ್ಟ್ರೀಯ ಹಾಗೂ ವಸಾಹತು ಜನಗಳ ಹೋರಾಟ ಸಾಮ್ರಾಜ್ಯಶಾಹಿ ಹಾಗೂ ವಿಶ್ವ ಬಂಡವಾಳಶಾಹಿಯ ವಿರುದ್ಧ ವಿಶ್ವ ಕಾರ್ಮಿಕವರ್ಗದ ಹೋರಾಟದಲ್ಲಿ ಒಂದು ಸಾಮರಿಕ ಮಿತ್ರ ಎಂಬ ಮಹತ್ವದ ತಿಳುವಳಿಕೆಗೂ ನೆರವಾಯಿತು. ಅಂತರ್ರಾಷ್ಟ್ರೀಯವಾದಿ ನೀತಿಗೆ ಬದ್ಧತೆ ಇವೆರಡರ ಸಂಯೋಜನೆಯ ಮೂಲಕವಾಗಿಯೇ 1920ರಲ್ಲಿ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಎರಡನೇ ಮಹಾಧಿವೇಶನದಲ್ಲಿ ಲೆನಿನ್‌ರ "ದೇಸೀ ಹಾಗೂ ವಸಾಹತು ಕುರಿತಾದ ಸಿದ್ಧಾಂತ" ರೂಪುಗೊಂಡಿತು.

ಸ್ವಯಂನಿರ್ಧಾರದ ನೀತಿ ಲೆನಿನ್‌ರವರ ಮಟ್ಟಿಗೆ ಒಂದು ಅಮೂರ್ತ ಹಕ್ಕಾಗಿರಲಿಲ್ಲ. ಅದನ್ನು ನಿರ್ದಿಷ್ಟ ಸನ್ನಿವೇಶಗಳಿಗೆ ಅನುಗುಣವಾಗಿ ಅನ್ವಯಿಸಬೇಕು. ಸ್ವಯಂ ನಿರ್ಧಾರದ ಬಗ್ಗೆ ಕಾರ್ಮಿಕ ವರ್ಗದ ನಿಲುವು ಅದರ ವರ್ಗ ಹಿತಾಸಕ್ತಿಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಅದು ಬೂರ್ಜ್ವಾವರ್ಗದ ನಿಲುವಿನಂತಿರಲು ಅಥವಾ ಅದರ ಬಾಲಂಗೋಚಿಯಾಗಲು ಸಾಧ್ಯವಿಲ್ಲ. ವಸಾಹತುಶಾಹೀ ದಮನದ ವಿರುದ್ಧ ರಾಷ್ಟ್ರೀಯ ವಿಮೋಚನೆಯ ಘಟ್ಟದಲ್ಲಿ ಕಾರ್ಮಿಕವರ್ಗ ಊಳಿಗಮಾನ್ಯಶಕ್ತಿಗಳ ಹಾಗೂ ವಿದೇಶೀ ಶೋಷಣೆಯ ವಿರುದ್ಧ ಹೋರಾಟದಲ್ಲಿ ಬೂರ್ಜ್ವಾವರ್ಗದ ಜತೆಗೆ ನಿಲ್ಲುತ್ತದೆ. ರಾಷ್ಟ್ರೀಯ ಸ್ವಾತಂತ್ರ್ಯ ಸಾಮಾಜಿಕ ವರ್ಗಗಳು ರಚನೆಗೊಳ್ಳಲು ಅವುಗಳು ಭಿನ್ನಗೊಳ್ಳುತ್ತಾ ಹೋಗಿ ವರ್ಗಹೋರಾಟ ಮುನ್ನಡೆಯಲು ಅವಕಾಶಮಾಡಿಕೊಡುತ್ತದೆ.

ಮುಂದಿನಘಟ್ಟದಲ್ಲಿ, ಬೂರ್ಜ್ವಾ ಪ್ರಭುತ್ವ ಕಾರ್ಮಿಕವರ್ಗದ ಪ್ರಜಾಪ್ರಭುತ್ವದತ್ತ ಸಾಗುವ ಘಟ್ಟದಲ್ಲಿ ಕಾರ್ಮಿಕವರ್ಗ ಇತರ ದೇಸಿ ಗುಂಪುಗಳ ದುಡಿಯುವ ಜನರೊಂದಿಗೆ ಐಕ್ಯತೆಯನ್ನು ಒತ್ತಿಹೇಳುತ್ತದೆ. ಬೂರ್ಜ್ವಾವರ್ಗ ರಾಷ್ಟ್ರೀಯ ಆಕಾಂಕ್ಷೆಯ ಏಕಮಾತ್ರ ಆಗರವಾಗಿ ಅದರ ಕೈಯಲ್ಲಷ್ಟೇ ದೇಶದ ಭವಿಷ್ಯ ಇರುವಂತಹ ಸ್ಥಿತಿಯನ್ನು ಕಾರ್ಮಿಕ ವರ್ಗ ಬದಲಿಸಬಯಸುತ್ತದೆ. ಸಮಾಜವಾದೀ ಘಟ್ಟದಲ್ಲಿ, ಅಂತರ್ರಾಷ್ಟ್ರೀಯ ಸಮಾಜವಾದದ ಹಿತಾಸಕ್ತಿಗಳಿಗೆ ಅನುಕೂಲವಾಗಿದ್ದರೆ ಮಾತ್ರ ಸ್ವಯಂನಿರ್ಧಾರದ ಹಕ್ಕನ್ನು ಕಾರ್ಮಿಕವರ್ಗ ಚಲಾಯಿಸುತ್ತದೆ.

ಪ್ರಬಲರ ಸಂಕುಚಿತವಾದದ ವಿರುದ್ಧ ಸಮರ

ಲೆನಿನ್ ಸತತವಾಗಿ ಪ್ರಬಲ ರಶ್ಯನ್ ಸಂಕುಚಿತವಾದ ಮತ್ತೆ ಹಣಕಿ ಹಾಕದಂತೆ ಎಚ್ಚರಿಕೆ ನೀಡುತ್ತಾ ಬಂದಿದ್ದರು. ಪಕ್ಷದಲ್ಲಾಗಲಿ, ಸಮಾಜದಲ್ಲಾಗಲಿ ಇಂತಹ ಪ್ರಾಬಲ್ಯ ಮೆರೆಸುವ ಯಾವುದೇ ಸಂದರ್ಭ ಕಂಡರೂ ಅದರ ವಿರುದ್ಧ ಅವರು ಸಮರವನ್ನೇ ಸಾರುತ್ತಿದ್ದರು. ತಮ್ಮ ಕೊನೆಯದಿನಗಳ ಅವರ ಈ ಹೋರಾಟ ಎಲ್ಲಾ ಕಾರ್ಮಿಕ ವರ್ಗದ ಕ್ರಾಂತಿಕಾರಿಗಳಿಗೊಂದು ಪಾಠ

1920ರಲ್ಲಿ ಉಕ್ರೇನ್‌ನಲ್ಲಿ ಸೋವಿಯತ್ ಅಧಿಕಾರ ಮತ್ತೆ ಸ್ಥಾಪನೆಗೊಂಡಾಗ ಲೆನಿನ್ "ಉಕ್ರೇನ್‌ನಲ್ಲಿ ಸೋವಿಯತ್ ಅಧಿಕಾರ" ಎಂಬ ನಿರ್ಣಯದ ಕರಡು ತಯಾರಿಸಿದರು. ಅದನ್ನು ಪಕ್ಷದ

ವಿಶೇಷ ಸಮ್ಮೇಳನವೊಂದರಲ್ಲಿ ಮಂಡಿಸಲಾಯಿತು. ಈ ನಿರ್ಣಯ ಉಕ್ರೇನಿಯನ್ ಭಾಷೆಯನ್ನು ಎರಡನೇ ಸ್ಥಾನಕ್ಕೆ ತಳ್ಳುವ ಕೃತಕ ಪ್ರಯತ್ನಗಳನ್ನು ಖಂಡಿಸಿ ಎಲ್ಲಾ ಅಧಿಕಾರಿಗಳೂ ಉಕ್ರೇನಿಯನ್ ಭಾಷೆ ಮಾತನಾಡಲು ಸಮರ್ಥರಾಗಬೇಕು ಎಂದಿತ್ತು.

ನಂತರ ಜಾರ್ಜಿಯಾದ ಸಮಸ್ಯೆಗಳನ್ನು ನಿರ್ವಹಿಸಿದ ರೀತಿಯ ಬಗ್ಗೆ ಲೆನಿನ್ ತಮ್ಮ ನಿಕಟ ಸಹಯೋಗಿಗಳಾದ ಓರ್ಝೋನಿಕಿಡ್ಜೆ ಹಾಗೂ ಸ್ಟಾಲಿನ್‌ರನ್ನು ತರಾಟೆಗೆ ತಗೊಂಡ ಪ್ರಖ್ಯಾತ ಘಟನೆ ನಡೆಯಿತು. ರಶ್ಯನ್ನರ ಪ್ರಾಬಲ್ಯ ನಡೆಸುವ ನಿಲುವನ್ನು ವ್ಯಕ್ತಪಡಿಸಿದುದಕ್ಕೆ ಅವರನ್ನು ಕಟುವಾಗಿ ಟೀಕಿಸಿದರು. ಝೆರ್ಝಿನ್ಸ್ಕಿಯವರಂತಹ ರಶ್ಯನೇತರ ಬೊಲ್ಶೆವಿಕ್ ಮುಖಂಡರೂ ರಶ್ಯನರ ಪ್ರಬಲ ಸಂಕುಚಿತವಾದವನ್ನು ಮೈಗೂಡಿಸಿಕೊಂಡಿದ್ದಾರೆ ಎಂದು ಟಿಪ್ಪಣಿ ಮಾಡಿದರು.

ಹೊಸ ಸಮಸ್ಯೆಗಳು-
ವಿಕೃತಿಗಳು

ಮೊದಲ ದಶಕಗಳ ಈ ಅನುಪಮ ಸಾಧನೆಗಳನ್ನು ನಂತರ ಮುಂದುವರೆಸಲಾಗಲಿಲ್ಲ. ಅದಕ್ಕೆ ಕಾರಣಗಳು ಹಲವು. ಸತತ ಎಚ್ಚರಿಕೆ ವಹಿಸದಿದ್ದರೆ, ಹೋರಾಟ ನಡೆಸದಿದ್ದರೆ ಪ್ರಬಲ ರಶ್ಯನ್ ಸಂಕುಚಿತವಾದದ ಕೇಂದ್ರೀಕರಣದ ಪ್ರವೃತ್ತಿ ಎದ್ದು ಬರುವುದು ಎಂದು ಲೆನಿನ್‌ರು ವ್ಯಕ್ತಪಡಿಸುತ್ತಿದ್ದ ಭಯ ಕೆಲವು ಅಂಶಗಳಲ್ಲಿ ನಿಜವಾಯಿತು. ಮುವತ್ತರ ಹಾಗೂ ನಲ್ವತ್ತರ ದಶಕದ ಅಸಾಮಾನ್ಯ ಪರಿಸ್ಥಿತಿ, ವಿಪರೀತ ಮಟ್ಟದ ಕೇಂದ್ರೀಕರಣ ಹಾಗೂ ನಾಝೀ ಅತಿಕ್ರಮಣವನ್ನು ಎದುರಿಸಬೇಕಾದ ವಿಕಟ ಪರಿಸ್ಥಿತಿ ಇವುಗಳೇ ಮುಖ್ಯ ಅಂಶಗಳಾಗಿ ಬಿಟ್ಟು ಇದರ ಪರಿಣಾಮವಾಗಿ ದೇಸೀ ನೀತಿಯ ಸಮಾನತೆಯ ಅಂಶ ಬದಿಗೊತ್ತಲ್ಪಟ್ಟಿತು.

ಅಧಿಕಾರಶಾಹಿಯ ಬೆಳವಣಿಗೆ, ಸಮಾಜವಾದಿ ಪ್ರಜಾಪ್ರಭುತ್ವದ ವಿಸ್ತರಣೆಯಾಗದಿದ್ದುದು ಸಾಮಾಜಿಕ ಪ್ರಜ್ಞೆಯ ಮೇಲೆ, ವಿವಿಧ ಗಣತಂತ್ರಗಳ, ಸ್ವಾಯತ್ತ ಪ್ರದೇಶಗಳ ಬೆಳವಣಿಗೆಗಳ ಮೇಲೆ ದುಷ್ಪರಿಣಾಮ ಬೀರಿತು. ಆರ್ಥಿಕ ವಲಯದಲ್ಲಿ ವಿಶೇಷವಾಗಿ ಎಪ್ಪತ್ತರ ದಶಕದ ಮಧ್ಯದಿಂದ ಕಾಣಸಿಕೊಂಡ ಸ್ಥಗಿತತೆ ಅಸಂತೃಪ್ತಿಯನ್ನು ಹುಟ್ಟು ಹಾಕಿತು. ಹಿಂದೆ ಹಿಂದುಳಿದಿದ್ದ ದೇಸೀ ಗುಂಪುಗಳಲ್ಲಿ ಕಳೆದ ಐದಾರು ದಶಕಗಳ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿ ಹೊಸ ವರ್ಗಗಳನ್ನು, ಬೆಳೆಯುತ್ತಿರುವ ಬುದ್ಧಿ ಜೀವಿ ವರ್ಗಗಳನ್ನು ಸೃಷ್ಟಿಸಿತ್ತು. ಸೋವಿಯತ್ ಒಕ್ಕೂಟದಲ್ಲಿ ಸಮಗ್ರೀಕರಣದ ಪ್ರಕ್ರಿಯೆ ಬಲಗೊಳ್ಳುವುದರೊಂದಿಗೇ ದೇಸೀ ಪ್ರಜ್ಞೆಯೂ ಬೆಳೆಯುತ್ತಿತ್ತು. ತಮ್ಮ ಸಾಂಸ್ಕೃತಿಕ, ದೇಶೀಯ ಪರಂಪರೆಯ ಶೋಧನೆ, ರಾಷ್ಟ್ರೀಯ ಜೀವನದಲ್ಲಿ ಹೊಸದಾಗಿ ಶಿಕ್ಷಣ ಪಡೆದ ವಿಭಾಗಗಳಿಗೆ ತಾವೂ ನೇತೃತ್ವದ ಪಾತ್ರ ವಹಿಸಬೇಕೆಂಬ ಆಕಾಂಕ್ಷೆ ಇವೆಲ್ಲಾ ಸಹಜ ಪ್ರಕ್ರಿಯೆ. ಇಲ್ಲಿ ವಿಫಲತೆ ಕಂಡುಬಂದದ್ದು ಈ ಅವಶ್ಯಕತೆಗಳನ್ನು, ಆಕಾಂಕ್ಷೆಗಳನ್ನು ಸಮಾಜವಾದೀ ಹಾಗೂ ಪ್ರಜಾಪ್ರಭುತ್ವ ವಿಧಾನದಲ್ಲಿ ಈಡೇರಿಸುವಲ್ಲಿ.

ವಿಶ್ವ ಕ್ರಾಂತಿಕಾರಿ ಪ್ರಕ್ರಿಯೆಯ ಹಾಗೂ ದೇಶೀಯ [illegible] ಗಾಢವಾದ ತಿಳುವಳಿಕೆ ಹೊಂದಿದ್ದ ಲೆನಿನ್ ಜನಗಳ ನಡುವೆ, ದೇಶಗಳ ನಡುವೆ ರಾಷ್ಟ್ರೀಯ ಹಾಗೂ ಪ್ರಭುತ್ವದ ಭಿನ್ನತೆಗಳು [illegible] ಕಾರ್ಮಿಕ [illegible] ಸಾಧನೆಯಾದ ನಂತರವೂ ತುಂಬಾ, ತುಂಬಾ ದೀರ್ಘ ಕಾಲದವರೆಗೆ [illegible] ಎಂದು ಎಚ್ಚರಿಸಿದ್ದರು. ಆದರೂ ಸೋವಿಯತ್ ಒಕ್ಕೂಟದಲ್ಲಿ ಕಮ್ಯುನಿಸ್ಟ್ ಮುಖಂಡರು ಹಾಗೂ ಸಿಪಿಎಸ್‌ಯು ದೇಸೀಯತೆಯ ಪ್ರಶ್ನೆ ಶಾಶ್ವತವಾಗಿ ಪರಿಹಾರವಾಗಿದೆ ಎಂಬ ತೀರ್ಮಾನಕ್ಕೆ ಬಂದುಬಿಟ್ಟರು. ಸೃಜನಾತ್ಮಕ ಲೆನಿನ್‌ವಾದೀ ನಿಲುವು ಜಡಗೊಂಡು ಹೊಸ ಸಮಸ್ಯೆಗಳನ್ನು, ಹೊಸ ಬೆಳವಣಿಗೆಗಳನ್ನು ಎದುರಿಸಲು ಹೊಸ ಕ್ರಮಗಳನ್ನು ಹೊಸ ಹೆಜ್ಜೆಗಳನ್ನು ಇಡದಂತೆ ತಡೆಗಟ್ಟಿತು. ಬಹಳಷ್ಟು ವಲಸೆ ಹಾಗೂ ವಿವಿಧ ದೇಸೀ ಗುಂಪುಗಳ ಅಂತರ್ಮಿಲನ

ದೇಸೀಯತೆಯ ಸಮಸ್ಯೆಗಳನ್ನು ಹೇಗೆ ಸರಿಯಾಗಿ ನಿರ್ವಹಿಸಲಿಲ್ಲ ಅಥವಾ ನಿರ್ಲಕ್ಷಿಸಲಾಯಿತು ಎಂಬುದು ಕೆಲವು ಸಣ್ಣ ಘಟನೆಗಳಲ್ಲಿ ಕಂಡು ಬಂತು. ಪೆರೆಸ್ಟ್ರೋಯಿಕಾದ ಅವಧಿಯಲ್ಲಿ ಕೆಲವು ಜಾರ್ಜಿಯಾದ ರಾಷ್ಟ್ರೀಯವಾದಿಗಳು ಎತ್ತಿದ ಬೇಡಿಕೆಗಳಲ್ಲೊಂದು - ಜಾರ್ಜಿಯನ್ ಭಾಷೆಯ ಟೈಪ್‌ರೈಟರ್‌ಗಳನ್ನು ಒದಗಿಸಬೇಕು ಎಂಬುದು. ಸಾಂಸ್ಕೃತಿಕ ಹಾಗೂ ಭಾಷಾ ವಲಯದಲ್ಲಿ ಅಪಾರ ಮುನ್ನಡೆ ಸಾಧಿಸಿದರೂ ಸೂಕ್ಷ್ಮ ದೇಶೀ ಭಾವನೆಗಳಿಗೆ ಹೇಗೆ ನಿಕಟವಾದ, ವಿವರವಾದ ಗಮನ ಒಂದು ಅಪವಾದವಾಗಿಬಿಟ್ಟಿತು ಎಂಬುದನ್ನು ಇದು ತೋರಿಸುತ್ತದೆ. ಒಕ್ಕೂಟದ ವಿವಿದೆಡೆ ಪಕ್ಷದ ಮುಖ್ಯ ಕಾರ್ಯಕರ್ತರನ್ನು ಕಳಿಸುವುದರಲ್ಲೂ ಇದು ಕಂಡು ಬಂತು. 1987ರಲ್ಲಿ ಕಝಾಕಿಸ್ತಾನ-

ಹೊಸ ಹೊಸ ಪ್ರದೇಶಗಳಲ್ಲಿ, ವಿವಿಧ ಗಣತಂತ್ರಗಳ ಕೇಂದ್ರಗಳಲ್ಲಿ ನಡೆದು ಸೌಹಾರ್ದಯುತ ಮಿಲನದ ಬಾಳ್ವೆಯ ಹೊಸ ದಾಖಲೆಗಳು ನಿರ್ಮಾಣವಾದವು. ಆದರೆ ಕಳೆದೆರಡು ದಶಕಗಳ ಆರ್ಥಿಕ ಸ್ಥಗಿತತೆ, ಹೆಚ್ಚುತ್ತಿರುವ ದೇಶೀ ಆಕಾಂಕ್ಷೆಗಳಿಂದಾಗಿ ಹೊಸ ಘರ್ಷಣೆಗಳು ಎದ್ದು ಬರಲಾರಂಭಿಸಿದವು. ಸೋವಿಯತ್ ರಾಷ್ಟ್ರಪ್ರೇಮದ ಒತ್ತು ನೀಡಿದ್ದರೂ ಅದಕ್ಕೂ ಅದು ವಿವಿಧ ದೇಶೀ ಪ್ರಜೆಗಳ ವಿವಿಧ ಮಟ್ಟಗಳಿಗೂ ಹೊಂದಾಣಿಕೆಯಿರಲಿಲ್ಲ. ಇದರಿಂದ ಹೊಸ ಕಿರಿಕಿರಿಗಳು, ವಿಕೃತಿಗಳು ಹುಟ್ಟಿಕೊಂಡವು. ಸೋವಿಯತ್ ಸಮಾಜದಲ್ಲಿ ಸೈದ್ಧಾಂತಿಕ ದುರ್ಬಲತೆಯಿಂದ ಉಂಟಾದ ತೆರವನ್ನು ರಾಷ್ಟ್ರೀಯವಾದಿ ವಿಚಾರಗಳು ತುಂಬಿದವು.

ಧೋರಣೆಗಳು ಜಡಗೊಂಡವು

ದಲ್ಲಿ ಸ್ಥಳೀಯ ಮುಖಂಡನನ್ನು ವಜಾ ಮಾಡಿದ ನಂತರ ಒಬ್ಬ ರಶ್ಯನ್ ಮುಖಂಡನನ್ನು ಪಕ್ಷದ ಕಾರ್ಯದರ್ಶಿಯಾಗಿ ನೇಮಿಸಿದ್ದು ಸೂಕ್ಷ್ಮಜ್ಞತೆಯ ಅಭಾವದ ಇನ್ನೊಂದು ಉದಾಹರಣೆ.

ಪಕ್ಷ ದೇಸೀಯತೆಯ ಪ್ರಶ್ನೆಯ ಕುರಿತು ಆಳವಾದ ವಿಶ್ಲೇಷಣೆ ಮತ್ತು ಚಿಂತನೆಯನ್ನು ಬಹಳ ಹಿಂದೆಯೇ ತ್ಯಜಿಸಿಬಿಟ್ಟಿತ್ತು. ಬಹಳವಾಗಿ ಸುದ್ದಿ ಮಾಡಿದ ಸಿಪಿಎಸ್‌ಯುನ 27ನೇ ಮಹಾಧಿವೇಶನಕ್ಕೆ ಗೋರ್ಬಚೇವ್ ಸಲ್ಲಿಸಿದ ವರದಿ ಆರ್ಥಿಕ ಸ್ಥಗಿತತೆಯ ಬಗ್ಗೆ, ಸೋವಿಯತ್ ಸಮಾಜದ ಇತರ ಅನಾರೋಗ್ಯಕರ ಬೆಳವಣಿಗೆಗಳ ಬಗ್ಗೆ ವಿವರವಾಗಿ ಚರ್ಚಿಸಿದರೂ ದೇಸೀ ಪ್ರಶ್ನೆಯ ಕುರಿತು ಆತ್ಮ- ಸಂತೃಪ್ತಿಯ ಭಾವ ವ್ಯಕ್ತಪಡಿಸಿತ್ತು. ಸೆಪ್ಟೆಂಬರ್ 1989ರಲ್ಲಿ ಸಿಪಿಎಸ್‌ಯು 'ದೇಸೀಯತೆಯ ಕುರಿತ ವೇದಿಕೆ' ಎಂಬ ದಸ್ತಾವೇಜನ್ನು ಅಂಗೀಕರಿಸಿತು ನಿಜ. ಆದರೆ ಆಗಲೇ ಬಹಳ ತಡವಾಗಿತ್ತು. *ಗೋರ್ಬಚೇವ್ ಸುಧಾರಣೆಗಳು ಸಮಾಜವಾದಿ ವ್ಯವಸ್ಥೆಯನ್ನು ವಿಘಟಿಸಿದ್ದಷ್ಟೇ ಅಲ್ಲ, ದೇಶೀ ಪ್ರಜ್ಞೆಯ ಮೇಲೂ ಅದು ಆಳವಾದ ಛಿದ್ರಕಾರಿ ಪ್ರಭಾವ ಬೀರಿತು. ಗೋರ್ಬಚೇವ್ ಅವಧಿ ಅಂತರ್‌ರಾಷ್ಟ್ರೀಯತೆ ಹಾಗೂ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ನಿಲುವಿನಿಂದ ದೂರವಾಗಿ ಬೂರ್ಜ್ವಾ ರಾಷ್ಟ್ರೀಯವಾದವನ್ನು ಪ್ರೋತ್ಸಾಹಿಸಿತು. ಅಂತಿಮವಾಗಿ ಅದು ಸಂಕುಚಿತವಾದದ, ಜನಾಂಗೀಯ ಹಿಂಸಾಚಾರವಾಗಿ ಅವನತಿಗೊಂಡಿತು.* ಕೊನೆಗೆ ಸಿಪಿಎಸ್‌ಯು ಕೂಡಾ ಅಂತಿಮವಾಗಿ ನಿರ್ನಾಮಗೊಳ್ಳುವ ಮೊದಲು ಒಂದು ಕೇಂದ್ರೀಕೃತ ಪಕ್ಷವಾಗಿ ಉಳಿಯದೆ ವಿವಿಧ ದೇಶೀ ಕಮ್ಯುನಿಸ್ಟ್ ಪಕ್ಷಗಳ ಒಕ್ಕೂಟವಾಗಿ ಮಾರ್ಪಟ್ಟಿತು.

ಸೋವಿಯತ್ ಒಕ್ಕೂಟದಲ್ಲಿ ಕಮ್ಯುನಿಸ್ಟ್ ಮುಖಂಡರು ಹಾಗೂ ಸಿಪಿಎಸ್‌ಯು ದೇಸೀಯತೆಯ ಪ್ರಶ್ನೆ ಶಾಶ್ವತವಾಗಿ ಪರಿಹಾರವಾಗಿದೆ ಎಂಬ ತೀರ್ಮಾನಕ್ಕೆ ಬಂದುಬಿಟ್ಟರು. ಸೃಜನಾತ್ಮಕ ಲೆನಿನ್‌ವಾದೀ ನಿಲುವು ಜಡಗೊಂಡು ಹೊಸ ಸಮಸ್ಯೆಗಳನ್ನು ಹೊಸ ಬೆಳವಣಿಗೆಗಳನ್ನು ಎದುರಿಸಲು ಹೊಸ ಕ್ರಮಗಳನ್ನು ಹೊಸ ಹೆಜ್ಜೆಗಳನ್ನು ಇಡದಂತೆ ತಡೆಗಟ್ಟಿತು.


ಮುವತ್ತರ ಹಾಗೂ ನಲ್ವತ್ತರ ದಶಕದ ಅಸಾಮಾನ್ಯ ಪರಿಸ್ಥಿತಿ, ವಿಪರೀತ ಮಟ್ಟದ ಕೇಂದ್ರೀಕರಣ ಹಾಗೂ ನಾಝೀ ಅತಿಕ್ರಮಣವನ್ನು ಎದುರಿಸಬೇಕಾದ ವಿಕಟ ಪರಿಸ್ಥಿತಿ ಇವುಗಳೇ ಮುಖ್ಯ ಅಂಶಗಳಾಗಿ ಬಿಟ್ಟು ಇದರ ಪರಿಣಾಮವಾಗಿ ದೇಸೀ ನೀತಿಯ ಸಮಾನತೆಯ ಅಂಶ ಬದಿಗೊತ್ತಲ್ಪಟ್ಟಿತು.

ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಭಾವನೆಯನ್ನಾಧರಿಸಿದ ದೇಸೀಯತೆಗಳ ಸಂಘವೊಂದನ್ನು ಸ್ಥಾಪಿಸುವ ಲೆನಿನ್‌ವಾದೀ ಕನಸನ್ನು ಸಾಕಾರಗೊಳಿಸಲು ಸ್ಥಾಪನೆಗೊಂಡ ಸೋವಿಯತ್ ಒಕ್ಕೂಟ ಇಂದಿಲ್ಲ. ಅದರ ವಿಘಟನೆಯ ನಂತರ ಕಂಡು ಬಂದಿರುವ ಪರಸ್ಪರ ಮಾರಕವಾದ ಸಂಘರ್ಷಗಳು, ರಕ್ತಪಾತ ಆ ಒಕ್ಕೂಟದ ಸಾಧನೆಗಳು ಎಷ್ಟೊಂದು ಭವ್ಯವಾಗಿದ್ದವು, ಆ ಒಕ್ಕೂಟದ ನೀತಿಗಳು ಎಷ್ಟೊಂದು ಸರಿಯಾಗಿದ್ದವು ಎಂಬುದನ್ನು ಎತ್ತಿ ತೋರಿಸಿವೆ. ನಗೊರ್ನೋ ಕಾರಾಬಾಖ್ ಮೇಲೆ ಅರ್ಮೇನಿಯಾ, ಅಝುರ್‌ಬೈಝಾನ್ ಪರಸ್ಪರ ಕಡಿದುಕೊಳ್ಳುತ್ತಿದ್ದಾರೆ. ಜಾರ್ಜಿಯಾ, ಅಬ್‌ಕಾಝಿಯಾ ದೇಸೀ ಗುಂಪುಗಳೊಂದಿಗೆ, ಪೋಲ್ದೇವಿಯಾ ಆಸೇಶಿಯನ್ ದೇಸೀ ಗುಂಪಿನೊಂದಿಗೆ ತಿಕ್ಕಾಟದಲ್ಲಿ ಹಿಂಸಾಚಾರದಲ್ಲಿ ನಜ್ಜುಗುಜ್ಜಾಗುತ್ತಿವೆ. ಸಮಾಜವಾದದ, ಲೆನಿನ್‌ವಾದಿ ದೇಸೀಯತೆಯ ನೀತಿಯ ಬಂಧವಿಲ್ಲದ ಸೋವಿಯತ್ ಒಕ್ಕೂಟ ಅಂತರ್ಯುದ್ಧ ಕಾಲದ ಪರಿಸ್ಥಿತಿಯಲ್ಲಿದೆ. ಸಮಾಜವಾದ ಸ್ಥಾಪಿಸಿದ ಇನ್ನೊಂದು ಪ್ರಮುಖ ಬಹು ದೇಸೀ ಪ್ರಭುತ್ವವಾದ ಯುಗೋಸ್ಲಾವಿಯಾ ಕೂಡಾ ಈಗ ಮುರಿದು ಬಿದ್ದು ಹಿಂಸಾಚಾರ, ಅಂತರ್ಯುದ್ಧದಿಂದ ಸುಸ್ತಾಗಿದೆ.

ತಮಾಷೆಯ ಸಂಗತಿಯೆಂದರೆ ಇವೆಲ್ಲಾ ಬೂರ್ಜ್ವಾ ರಾಷ್ಟ್ರೀಯತೆಯ ವಿಜಯವನ್ನು ತೋರಿಸುವುದಿಲ್ಲ, ಬದಲಾಗಿ ಲೆನಿನ್‌ವಾದೀ ಧೋರಣೆಯ ಸತ್ಯತೆಯನ್ನೇ ಎತ್ತಿ ಹಿಡಿದಿವೆ. ಸಮಾಜವಾದವಿಲ್ಲದೆ, ವಿವಿಧ ದೇಶೀ ಗುಂಪುಗಳ ಸಮಾನತೆಯಿಲ್ಲದೆ ನೈಜ ರಾಷ್ಟ್ರೀಯ ಉದ್ಧಾರ ಕೇವಲ ಭ್ರಮೆ. ಅಕ್ಟೋಬರ್ ಕ್ರಾಂತಿ ಮತ್ತು ವಿಶ್ವದ ಮೊದಲ ಸಮಾಜವಾದೀ ಪ್ರಭುತ್ವ ರೂಪಿಸಿದ ದೇಸೀಯತೆಯ ಧೋರಣೆಯ ಪರಂಪರೆ ಶಾಶ್ವತವಾಗಿ ನಿಲ್ಲುವಂತದ್ದು. ವಸಾಹತುಗಳ ರಾಷ್ಟ್ರೀಯ ವಿಮೋಚನಾ ಆಂದೋಲನಗಳ ಮೇಲೆ ಮಾಜಿ ವಸಾಹತುಗಳ ಸ್ವತಂತ್ರ ಪ್ರಭುತ್ವಗಳ ನೀತಿಗಳ ಮೇಲೆ ಅದರ ಆಳವಾದ ಪ್ರಭಾವ ಎಷ್ಟೆಂಬುದಕ್ಕೆ ಇಪ್ಪತ್ತನೇ ಶತಮಾನದ ರಾಷ್ಟ್ರೀಯ ಆಂದೋಲನಗಳ ಇತಿಹಾಸವೇ ಸಾಕ್ಷಿ.

ಸ್ವತಃ ಒಂದು ಕ್ಲಿಷ್ಟ ಬಹುದೇಸೀ ರಾಷ್ಟ್ರವಾದ ಭಾರತದಲ್ಲಿ ಅಕ್ಟೋಬರ್ ಸಮಾಜವಾದೀ ಕ್ರಾಂತಿಯ ನಂತರ ಸೋವಿಯತ್ ಒಕ್ಕೂಟದ ದೇಸೀಯತೆಯ ಧೋರಣೆಯ ವಿಶಿಷ್ಟ ಅನುಭವಗಳನ್ನು ಅಧ್ಯಯನ ಮಾಡಿ ಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ವಿಶ್ವ ಸಮಾಜವಾದದ ಶಕ್ತಿಗಳು ಮತ್ತೆ ಒಂದಾಗಿ ಮುನ್ನಡೆಯುವ ಕ್ಲಿಷ್ಟಕರ ಹಾಗೂ ಕಷ್ಟಕರ ಹೊಣೆ ನಿಭಾಯಿಸಬೇಕಾದ ಮುಂದಿನ ದಿನಗಳಲ್ಲಿ ದೇಸೀ ಪ್ರಶ್ನೆಯ ಮೇಲೆ ಲೆನಿನ್‌ವಾದೀ ಧೋರಣೆಯ ಶ್ರೀಮಂತ ಅನುಭವಗಳನ್ನು, [illegible]ಗಳನ್ನು ಅರಗಿಸಿಕೊಂಡು ಈ ಜೀವನ್ಮರಣ ಪ್ರಶ್ನೆಯ ಮೇಲೆ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ನಿಲುವನ್ನು ಇನ್ನಷ್ಟು ಸೃಜನಾತ್ಮಕವಾಗಿ ಬೆಳೆಸಬೇಕಾಗಿದೆ.

ಲೆನಿನ್ 'ಜನಗಳ ನಡುವೆ, ದೇಶಗಳ ನಡುವೆ ರಾಷ್ಟ್ರೀಯ ಹಾಗೂ ಪ್ರಭುತ್ವದ ಭಿನ್ನತೆಗಳು [illegible] ಮಟ್ಟದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರ ಸಾಧನೆಯಾದ ನಂತರವೂ ತುಂಬಾ, ತುಂಬಾ [illegible] ಕಾಲದವರೆಗೂ ಇರುತ್ತವೆ' ಎಂದು ಎಚ್ಚರಿಸಿದ್ದರು. ಆದರೂ ಸೋವಿಯತ್ ಒಕ್ಕೂಟದಲ್ಲಿ [illegible] ಮುಖಂಡರು ಹಾಗೂ ಸಿಪಿಎಸ್‌ಯು ದೇಸೀಯತೆಯ ವಸಾಹತುಗಳ ರಾಷ್ಟ್ರೀಯ [illegible]ಚನಾ ಆಂದೋಲನಗಳ ಮೇಲೆ ಮಾಜಿ ವಸಾಹತುಗಳ ಸ್ವತಂತ್ರ ಪ್ರಭುತ್ವಗಳ ನೀತಿಗಳ [illegible] ಅದರ ಆಳವಾದ ಪ್ರಭಾವ ಎಷ್ಟೆಂಬುದಕ್ಕೆ ಇಪ್ಪತ್ತನೇ ಶತಮಾನದ ರಾಷ್ಟ್ರೀಯ ಆಂದೋಲ[illegible] ಇತಿಹಾಸವೇ ಸಾಕ್ಷಿ.



ಜನಸಮೂಹ
ಕ್ರಾಂತಿಕಾರಿ ಗುಂಪುಗಳನ್ನು
ಒಟ್ಟಾಗಿ ಗುಂಪುಗಳನ್ನು
ಸೇರಿಸಿಕೊಂಡು
ಕ್ರಾಂತಿಕಾರಿ ದುಡಿಯುವ
ವರ್ಗದ ಹಾದಿಯನ್ನು
ವಿಸ್ತರಿಸಿದ
ತೃತೀಯ ಅಂತರ್‌ರಾಷ್ಟ್ರೀಯದ
ಮೇ 1, 1919ರ
ಮುಖ ಪುಟ

ಕ್ರಾಂತಿಯ ಕೆಂಪು ಪುಷ್ಪ ಭಾರತದಿ ಬೀರಿದ ಕಂಪು

-ಎಸ್. ರಾಮಚಂದ್ರ ಪಿಳ್ಳೆ

ರಾಜ ರಾಣಿಯರ ಆಟ ಚೆಲ್ಲಾಟ, ಸಾಮ್ರಾಜ್ಯ ವಿಸ್ತರಣೆಗಾಗಿನ ಯುದ್ಧಗಳು ಇತಿಹಾಸ ನಿರ್ಮಾಪಕರಲ್ಲ, ಜನಸಾಮಾನ್ಯರು ನಿಜವಾದ ಇತಿಹಾಸದ ಸೃಷ್ಟಿಕರ್ತರು ಎಂಬುದನ್ನು ಅದು ತೋರಿಸಿಕೊಟ್ಟ ಘಟನೆ ಅಕ್ಟೋಬರ್ ಕ್ರಾಂತಿ. ಜನಸಾಮಾನ್ಯರ ಶಕ್ತಿಯನ್ನು ಅದು ಸರಿಯಾದ ರೀತಿಯಲ್ಲಿ ಬಹಿರಂಗ ಪಡಿಸಿ ಹೊಸಯುಗದ ಹರಿಕಾರನಾಯಿತು. ಈ ಕ್ರಾಂತಿ ಪ್ರಪಂಚದೆಲ್ಲೆಡೆಯ ಜನರ ಗಮನ ಸೆಳೆದದ್ದು ಮಾತ್ರವಲ್ಲ ಅವರ ಹೋರಾಟಗಳಿಗೂ ಹೊಸ ಆಯಾಮವನ್ನು ನೀಡಿತು. ಭಾರತವೂ ಇದಕ್ಕೆ ಹೊರತಾಗಿಲ್ಲ. ಈ ವಿಶಾಲ ರಾಷ್ಟ್ರದ ರಾಜಕೀಯ- ಸಾಮಾಜಿಕ-ಸಾಂಸ್ಕೃತಿಕ ಮೊದಲಾದ ರಂಗಗಳ ಮೇಲೆ ಸೋವಿಯತ್ ಕ್ರಾಂತಿ ಬೀರಿದ ಪ್ರಭಾವದ ಬಗ್ಗೆ ಇಲ್ಲಿದೆ ಒಂದು ಹಕ್ಕಿ ನೋಟ.



ಮಹಾನ್ ಅಕ್ಟೋಬರ್ ಕ್ರಾಂತಿಯ ಸಂದೇಶ ಭಾರತವನ್ನು ತಲುಪುವುದನ್ನು ತಡೆಯಲು ಬ್ರಿಟಿಷ್ ವಸಾಹತುಶಾಹಿ ಆಡಳಿತಗಾರರು ಮತ್ತು ಅವರ ಬಂಟರು ಏನೆಲ್ಲಾ ಸಾಧ್ಯವೋ ಅದನ್ನೆಲ್ಲಾ ಮಾಡಿದರು. ಕ್ರಾಂತಿಯ ಬಗ್ಗೆ ಕಟ್ಟು ಕತೆಗಳನ್ನು ಹೆಣೆದು ಪ್ರಚಾರ ಮಾಡಿದರು. ಆದರೆ ನಿಜವಾದ ಸಂದೇಶ ಭಾರತೀಯ ಜನರನ್ನು ತಲುಪಿಯೇ ತೀರಿತು, ಅದರಿಂದ ಭಾರತದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಹಂದರದಲ್ಲೇ ವಿದ್ಯುತ್ ಸಂಚಾರ ಆದಂತಾಯಿತು.

ಅಕ್ಟೋಬರ್ ಕ್ರಾಂತಿಗೆ ಮುನ್ನವೇ ರಷ್ಯದಲ್ಲಿನ ರಾಜಕೀಯ ಬೆಳವಣಿಗೆಗಳು ಭಾರತೀಯ ಚಿಂತನೆ ಮತ್ತು ಚಟುವಟಿಕೆಗಳ ಮೇಲೆ ಪ್ರಭಾವ ಬೀರಲು ಆರಂಭಿಸಿದ್ದವು. 19ನೇ ಶತಮಾನದ ತೊಂಭತ್ತರ ದಶಕದಲ್ಲೇ ಭಾರತದ ಕೆಲವು ವಿಭಾಗಗಳ ಜನರು ರಷ್ಯದಲ್ಲಿ ಬೆಳವಣಿಗೆಗಳ ಬಗ್ಗೆ ಅತೀವ ಆಸಕ್ತಿಯನ್ನು ತೋರಲು ಆರಂಭಿಸಿದ್ದರು. "ಹೊಸ ಶಕೆಯೊಂದನ್ನು ಆರಂಭಿಸಲಿರುವ ಮುಂದಿನ ಮಹಾಉತ್ಥಾನ ರಷ್ಯಾದಲ್ಲಿ ನಡೆಯಲಿದೆ. ಅದು ಜಗತ್ತಿನಾದ್ಯಂತ 'ಶೂದ್ರ'ರ, ಅಂದರೆ ದುಡಿಯುವ ಜನರ ಆಡಳಿತ ಸ್ಥಾಪನೆಗೆ ನಾಂದಿ ಹಾಡಲಿದೆ" ಎಂದು ಸ್ವಾಮಿ ವಿವೇಕಾನಂದ 1886ರಲ್ಲಿ ಭವಿಷ್ಯ ನುಡಿದಿದ್ದರು(ರೊಮ್ಯಾ ರೊಲಾಂ- ವಿವೇಕಾನಂದರ ಜೀವನ ಸಂಗ್ರಹಿತ ಕೃತಿಗಳು ಸಂಪುಟ 19) ವಿವೇಕಾನಂದರು 1900 ರಲ್ಲಿ ಪ್ಯಾರಿಸ್‌ನಲ್ಲಿ ರಷ್ಯಾದ ಕ್ರಾಂತಿಕಾರಿ ಪ್ಯೊತರ್ ಅಲೆಕ್ಸಿವಿಚ್ ಕ್ರೊಪೊತ್ಕಿನ್‌ರನ್ನು ಭೇಟಿಯಾಗಿದ್ದರು. ಜನಸಮುದಾಯದ ಶೋಷಣೆ ಮತ್ತು ದಬ್ಬಾಳಿಕೆ, ಪೂರ್ವದ ಅದರಲ್ಲೂ ವಿಶೇಷವಾಗಿ ಭಾರತದ ವಸಾಹತು ದಾಸ್ಯತನವನ್ನು ಖಂಡಿಸುವ ಟಾಲ್‌ಸ್ಟಾಯ್ ಬರಹಗಳು ಭಾರತದಲ್ಲಿ ಅನೇಕರ ಮೇಲೆ ಪ್ರಭಾವ ಬೀರಿದವು.

'ಮಾನವತೆಯ ಕಲ್ಯಾಣಕ್ಕಾಗಿ ಶ್ರಮಿಸುವವರಿಗೆ ನಿಮ್ಮ ಹೆಸರು ಒಂದು ರಕ್ಷಾಕವಚ ಹಾಗೂ ಅಸ್ತ್ರವಂತಿದೆ' - ಇದು ಟಾಲ್‌ಸ್ಟಾಯ್‌ಗೆ ಕ್ರಾಂತಿಕಾರಿ ಪತ್ರಿಕೆ 'ಫ್ರಿ ಹಿಂದೂಸ್ತಾನ್'ನ ಪ್ರಕಾಶಕ ತಾರಕನಾಥ್ ದಾಸ್ ಬರೆದ ಪತ್ರದ ಮಹತ್ವದ ಒಂದು ಸಾಲು. ಈ ಪತ್ರಕ್ಕೆ ಪ್ರತಿಯಾಗಿ ಟಾಲ್‌ಸ್ಟಾಯ್ 1908 ರಲ್ಲಿ ಪ್ರಖ್ಯಾತವಾದ 'ಲೆಟರ್ ಟು ಎ ಹಿಂದೂ'(ಒಬ್ಬ ಹಿಂದೂಗೆ ಪತ್ರ) ಕೃತಿಯನ್ನು ಬರೆದರು. 'ಕೆಟ್ಟ ಕಾರ್ಯದಲ್ಲಿ, ಆಡಳಿತದ ಹಿಂಸಾಚರಣೆಯಲ್ಲಿ, ನ್ಯಾಯಾಲಯಗಳಲ್ಲಿ, ತೆರಿಗೆ ಸಂಗ್ರಹದಲ್ಲಿ ಮತ್ತು ಎಲ್ಲಕ್ಕೂ ಮಿಗಿಲಾಗಿ ಸೇನೆಯಲ್ಲಿ ಸಹಕರಿಸಬೇಡಿ' ಎಂದು ಭಾರತೀಯ ಜನತೆಗೆ ಟಾಲ್‌ಸ್ಟಾಯ್ ಕರೆ ನೀಡಿದರು.

ಆ ಕಾಲದಲ್ಲಿ ಈ ಕರೆ ಭಾರತದಲ್ಲಿ ಅನುರಣಿಸಿತು ಹಾಗೂ ಹೋರಾಟದ ಕರೆಯಾಗಿ ಪರಿವರ್ತನೆಗೊಂಡಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್(ಐಎನ್‌ಸಿ)ನ 'ತೀವ್ರಗಾಮಿಗಳು' ಈ ಕರೆಯನ್ನು ಪಕ್ಷದಲ್ಲಿನ 'ಮಂದಗಾಮಿಗಳ' ವಿರುದ್ಧದ ರಾಜಕೀಯ ಕಾರ್ಯಾಚರಣೆಯಲ್ಲಿ ಬಳಸಿಕೊಂಡರು.

1905ರ ಕ್ರಾಂತಿಯ ಪ್ರಭಾವ

1905-07ರ ರಷ್ಯಾ ಕ್ರಾಂತಿ ಇಪ್ಪತ್ತನೇ ಶತಮಾನದಲ್ಲಿ ಜರಗಿದ ಜನರ ಪ್ರಥಮ ಕ್ರಾಂತಿ. ಆ ಕಾಲದ ಬೇರ ಯಾವುದೇ ಘಟನೆಗಿಂತ ಈ ಕ್ರಾಂತಿ ಭಾರತದ ಮೇಲೆ ಭಾರೀ ಹಾಗೂ ಅಚ್ಚಳಿಯದ ಪರಿಣಾಮವನ್ನು ಬೀರಿತು. 1905ರಲ್ಲಿ ನಡೆದ ಅಖಿಲ ರಷ್ಯಾ ರಾಜಕೀಯ ಮುಷ್ಕರದ ಬಗ್ಗೆ ಗಾಂಧಿ ಹೀಗೆ ಬರೆದರು : "ರಷ್ಯನ್ ಕಾರ್ಮಿಕರು ಮತ್ತು ಇತರ ಎಲ್ಲಾ ದುಡಿಯುವ ಜನರು ಸಾರ್ವತ್ರಿಕ ಮುಷ್ಕರವನ್ನು ಘೋಷಿಸಿ ಎಲ್ಲಾ

"ಹೊಸ ಶಕೆಯೊಂದನ್ನು ಆರಂಭಿಸಲಿರುವ ಮುಂದಿನ ಮಹಾಉತ್ಥಾನ ರಷ್ಯಾದಲ್ಲಿ ನಡೆಯಲಿದೆ. ಅದು ಜಗತ್ತಿನಾದ್ಯಂತ 'ಶೂದ್ರ'ರ, ಅಂದರೆ ದುಡಿಯುವ ಜನರ ಆಡಳಿತ ಸ್ಥಾಪನೆಗೆ ನಾಂದಿ ಹಾಡಲಿದೆ"

ಕೆಲಸಗಳನ್ನು ನಿಲ್ಲಿಸಿದ್ದಾರೆ. ಅವರು ತಮ್ಮ ತಮ್ಮ ಕೆಲಸಗಳನ್ನು ನಿಲ್ಲಿಸಿ ನ್ಯಾಯ ಸಿಗದ ಹೊರತು ಕೆಲಸವನ್ನು ಪುನರಾರಂಭಿಸುವುದಿಲ್ಲ ಎಂದು ಝಾರ್‌ಗೆ ತಿಳಿಸಿದ್ದಾರೆ. ಭಾರತ ಮತ್ತು ರಷ್ಯಾದ ಆಡಳಿತ ವಿಧಾನದಲ್ಲಿ ತುಂಬಾ ಸಾಮ್ಯತೆ ಇದೆ. ವೈಸ್‌ರಾಯ್‌ನ ಅಧಿಕಾರ ಝಾರ್‌ನ ಅಧಿಕಾರಕ್ಕಿಂತ ಕಡಿಮೆಯಾದುದೇನೂ ಅಲ್ಲ..... ಸರ್ವಾಧಿಕಾರದ ವಿರುದ್ಧ ನಾವು ಕೂಡಾ ರಷ್ಯಾದ ಪರಿಹಾರ ಮಾರ್ಗವನ್ನೇ ಅನುಸರಿಸಬಹುದು. ಸ್ವದೇಶೀ ವಸ್ತುಗಳ ಬಳಕೆಗಾಗಿ ಬಂಗಾಲದಲ್ಲಿ ನಡೆಯುತ್ತಿರುವ ಚಳುವಳಿಗೂ ರಷ್ಯಾದಲ್ಲಿನ ಚಳುವಳಿಗೂ ಬಹಳ ಹೋಲಿಕೆ ಉಂಟು. ಭಾರತದ ಜನರು ಸಂಘಟಿತರಾಗಿ ತಾಳ್ಮೆ ವಹಿಸಿದರೆ, ತಮ್ಮ ದೇಶವನ್ನು ಪ್ರೀತಿಸಿದರೆ ಮತ್ತು ತಮ್ಮ ಸ್ವಾರ್ಥ ಬಿಟ್ಟು ಮಾತೃಭೂಮಿಯ ಕಲ್ಯಾಣದ ಬಗ್ಗೆ ಚಿಂತಿಸಿದ ದಿನವೇ ನಮ್ಮ ಬಂಧನದ ಸರಪಳಿಗಳನ್ನು ತುಂಡರಿಸಲು ಸಾಧ್ಯ. ಬ್ರಿಟಿಷ್ ಆಡಳಿತಗಾರರಿಗೆ ಸೇವೆ ಮಾಡುವ ಜನರು ಇರುವುದರಿಂದಲೇ ಅವರಿಗೆ ಭಾರತವನ್ನು ಆಳುವುದು ಸಾಧ್ಯವಾಗಿದೆ. ರಷ್ಯಾದ ಜನರು ತೋರಿಸಿದ ರೀತಿಯಲ್ಲೇ ನಾವೂ ಶಕ್ತಿಪ್ರದರ್ಶನ ಮಾಡಬಹುದು" (ಗಾಂಧಿ ಸಂಗ್ರಹಿತ ಕೃತಿಗಳು 5ನೇ ಸಂಪುಟ 1961, ಪುಟ 413)

"ರಾಜಕೀಯ ಚಳುವಳಿಯ ವಿಧಾನಗಳನ್ನು ರಷ್ಯನ್ನರಿಂದ ಕಲಿಯಿರಿ" ಎಂದು 1906 ರಲ್ಲಿ ಬಾಲಗಂಗಾಧರ ತಿಲಕ್ ಕರೆ ನೀಡಿದರು. 'ಭಾರೀ ಪ್ರಮಾಣದ ಸರಣಿ ಮುಷ್ಕರಗಳಿಂದಾಗಿ ರಷ್ಯಾದ ಸ್ವಾತಂತ್ರ್ಯಕ್ಕೆ ಮೊದಲ ಜಯ ದೊರೆಯಿತು' ಎಂದು ಅರಬಿಂದೋ ಘೋಷ್ ಬರೆದರು (ಅರಬಿಂದೋ ಘೋಷ್ 'ಸಹನೀಯ ಪ್ರತಿಭಟನೆಯ ಸಿದ್ಧಾಂತ' ಪುಟ 28) ಸ್ಟುಟ್‌ಗರ್ಟ್‌ನಲ್ಲಿ 1907ರಲ್ಲಿ ನಡೆದ ಅಂತರ್ರಾಷ್ಟ್ರೀಯ ಸಮಾಜವಾದಿ ಕಾಂಗ್ರೆಸ್‌ನಲ್ಲಿ ಮೇಡಂ ಬಿ.ಆರ್. ಕಾಮಾ ತಮ್ಮ ಭಾಷಣದಲ್ಲಿ "ಭಾರತ ಎಚ್ಚೆತ್ತು ರಷ್ಯಾದ ನಮ್ಮ ಸಂಗಾತಿಗಳ ಉದಾಹರಣೆಯನ್ನು ಅನುಸರಿಸಲಿದ್ದಾರೆ" ಎಂದು ಹೇಳಿದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದ ದಾದಾ ಭಾಯಿ ನವರೋಜಿ 1906ರ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ 'ಹಿಮೋಚಿತರಾಗಿ' ರಷ್ಯಾದ ಜನರು ಝಾರ್ ಸರ್ವಾಧಿಕಾರದ ವಿರುದ್ಧ [illegible] ಹೋರಾಟದ ಬಗ್ಗೆ ಪ್ರಸ್ತಾಪಿಸಿದರು. ಮತ್ತು ಭಾರತಕ್ಕೆ 'ಸ್ವಯಮಾಧಿಕಾರದ ಸರಕಾರ' [illegible] ಈ ಬೇಡಿಕೆಯನ್ನು ಅವರೇ [illegible] ಮುಂದಿಡಲಾಗಿತ್ತು.

ಈ ಅವಧಿಯಲ್ಲಿ ರಷ್ಯಾ ಮತ್ತು ಭಾರತದ ಪ್ರಗತಿಪರ ಜನರ ಮಧ್ಯೆ ವೈಯಕ್ತಿಕ ಸಂಪರ್ಕಗಳು ಬೆಳೆದವು. ದೇಶಾಂತರವಾಸದಲ್ಲಿದ್ದ ಭಾರತದ ಕ್ರಾಂತಿಕಾರಿಗಳು ರಷ್ಯಾದ ಅನೇಕ ಕ್ರಾಂತಿಕಾರಿಗಳನ್ನು ಭೇಟಿಯಾದರು.

1908ರಲ್ಲಿ ಜುಲೈನಲ್ಲಿ ಬಾಲಗಂಗಾಧರ ತಿಲಕರಿಗೆ ಶಿಕ್ಷೆ ವಿಧಿಸಿದ್ದನ್ನು ಪ್ರತಿಭಟಿಸಿ ಮುಂಬಯಿಯಲ್ಲಿ ರಾಜಕೀಯ ಮುಷ್ಕರ ನಡೆಯಿತು. ಅದರಲ್ಲಿ ಒಂದು ಲಕ್ಷ ಕಾರ್ಮಿಕರು ಭಾಗವಹಿಸಿದ್ದರು. ಬಂಗಾಳದಲ್ಲಿ [illegible] ಮುಷ್ಕರಕ್ಕೆ [illegible] ಮತ್ತು [illegible] ಕಾರ್ಮಿಕರ ಅನೇಕ ಮುಷ್ಕರಗಳು ನಡೆದವು.

ಮುಂಬಯಿ ಮುಷ್ಕರದ ಬಗ್ಗೆ ಮುಂಬಯಿಯ ಗವರ್ನರ್ ಹೀಗೆ ಬರೆದನು : "ಮುಂಬಯಿಯ [illegible]"

[illegible]

1908[illegible] ಸಾಮೂಹಿಕ ಹೋರಾಟ ನಡೆಯಬೇಕೆಂಬ ಆಲೋಚನೆ ಬೆಳೆಯಲು [illegible] ವಾಯಿತು.

ಮಹಾನ್ ಅಕ್ಟೋಬರ್ ಕ್ರಾಂತಿ ಮಾಡಿದ ಘೋಷಣೆಗಳು ಹಾಗೂ ಇತರ ಅನೇಕ ಘೋಷಣೆಗಳು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ರಾಷ್ಟ್ರೀಯ ಹೋರಾಟದ ಮೇಲೆ ಇತರ ಯಾವುದೇ ಅಂಶಕ್ಕಿಂತ ಅತ್ಯಂತ ಹೆಚ್ಚಿನ ಪ್ರಭಾವ ಬೀರಿತು.

ಎದುರಿಸುತ್ತಿರುವ ಅಪಾಯಕ್ಕೂ ಭಾರತದಲ್ಲಿ ಅದೇ ರೀತಿಯ ಸರ್ವಾಧಿಕಾರ ಎದುರಿಸುತ್ತಿರುವ ಅಪಾಯಕ್ಕೂ' ಇರುವ ಸಾಮ್ಯತೆಯತ್ತ ಅವರು ಗಮನ ಸೆಳೆದಿದ್ದರು.

1905-07ರ ರಷ್ಯಾದ ಪ್ರಥಮ ಕ್ರಾಂತಿ ಭಾರತದಲ್ಲಿ ಸ್ವಾತಂತ್ರ್ಯವನ್ನುಳಿಸಲು ಸಾಮೂಹಿಕ ಹೋರಾಟ ನಡೆಸಬೇಕೆಂಬ ಆಲೋಚನೆ ಬೆಳೆಯಲು ಸಹಾಯಕವಾಯಿತು.

ಅಕ್ಟೋಬರ್ ಕ್ರಾಂತಿಯ ಪ್ರಭಾವ

ಅಕ್ಟೋಬರ್ ಕ್ರಾಂತಿಯ ಪ್ರಭಾವ ಸರ್ವವ್ಯಾಪಕವಾಗಿತ್ತು ಹಾಗೂ ಆಳವಾದುದಾಗಿತ್ತು. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ಚಾಲನೆ ನೀಡಿತ್ತು. ವಸಾಹತುಶಾಹಿ ಆಡಳಿತದ ವಿರುದ್ಧ ಸಾಮೂಹಿಕ ಹೋರಾಟಗಳನ್ನು ಪ್ರಚೋದಿಸಿತ್ತು. ಸಾಮಾಜಿಕ -ಆರ್ಥಿಕ ಜೀವನದ ಹೊಸ ಪ್ರಶ್ನೆಗಳನ್ನು ಎತ್ತಿತು ಮತ್ತು ಪ್ರಗತಿ ಹಾಗೂ ಅಭಿವೃದ್ಧಿ ಕುರಿತು ಹೊಸ ಪರಿಕಲ್ಪನೆಗಳನ್ನು ಸೃಷ್ಟಿಸಿತು.

ಈ ಬಗ್ಗೆ ಖ್ಯಾತ ಇತಿಹಾಸಕಾರ ಕೆ.ಎಂ. ಪಣಿಕ್ಕರ್ ಅವರ ಟಿಪ್ಪಣಿ ಹೀಗಿದೆ : *"ಅಕ್ಟೋಬರ್ ಕ್ರಾಂತಿಗೆ ಮುನ್ನ ಭಾರತದ ರಾಷ್ಟ್ರೀಯ ಚಳುವಳಿ ಉದಾರವಾಗಿತ್ತು ಹಾಗೂ ಶುದ್ಧಾಂಗವಾಗಿ ರಾಜಕೀಯ ಉದ್ದೇಶದ್ದಾಗಿತ್ತು. ಆಂದೋಳನಕ್ಕೆ ನಿರ್ದಿಷ್ಟ ಸಾಮಾಜಿಕ ಅಥವಾ ಆರ್ಥಿಕ ಗುರಿ ಇರಲಿಲ್ಲ..... ರಷ್ಯಾ ಕ್ರಾಂತಿ ಇದನ್ನೆಲ್ಲಾ ಬದಲಾಯಿಸಿತು....* (ಏಶ್ಯಾ ಮತ್ತು ಪಾಶ್ಚಾತ್ಯರ ಅಧಿಪತ್ಯ: ಕೆ.ಎಂ. ಪಣಿಕ್ಕರ್, ಲಂಡನ್ 1953 ಪು. 250)

ಕಾಂಗ್ರೆಸ್ ಇತಿಹಾಸಕಾರ ಪಟ್ಟಾಭಿ ಸೀತಾರಾಮಯ್ಯ ಹೀಗೆ ಬರೆದರು : *ರಷ್ಯಾ ಸಾಧಿಸಿದ ಕ್ಷಿಪ್ರ ಪ್ರಗತಿ ಜಗತ್ತಿನಾದ್ಯಂತ ಜನರ ಗಮನ ಸೆಳೆಯತೊಡಗಿತು. ಗುಲಾಮಗಿರಿ ಮತ್ತು ಬಂಡವಾಳಶಾಹಿಯ ಸರಪಣಿಗಳನ್ನು ಕಡಿದು ಹಾಕಿದ ಈ ಅರೆಪೌರ್ವಾತ್ಯ ದೇಶದ ಪ್ರತಿಯೊಂದು ಕತೆಯೂ ದೀರ್ಘಕಾಲದಿಂದ ದಾಸ್ಯದಲ್ಲಿದ್ದು ಸ್ವಾತಂತ್ರ್ಯದ ಎಲ್ಲಾ ಆಶೆಗಳನ್ನು ಕೈ ಬಿಟ್ಟ ಭಾರತದ ಜನರಿಗೆ ನೆಮ್ಮದಿಯ ನಿಟ್ಟುಸಿರಾಗಿ ಪರಿಣಮಿಸಿತು"* (ಕಾಂಗ್ರೆಸ್‌ನ ಇತಿಹಾಸ ಸಂಪುಟ 2 ಪುಟ 4)

ಕೆಲವು ಸಾಂವಿಧಾನಿಕ ಸುಧಾರಣೆಗಳ ಮೂಲಕ ಭಾರತೀಯರ ಅತೃಪ್ತಿಯ ಪ್ರವಾಹಕ್ಕೆ ಕಟ್ಟೆ ಕಟ್ಟುವ ಉದ್ದೇಶ ಹೊಂದಿದ್ದ ಮಾಂಟೆಗೂ ಚೆಮ್ಸ್‌ಫರ್ಡ್ ವರದಿ 1918ರಲ್ಲಿ ಈ ಕೆಳಗಿನ ಅಂಶವನ್ನು ಒಪ್ಪಿಕೊಂಡಿತು. *"ರಷ್ಯಾದ ಕ್ರಾಂತಿ ಸರ್ವಾಧಿಕಾರದ ಮೇಲಿನ ವಿಜಯ ಎಂಬುದನ್ನು ಭಾರತದಲ್ಲಿ ಪರಿಗಣಿಸಲಾಗಿದೆ. ಅದು ಭಾರತೀಯ ರಾಜಕೀಯ ಆಶೋತ್ತರಗಳಿಗೆ ಒಂದು ಚಾಲನೆ ನೀಡಿತು"*

ಶಾಂತಿ, ಭೂಮಿ, ಸ್ವಾತಂತ್ರ್ಯ ಮತ್ತು ಸ್ವಯಂ ನಿರ್ಣಯಾಧಿಕಾರ, ರಷ್ಯಾ ಮತ್ತು ಪೂರ್ವದಲ್ಲಿನ ಎಲ್ಲಾ ಮುಸ್ಲಿಂ ಕಾರ್ಮಿಕರಿಗೆ ಕರೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಮಹಾನ್ ಅಕ್ಟೋಬರ್ ಕ್ರಾಂತಿ ಮಾಡಿದ ಘೋಷಣೆಗಳು ಹಾಗೂ ಇತರ ಅನೇಕ ಘೋಷಣೆಗಳು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ರಾಷ್ಟ್ರೀಯ ಹೋರಾಟದ ಮೇಲೆ ಇತರ ಯಾವುದೇ ಅಂಶಕ್ಕಿಂತ ಅತ್ಯಂತ ಹೆಚ್ಚಿನ ಪ್ರಭಾವ ಬೀರಿತು. ಭಾರತದ ಜನರು ಮತ್ತು ಪತ್ರಿಕೆಗಳು ಕ್ರಾಂತಿಗೆ ತಕ್ಷಣವೇ ತೋರಿದ ಪ್ರತಿಕ್ರಿಯೆಗಳಿಂದ ಇದು ತಿಳಿಯುತ್ತದೆ.

ಕ್ರಾಂತಿ ಸಂಭವಿಸಿದ 21 ದಿನಗಳ ನಂತರ, ಅಂದರೆ 1917ರ ನವಂಬರ್ 28ರಂದು ಭಾರತದ ಖ್ಯಾತ ಕವಿ ಸುಬ್ರಹ್ಮಣ್ಯ ಭಾರತಿ ತಮಿಳು ಪತ್ರಿಕೆಯೊಂದರಲ್ಲಿ ಲೇಖನ ಬರೆದರು. *'ಶ್ರೀಮಾನ್ ಲೆನಿನ್ ನಾಯಕತ್ವದಲ್ಲಿ ಸಮಾಜವಾದಿ ರಷ್ಯಾ ತನ್ನ ಗುರಿಯನ್ನು ಸಾಧಿಸಿದೆ:* ಎಂದು ಹೇಳಿದ ಅವರು *'ಸಮಾನತೆಯ ಆಧಾರದಲ್ಲಿ*

ಸ್ತಿನ ಜನರ ನಡುವೆ ಸಂಪತ್ತನ್ನು ವಿತರಿಸುವ' ತತ್ವವನ್ನು ಶ್ಲಾಘಿಸಿದರು.

1917ರ ಡಿಸೆಂಬರ್ 23ರ 'ಬಾಂಬೆ ಕ್ರಾನಿಕಲ್' ಸಂಚಿಕೆಯ ಲೇಖನದ ಒಂದು ಭಾಗ: "ಬೋಲ್ಶೆವಿಕ್ ಸಿಂತಾದ ನಮ್ಮ ಆಲೋಚನೆಗಳು ಅಸ್ಪಷ್ಟವಾಗಿವೆ. ಆಕರ್ಷಕವಾದ ಹಾಗೂ ಜನರಿಗೆ ಸೇವೆ ಮಾಡುವ ಆಶ್ವಾಸನೆ ಅವರ ಕಾರ್ಯಕ್ರಮದಲ್ಲಿ ಇಲ್ಲವಾಗಿದ್ದರೆ ಅವರಿಗೆ ಯಶಸ್ಸು ಗಳಿಸಲು ಸಾಧ್ಯವಾಗುತ್ತಲೇ ಇರಲಿಲ್ಲ ಎಂಬ ವಾಸ್ತವವನ್ನು ನಾವು ಮನಗಾಣುತ್ತೇವೆ."

19 ಮಾರ್ಚ್ 1918ರ 'ದಿ ಹಿಂದೂ' ಪತ್ರಿಕೆ ಹೀಗೆ ಬರೆಯಿತು- "ಬೋಲ್ಶೆವಿಸಂ ಒಂದು ಕೆಂಪು.... ಭೀತಿ. ಆದರೆ ಬೋಲ್ಶೆವಿಸಂನ ಅಂತರಾರ್ಥ ಏನು? ಒಂದು ರಾಷ್ಟ್ರವಾಗಿ ತನ್ನನ್ನು ಕಂಡುಕೊಳ್ಳಲು ಅಪೇಕ್ಷಿಸುವ ಜನಗಳ ಏನೆಂದು ಹೇಳಲಾಗದ, ಅಭಿವ್ಯಕ್ತಪಡಿಸಲಾಗದ ಪ್ರಜ್ಞಾಪೂರ್ವಕವಲ್ಲದ ಸುಪ್ತ ಪ್ರಜ್ಞೆಯಲ್ಲದೆ ಬೇರೇನು?"

'ಸ್ವಾಧೀನವಿಲ್ಲದೆ ಮತ್ತು ನಷ್ಟ ಪರಿಹಾರವಿಲ್ಲದೆ ಹಾಗೂ 'ಸ್ವಯಂನಿರ್ಣಯಾಧಿಕಾರ' ಹಕ್ಕಿನ ಆಧಾರದಲ್ಲಿ ಯುದ್ಧವನ್ನು ಕೊನೆಗಾಣಿಸಬೇಕೆಂದು ಯುದ್ಧನಿರತ ಎಲ್ಲಾ ದೇಶಗಳನ್ನು ಹೊಸ ಬೋಲ್ಶೆವಿಕ್ ಸರಕಾರ ಪ್ರೇರೇಪಿಸಿತು. ಸ್ವಾಧೀನವಿಲ್ಲದೆ ಎಂದರೆ ಅದರ ಅರ್ಥದಲ್ಲಿ ಬೇರೆ ದೇಶದ ಭೂ ಭಾಗವನ್ನು ವಶಪಡಿಸಿಕೊಳ್ಳದಿರುವುದು ಹಾಗೂ ಬಲಾತ್ಕಾರವಾಗಿ ಇತರ ರಾಷ್ಟ್ರೀಯರನ್ನು ಸೇರಿಸಿಕೊಳ್ಳದಿರುವುದು. ಹಾಗೂ ತಮ್ಮ ಸರಕಾರ ಹಾಗೂ ಅದರ ರೀತಿಯನ್ನು ನಿರ್ಧರಿಸುವ ರಾಷ್ಟ್ರಗಳ ಹಕ್ಕೇ 'ಸ್ವಯಂ ನಿರ್ಣಯಾಧಿಕಾರ' ಹಕ್ಕು ಎಂಬುದರ ಪರಿಕಲ್ಪನೆ ಆಗಿತ್ತು' ಎಂದು ಕಲ್ಕತ್ತದಿಂದ ಪ್ರಕಟವಾಗುತ್ತಿದ್ದ 'ಮಾಡರ್ನ್ ರಿವ್ಯೂ' ಬರೆಯಿತು.

ಮೋತಿಲಾಲ್ ನೆಹರೂ 1919ರಲ್ಲಿ ಅಲಹಾಬಾದ್‌ನಿಂದ ಆರಂಭಿಸಿದ 'ದಿ ಇಂಡಿಪೆಂಡೆಂಟ್' ದೈನಿಕ ಸೋವಿಯತ್ ಒಕ್ಕೂಟದಲ್ಲಿನ ಬೆಳವಣಿಗೆಗಳ ಕುರಿತು ಹೆಚ್ಚು ಕಡಿಮೆ ವಾಸ್ತವಿಕ ಚಿತ್ರಣವನ್ನು ಬಿಂಬಿಸುವ ಲೇಖನಗಳು ಮತ್ತು ಅಗ್ರ ಲೇಖನಗಳ ಸರಣಿಯನ್ನೇ ಪ್ರಕಟಿಸಿತು. 1920 ಜನವರಿ 14ರಂದು 'ಕೆಂಪು ಪಿಡುಗು' ಎಂಬ ಶಿರೋನಾಮೆಯಲ್ಲಿ ಅದು ಒಂದು ಸಂಪಾದಕೀಯವನ್ನು ಪ್ರಕಟಿಸಿತು : "ಬೋಲ್ಶೆವಿಕ್‌ವಾದ ದೊಡ್ಡ ರೀತಿಯಲ್ಲಿ ಸಾರ್ಥಕವಾಗಿದೆ. ಯಾಕೆಂದರೆ ಅದು ಜನಸಮುದಾಯದ ಮನದಲ್ಲಿ ಆಶಾವಾದ, ಮಹತ್ತರ ಆಶಾವಾದದ ಬೀಜವನ್ನು ಬಿತ್ತಿದೆ. ಉತ್ತಮ ಭವಿಷ್ಯದ ಮತ್ತು ಕೆಂಪು ಬಾವುಟದ ಸುತ್ತ ಅಣಿನೆರೆದ ರಷ್ಯಾದ ಮಿಲಿಯಾಂತರ ಜನರ ಜೀವನ ಮಟ್ಟವನ್ನು ಹೆಚ್ಚು ಸುಧಾರಿಸುವ ಆಶಾವಾದ ಅದಾಗಿದೆ".

ಭಾರತಕ್ಕೆ 'ಸ್ವಯಂ ನಿರ್ಣಯಾಧಿಕಾರದ' ಬೇಡಿಕೆಯನ್ನು ಕಾಂಗ್ರೆಸ್ 1918ರಲ್ಲಿ ಮಂಡಿಸಿತು. ಪಕ್ಷದ 1918ರ ವಾರ್ಷಿಕ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ ಮದನಮೋಹನ್ ಮಾಳವೀಯ 'ಭಾರತಕ್ಕೆ ಸ್ವಯಂ ನಿರ್ಣಯಾಧಿಕಾರದ ತತ್ವವನ್ನು ಬ್ರಿಟನ್ ಸರಕಾರ ಮಾನ್ಯ ಮಾಡಬೇಕು' ಎಂದು ಕರೆ ನೀಡಿದರು.

ಹೊಸ ಮಿತ್ರನನ್ನು ಪಡೆದವು


"ಬೋಲ್ಶೆವಿಸಂ ಅಂದರೆ ಶ್ರೀಮಂತರು ಮತ್ತು ತಥಾಕಥಿತ ಉನ್ನತ ವರ್ಗಗಳಿಂದ ಶೋಷಣೆಯಿಲ್ಲದೆ ಸ್ವತಂತ್ರವಾಗಿ ಹಾಗೂ ಸಂತೋಷದಿಂದ ಜೀವಿಸುವ ಜನರ ಹಕ್ಕು" - 1919ರಲ್ಲಿ ಹೀಗೆಂದವರು ಬಿಪಿನ್ ಚಂದ್ರಪಾಲ್(ಬಿಪಿನ್ ಚಂದ್ರಪಾಲ್, 'ಜಾಗತಿಕ ಸನ್ನಿವೇಶ ಮತ್ತು ನಾವು'. 1919 ಪು. 24) 'ಬೋಲ್ಶೆವಿಸಂ ನಾಶಪಡಿಸಲಾಗದ ನ್ಯಾಯಬದ್ಧ ಹಾಗೂ ವಿಶ್ವಾಸಾರ್ಹವಾದ ಒಂದು ಸಿದ್ಧಾಂತ. ಸಮಾಜವಾದಿ ಅಥವಾ

> **ಅಕ್ಟೋಬರ್ ಕ್ರಾಂತಿ ಕಾರ್ಮಿಕರು, ರೈತರು, ಲೇಖಕರು ಮತ್ತು ವಿದ್ಯಾರ್ಥಿಗಳು ಮೊದಲಾದ ವಿಭಾಗಗಳ ಸಾಮೂಹಿಕ ಸಂಘಟನೆಗಳ ರಚನೆಯ ಅಗತ್ಯದತ್ತ ಭಾರತದ ಪ್ರಗತಿಪರ ಜನರ ಗಮನ ಸೆಳೆಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಈ ವಿಭಾಗಗಳು ಪಾಲ್ಗೊಳ್ಳುವಂತೆಯೂ ಅದು ಗಮನ ಸೆಳೆಯಿತು.**

ಕ್ರಾಂತಿಗೆ ಎಂದಿಗೂ ಸಾವಿಲ್ಲ

-ಆರ್. ರಾಮಕೃಷ್ಣ
ಬೆಂಗಳೂರು

ಲೆನಿನ್,
ಕೋಟಿ ಕೋಟಿ ಕೆಂಪು ರಕ್ತದ ಹನಿಗಳು
ಮೊಸ್ಕೆ ಕುಸಿದು ಬಿದ್ದಾಗ
ಒಳಗಿಂದೀಚೆಗೆ ಬಂದ ಕಾಳಸರ್ಪಗಳು
ನಾಚಿಕೆ ಇಲ್ಲವೇ, ಹೊಂಗೆ
ಕೆದಕುವುದ ಕಂಡೆ
ನಿಂತ ನೆಲ ಕ್ಷಣ ಕಂಪಿಸಿತು
ದಿಗ್ಭ್ರಾಂತಿ
[illegible]
[illegible]
ಮರೀಚಿಕೆಯ ಹುಡುಕುತ್ತಾ
ನಾಡು ಬಿಟ್ಟವರ ಹಾಡು ಕೇಳುವಾಗ
ಆಸುತ್ತಿವೆ, ಲೆನಿನ್
ಎಂದಾಗುತ್ತಿದೆ ಇಲ್ಲಿ
[illegible]
[illegible]
[illegible]
[illegible]
[illegible]
[illegible]
ನೀಡುವ ನೀಡುವ ಕೈಗಳ ನಡುವೆ
ಸಿಕ್ಕಿ ಬಿದ್ದಿರುವ ಮಾನವೀಯತೆ



ಲೆನಿನ್
ಮರೀಚಿಕೆಯ ಹುಡುಕುತ್ತಾ
ನಾಡು ಬಿಟ್ಟವರ ಹಾಡು ಕೇಳುತ್ತಾ
ಆಸುತ್ತಿವೆ
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಬೋಲ್ಶೆವಿಕ್ ಸತ್ಯ ಬಂಡವಾಳಶಾಹಿ ಅಥವಾ ಸಾಮ್ರಾಜ್ಯಶಾಹಿ ಸತ್ಯಕ್ಕಿಂತ ಹೆಚ್ಚು ನಂಬಲರ್ಹ ಹಾಗೂ ಮಾನವೀಯ ಸತ್ಯವಾಗಿದೆ' ಎಂದು 1920ರಲ್ಲಿ ಲಾಲಾ ಲಜಪತರಾಯ್ ವರ್ಣಿಸಿದರು.

1920ರ ಸೆಪ್ಟೆಂಬರ್‌ನಲ್ಲಿ ಕಲ್ಕತ್ತದಲ್ಲಿ ನಡೆದ ಕಾಂಗ್ರೆಸ್‌ನ ವಿಶೇಷ ಅಧಿವೇಶನ ಮತ್ತು ಅದೇ ವರ್ಷದ ಡಿಸೆಂಬರ್‌ನಲ್ಲಿ ನಡೆದ ವಾರ್ಷಿಕ ಅಧಿವೇಶನ ಅಸಹಕಾರ ಚಳವಳಿ ಹೋರಾಟದ ಕಾರ್ಯಕ್ರಮವೊಂದನ್ನು ಅಳವಡಿಸಿಕೊಂಡಿತು. 1920-21ರ ಅವಧಿಯಲ್ಲಿ ಸ್ಫೋಟಗೊಂಡ ಜನಾಂದೋಲನಗಳೂ ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರಭಾವದ ಫಲಿತಾಂಶಗಳು. ಕ್ರಾಂತಿ ಮತ್ತು ಅದರ ಯಶಸ್ಸು ಜನರಿಗೆ ಹೊಸ ವಿಶ್ವಾಸವನ್ನು ಒದಗಿಸಿತು. ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧದ ತಮ್ಮ ಹೋರಾಟದಲ್ಲಿ ಅವರಿಗೆ ಸೋವಿಯತ್ ಒಕ್ಕೂಟ ಒಬ್ಬ ಹೊಸ ಮಿತ್ರನಾಗಿ ದೊರಕಿತು.

ಸಾಮೂಹಿಕ ಸಂಘಟನೆಗಳ ಸ್ಥಾಪನೆಗೆ ಸ್ಫೂರ್ತಿ ನೀಡಿತು

ಅಕ್ಟೋಬರ್ ಕ್ರಾಂತಿ ಕಾರ್ಮಿಕರು, ರೈತರು, ಲೇಖಕರು ಮತ್ತು ವಿದ್ಯಾರ್ಥಿಗಳು ಮೊದಲಾದ ವಿಭಾಗಗಳ ಸಾಮೂಹಿಕ ಸಂಘಟನೆಗಳ ರಚನೆಯ ಅಗತ್ಯದತ್ತ ಭಾರತದ ಪ್ರಗತಿಪರ ಜನರ ಗಮನ ಸೆಳೆಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಈ ವಿಭಾಗಗಳು ಪಾಲ್ಗೊಳ್ಳುವಂತೆಯೂ ಅದು ಗಮನ ಸೆಳೆಯಿತು.

1920 ಅಕ್ಟೋಬರ್‌ನಲ್ಲಿ ಅಖಿಲಭಾರತ ಟ್ರೇಡ್‌ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ) ಸ್ಥಾಪನೆಯಾಯಿತು. "ಸಾಮ್ರಾಜ್ಯವಾದ ಮತ್ತು ಮಿಲಿಟರಿವಾದ ಬಂಡವಾಳವಾದದ ಅವಳಿ ಮಕ್ಕಳು ಅವು ಮೂರರಲ್ಲಿ ಒಂದಾಗಿವೆ, ಒಂದರಲ್ಲಿ ಮೂರಾಗಿವೆ. ಈಗ ನಾವು ಉದ್ಘಾಟಿಸುತ್ತಿರುವ ಆಂದೋಲನದ ಗುರಿ ಭಾರತೀಯ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವುದು ಮಾತ್ರವೇ ಅಲ್ಲ, ಅಂತರರಾಷ್ಟ್ರೀಯ ಭ್ರಾತೃತ್ವದಲ್ಲಿ ಸಂಪರ್ಕ ಕಲ್ಪಿಸುವುದೂ ಆಗಿದೆ... ಯುರೋಪಿನ ಕಾರ್ಮಿಕವರ್ಗ ನೇರ ಕಾರ್ಯಾಚರಣೆಯಲ್ಲಿ ಇನ್ನೊಂದು ಅಸ್ತ್ರವನ್ನು ಗಳಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಸ್ಥಾಪಿಸುವ ಗುರಿ ಹೊಂದಿದ ರಷ್ಯಾದ ಕಾರ್ಮಿಕ ವರ್ಗ ಬರುತ್ತದೆ....." (ಐಟಕ್ 50 ವರ್ಷಗಳು-ದಸ್ತಾವೇಜು ಪು.32)

ಈ ವರ್ಷದಲ್ಲಿ ದೇಶಾದ್ಯಂತ ಕಾರ್ಮಿಕವರ್ಗದ ಅಭೂತಪೂರ್ವ ಮುಷ್ಕರಗಳು ನಡೆದವು. ಪಂಜಾಬ್, ಮಲಬಾರ್, ಅವಧ್, ಆಗ್ರಾ, ಬಂಗಾಳ ಮತ್ತು ಬಿಹಾರದ ಅನೇಕ ಪ್ರದೇಶಗಳಲ್ಲಿ ರೈತರು ಹೋರಾಟ ರಂಗಕ್ಕೆ ಧುಮುಕಿದರು. 'ಬಿಹಾರದಲ್ಲಿ ಜಮೀನುದಾರರ ವಿರುದ್ಧ ಹೋರಾಡಲು ಚಳವಳಿಗಾರರು ರೈತರನ್ನು ಪ್ರಚೋದಿಸುತ್ತಿದ್ದಾರೆ, ಬಂಗಾಲದಲ್ಲಿ ದೊಡ್ಡ ಜಮೀನುದಾರರಿಗೆ ಸೇರಿದ ಜಮೀನನ್ನು ರೈತರಿಗೆ ಹಂಚಲು ಪ್ರಯತ್ನ ಸಾಗುತ್ತಿದೆ' ಎಂದು ಬ್ರಿಟಿಷ್ ಅಧಿಕಾರಿಗಳು 1924ರಲ್ಲಿ ವರದಿ ಮಾಡಿದರು. ಉತ್ತರಪ್ರದೇಶ ಮತ್ತು ಪಂಜಾಬ್‌ನಲ್ಲಿ ರೈತರ ಹೋರಾಟಗಳು 'ಬೋಲ್ಶೆವಿಕ್ ಶೈಲಿ'ಯಲ್ಲಿ ನಡೆಯುತ್ತಿವೆ ಎಂಬ ಮಾತುಗಳು ಕೇಳಿಬರುತ್ತಿದ್ದವು.

ದೇಶದ ಹೆಚ್ಚಿನ ಭಾಗಗಳಲ್ಲಿ ರೈತರ ಹೋರಾಟಗಳು ಮತ್ತು ಸಂಘಟನೆಗಳು ಬಲಿಷ್ಠವಾಗತೊಡಗಿದವು. ಅಂತಿಮವಾಗಿ, 1936ರಲ್ಲಿ ಅಖಿಲಭಾರತ ಕಿಸಾನ್ ಸಭಾ (ಎ.ಐ.ಕೆ.ಎಸ್.) ಸ್ಥಾಪನೆಯಾಯಿತು. ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರಭಾವದಿಂದ ಸಮಾಜವಾದಿ ಸಿದ್ಧಾಂತ ಫಲವಾಗಿ ಭಾರತದ ಕಾರ್ಮಿಕ ವರ್ಗ ಹಾಗೂ ಪ್ರಗತಿಪರ ಜನರ ಮಧ್ಯೆ ಪ್ರಚಾರಗೊಂಡಿತು. ಅದು 1920ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ(-

> ಬೋಲ್ಶೆವಿಸಂನ ಅಂತರಾರ್ಥ ಏನು? ಒಂದು ರಾಷ್ಟ್ರವಾಗಿ ತನ್ನನ್ನು ಕಂಡುಕೊಳ್ಳಲು ಅಪೇಕ್ಷೆ ಪಡುವ ಜನಗಳ ಏನೆಂದು ಹೇಳಲಾಗದ, ಅಭಿವ್ಯಕ್ತಪಡಿಸಲಾಗದ ಪ್ರಜ್ಞಾಪೂರ್ವಕವಲ್ಲದ ಸುಪ್ತ ಪ್ರಜ್ಞೆಯಲ್ಲದೆ ಬೇರೇನು?" ಎಂದಿತು ಮಾರ್ಚ್ 1918ರ 'ಹಿಂದೂ ಪತ್ರಿಕೆ.'

ಸಿಪಿಐ) ಸ್ಥಾಪನೆ ಗೊಂಡಿತು.

ವಿದೇಶಗಳಲ್ಲಿ ಕಾರ್ಯಾಚರಿಸುತ್ತಿದ್ದ ಭಾರತದ ಅನೇಕ ಕ್ರಾಂತಿಕಾರಿಗಳು ಅಫ್ಘಾನಿಸ್ತಾನವ ಮೂಲಕ ಸೋವಿಯತ್ ರಷ್ಯಾಕ್ಕೆ ಹೋಗುತ್ತಿದ್ದ ಯುವ ಮುಸ್ಲಿಂ ಮುಹಾಜಿರ್‌ಗಳು, ಮೊದಲ ಮಹಾಯುದ್ಧಕ್ಕೆ ಮುನ್ನ ಅಮೆರಿಕದ ಪ್ರಜಾಪ್ರಭುತ್ವವಾದದಿಂದ ಸ್ಫೂರ್ತಿ ಪಡೆದು ಸ್ಥಾಪನೆಯಾದ ಅಮೆರಿಕದ ಗದರ್ ಪಕ್ಷವವರು ಮೊದಲಾದವರು ಸಮಾಜವಾದವನ್ನು ತಮ್ಮ ಗುರಿಯನ್ನಾಗಿ ಅಳವಡಿಸಿಕೊಂಡರು. ಭಾರತದ ಖ್ಯಾತನಾಮಿತ 'ಭಗತ್ ಸಿಂಗ್ ಉತ್ಪಾದಕ' ಕ್ರಾಂತಿಕಾರಿ ಚಳವಳಿಯೂ ಸಮಾಜವಾದದ ಹಾದಿ ಹಿಡಿಯಿತು.

ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳು ಮಾರ್ಕ್ಸ್‌ವಾದಿ ಸಿದ್ಧಾಂತದತ್ತ ಹೊರಳುತ್ತಿದ್ದರು ಎಂಬುದು ನಂತರದ ವರ್ಷಗಳಲ್ಲಿ ಪ್ರಕಟವಾದ ಸುಖದೇವ್‌ರ ಪತ್ರಗಳಿಂದ ಗೊತ್ತಾಗುತ್ತದೆ. ನ್ಯಾಯಾಲಯದ ಮುಂದೆ ಭಗತ್‌ಸಿಂಗ್ ಈ ಕೆಳಗಿನಂತೆ ಹೇಳಿಕೆ ನೀಡಿದ್ದರು. "ಕ್ರಾಂತಿಯಲ್ಲಿ ಹಿಂಸಾತ್ಮಕ ಮುಷ್ಕರಗಳು ಒಳಗೊಂಡಿರಬೇಕೆಂದಿಲ್ಲ ಅಥವಾ ಅದರಲ್ಲಿ ವೈಯುಕ್ತಿಕ ದ್ವೇಷ ಸಾಧನೆಗೂ ಯಾವುದೇ ಸ್ಥಾನವಿಲ್ಲ. ಇದು ಬಾಂಬ್ ಅಥವಾ ಪಿಸ್ತೂಲಿನ ಆರಾಧನೆ ಅಲ್ಲ. ಖುಲ್ಲಂಖುಲ್ಲ ಅನ್ಯಾಯದ ಮೇಲೆ ಅವಲಂಬಿಸಿರುವ ಪ್ರಸಕ್ತ ವ್ಯವಸ್ಥೆ ಬದಲಾವಣೆ ಆಗಬೇಕೆನ್ನುವುದು ನಮ್ಮ ಉದ್ದೇಶಿತ ಕ್ರಾಂತಿಯ ಅರ್ಥ. ಕ್ರಾಂತಿ ಮಾನವ ಕುಲ ಪರಭಾರೆ ಮಾಡಲಾಗದ ಒಂದು ಹಕ್ಕು. ಸ್ವಾತಂತ್ರ್ಯ ಎಂಬುದು ನಿರಾಕರಿಸಲಾಗದ ಸರ್ವರ ಜನ್ಮಸಿದ್ಧ ಹಕ್ಕು. ಶ್ರಮವು ಸಮಾಜವನ್ನು ನಿಜವಾಗಿ ಸಂಭಾಳಿಸುವ ಶಕ್ತಿಯಾಗಿದೆ. ಕ್ರಾಂತಿಯೆಂಬ ಯಜ್ಞವೇದಿಕೆಗೆ ನಾವು ಯುವಜನ ಎಂಬ ಧೂಪವನ್ನು ತಂದಿದ್ದೇವೆ ಯಾಕೆಂದರೆ ಇಂಥ ಮಹಾನ್ ಕಾರ್ಯದಲ್ಲಿ ಯಾವ ತ್ಯಾಗವೂ ಮಹತ್ತರವಲ್ಲ." (ಭಾರತೀಯ ಯುವಜನ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ವಿಚಾರಗಳು 1971 ಪು.80-81)

1930 ಜನವರಿ 21ರಂದು ಭಗತ್‌ಸಿಂಗ್ ಮತ್ತು ಸಂಗಾತಿಗಳು ನ್ಯಾಯಾಲಯದ ಕೊಠಡಿಯಿಂದಲೇ ಮಾಸ್ಕೋಗೆ ಈ ಕೆಳಗಿನ ತಂತಿ ಸಂದೇಶವನ್ನು ಕಳಿಸಿದರು "ಮಹಾನ್ ಲೆನಿನ್‌ರ ಸಿದ್ಧಾಂತಗಳನ್ನು ಮುಂದುವರಿಸಿಕೊಂಡು ಹೋಗಲು ತಮ್ಮ ಕಾಣಿಕೆ ಸಲ್ಲಿಸುತ್ತಿರುವ ಎಲ್ಲರಿಗೂ ಲೆನಿನ್ ಜಯಂತಿಯಂದು ನಾವು ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸುತ್ತಿದ್ದೇವೆ. ರಷ್ಯಾ ನಡೆಸುತ್ತಿರುವ ಮಹಾನ್ ಪ್ರಯೋಗಕ್ಕೆ ನಾವು ಯಶಸ್ಸನ್ನು ಕೋರುತ್ತೇವೆ. ಅಂತರರಾಷ್ಟ್ರೀಯ ಕಾರ್ಮಿಕ ವರ್ಗ ಆಂದೋಲನಕ್ಕೆ ದನಿಗೂಡಿಸುತ್ತೇವೆ. ಕಾರ್ಮಿಕವರ್ಗ ಜಯಶಾಲಿಯಾಗುತ್ತದೆ, ಬಂಡವಾಳವಾದ ಸೋಲುತ್ತದೆ. ಸಾಮ್ರಾಜ್ಯಶಾಹಿಯ ವಿನಾಶವಾಗಲಿ" (ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳು - ಅಜಯ ಕುಮಾರ್ ಘೋಷ್)

ಸಮಾಜವಾದದ ಆದರ್ಶಗಳು ಮತ್ತು ಅಕ್ಟೋಬರ್ ಕ್ರಾಂತಿಯ ಅಗಾಧ ಪರಿಣಾಮಕ್ಕೆ ಇವು ಸಾಕ್ಷಿಯಾಗಿವೆ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರಗತಿಪರ ಜಾಗತಿಕ ಕಣ್ಣೋಟ ದೊರೆಯಲು ಅಕ್ಟೋಬರ್ ಕ್ರಾಂತಿ ನೆರವಾಯಿತು. ಜಗತ್ತಿನಾದ್ಯಂತ ಸಾಮ್ರಾಜ್ಯವಾದ ಮತ್ತು ಫ್ಯಾಸಿಸಂ ವಿರುದ್ಧ ನಡೆಯುತ್ತಿರುವ ಹೋರಾಟಗಳ ಬಗ್ಗೆ ಕಾಂಗ್ರೆಸ್ ತೀವ್ರ ಆಸಕ್ತಿ ತಳೆಯತೊಡಗಿತು. ಹಾಗೂ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಬೆಂಬಲ ನೀಡತೊಡಗಿತು. ಸಾಮ್ರಾಜ್ಯವಾದ ವಿರೋಧಿ ಅಂತರರಾಷ್ಟ್ರೀಯ ಲೀಗ್ (ಬ್ರುಸೆಲ್ಸ್)ನಲ್ಲಿ ಜವಾಹರಲಾಲ್ ನೆಹರೂ ಭಾಗವಹಿಸಿದ್ದು ಮತ್ತು 1927 ರಲ್ಲಿ ಸೋವಿಯತ್ ಒಕ್ಕೂಟಕ್ಕೆ ಅವರ ಭೇಟಿ ಕಾಂಗ್ರೆಸ್ಸಿನ ಜಾಗತಿಕ ಕಣ್ಣೋಟವನ್ನು ಬಲಪಡಿಸಿದವು.

ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರಭಾವದಿಂದ ಸಮಾಜವಾದಿ ಸಿದ್ಧಾಂತ ಫಲವಾಗಿ ಭಾರತದ ಕಾರ್ಮಿಕ ವರ್ಗ ಹಾಗೂ ಪ್ರಗತಿಪರ ಜನರ ಮಧ್ಯೆ ಪ್ರಚಾರಗೊಂಡಿತು. ಅದು 1920ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ಸ್ಥಾಪನೆಗೊಂಡಿತು.

"ಆದ್ದರಿಂದ ಎಲ್ಲಾ ಸಾಮ್ರಾಜ್ಯವಾದವನ್ನು ನಾಶಮಾಡಿ ಇನ್ನೊಂದು ನೆಲೆಗಟ್ಟಿನಲ್ಲಿ ಸಮಾಜದ ಪುನ-ರ್‌ರಚನೆಗೆ ತೊಡಗಿಸುವ ಗುರಿ ನಮ್ಮದಾಗಬೇಕು. ಸಹಕಾರವೇ ಆ ನೆಲೆಗಟ್ಟು. ಅದರ ಇನ್ನೊಂದು ಹೆಸರು ಸಮಾಜವಾದ. ಸಹಕಾರಿ ಸಮಾಜವಾದಿ ಕಾಮನ್‌ವೆಲ್ತ್ ಸ್ಥಾಪನೆ ನಮ್ಮ ರಾಷ್ಟ್ರೀಯ ಧ್ಯೇಯವಾಗಬೇಕು ಮತ್ತು ಸಮಾಜವಾದಿ ರಾಷ್ಟ್ರಗಳ ವಿಶ್ವ ಒಕ್ಕೂಟ ಸ್ಥಾಪನೆ ನಮ್ಮ ಜಾಗತಿಕ ಧ್ಯೇಯವಾಗಬೇಕು" ಎಂದು 1928 ಡಿಸೆಂಬರ್ 12ರಂದು ಪೂನಾದಲ್ಲಿ ನಡೆದ ಮುಂಬಯಿ ಪ್ರೆಸಿಡೆನ್ಸಿ ಯುವ ಸಮ್ಮೇಳನದಲ್ಲಿ ಮಾತನಾಡುತ್ತಾ ನೆಹರೂ ಹೇಳಿದರು. (ಜವಾಹರಲಾಲರ ಆಯ್ದ ಕೃತಿಗಳು)

ಅಕ್ಟೋಬರ್ ಕ್ರಾಂತಿ ಭಾರತದಲ್ಲಿನ ಯೋಜನೆ ಮೇಲೆ ಪರಿಣಾಮ ಬೀರಿದೆ. 1917 ರವರೆಗೆ ಕೈಗಾರಿಕಾ ಕ್ರಾಂತಿ ಪಶ್ಚಿಮದ ದೇಶಗಳು ಮತ್ತು ಜಪಾನ್‌ನಲ್ಲಿ ಮಾತ್ರ ಪಕ್ವಗೊಂಡಿತ್ತು. ಸಾಮಾ-ಜವಾದದ ಅಡಿಯಲ್ಲಿ ಅತ್ಯಂತ ಸಂಕ್ಷಿಪ್ತ ಅವಧಿಯಲ್ಲಿ ಕೈಗಾರಿಕಾ ಕ್ರಾಂತಿ ಸಾಧ್ಯತೆಗೆ ಅವಕಾಶ ನೀಡುವ ಸಮಾಜಿಕ- ಆರ್ಥಿಕ ಶಕ್ತಿಗಳನ್ನು ಅಕ್ಟೋಬರ್ ಕ್ರಾಂತಿ ಹರಿಯಬಿಟ್ಟಿತು. ಅಕ್ಟೋಬರ್ ಕ್ರಾಂತಿ ನಂತರದ ಅವಧಿಯ ಅನುಭವಗಳು ಮತ್ತು ಬಂಡವಾಳಶಾಹಿ ಜಗತ್ತಿನ ಮಹಾ ಕುಸಿತ ಸಾಮಾಜಿಕ ಮತ್ತು ಆರ್ಥಿಕ ಕುರಿತ ಚಿಂತನೆಯ ಗುಣಮಟ್ಟವನ್ನೇ ದೊಡ್ಡ ರೀತಿಯಲ್ಲಿ ಬದಲಾ-ಯಿಸಿದವು. ಅತ್ಯಂತ ಸಂಕ್ಷಿಪ್ತ ಅವಧಿಯಲ್ಲಿ ಬಡತನ, ನಿರುದ್ಯೋಗ ಮತ್ತು ಹಿಂದುಳಿದಿರುವಿಕೆಯನ್ನು ತೊಡೆದು ಹಾಕಿದ ಸೋವಿಯತ್ ಉದಾಹರಣೆ ಕಾಂಗ್ರೆಸ್ಸಿನ ಕರಾಚಿ ನಿರ್ಣಯ ಅಂಗೀಕಾರದ ಮೇಲೆ ಪ್ರಭಾವ ಬೀರಿತು. 1931ರಲ್ಲಿ ಕಾಂಗ್ರೆಸ್ ಅಂಗೀಕರಿಸಿದ 'ಮೂಲಭೂತ ಹಕ್ಕುಗಳು ಮತ್ತು ಆರ್ಥಿಕ ನೀತಿ' ಎಂಬ ಈ ನಿರ್ಣಯ "ರಾಜಕೀಯ ಸ್ವಾತಂತ್ರ್ಯವು ಹಸಿವಿನಿಂದ ಬಳಲುತ್ತಿರುವ ಮಿಲಿಯಾಂತರ ಜನರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಒಳಗೊಂಡಿರಬೇಕು" ಎಂದು ಘೋಷಿಸಿತು.

'ಪ್ರಮುಖ ಕೈಗಾರಿಕೆಗಳು ಮತ್ತು ಸೇವೆಗಳು, ಖನಿಜ ಸಂಪತ್ತುಗಳು, ರೈಲ್ವೆ, ಜಲಮಾರ್ಗಗಳು, ನೌಕೋದ್ಯಮ ಮತ್ತು ಸಾರ್ವಜನಿಕ ಸಾರಿಗೆ ಇತರ ಸಾಧನಗಳು ಸರಕಾರದ ಒಡೆತನದಲ್ಲಿರಬೇಕು ಅಥವಾ ಸರಕಾರ ಅವನ್ನು ನಿಯಂತ್ರಿಸಬೇಕು ಎಂದು ನಿರ್ಣಯ ಹೇಳಿತು. ಸರ್ ಎಂ. ವಿಶ್ವೇಶ್ವರಯ್ಯ-ನವರು ಖ್ಯಾತ ಪುಸ್ತಕ 'ಭಾರತದಲ್ಲಿ ಯೋಜಿತ ಆರ್ಥಿಕತೆ' (1936)ಯಲ್ಲಿ ಸೋವಿಯತ್ ಪ್ರಭಾವ-ವನ್ನು ಕಾಣಬಹುದಾಗಿದೆ. 1938ರ ಫೆಬ್ರವರಿಯಲ್ಲಿ ಹರಿಪುರದಲ್ಲಿ ನಡೆದ ಕಾಂಗ್ರೆಸ್ [illegible] ಅಧಿವೇಶನದ ಅಧ್ಯಕ್ಷತೆಯನ್ನು ಸುಭಾಷ್ ಚಂದ್ರಬೋಸ್ ವಹಿಸಿದ್ದರು. ಪುನರ್ ನಿರ್ಮಾಣ[illegible] ರಾಷ್ಟ್ರೀಯ ಯೋಜನೆಯೊಂದನ್ನು ಪರಿಶೀಲಿಸಬೇಕು ಎಂದು ಅವರು ಕಾಂಗ್ರೆಸ್‌ಗೆ ಕರೆ [illegible] ನೆಹರೂ ಅಧ್ಯಕ್ಷರಾಗಿ ಹಾಗೂ ಪ್ರೊಫೆಸರ್ ಕೆ.ಟಿ.ಷಾ ಕಾರ್ಯದರ್ಶಿಯಾಗಿದ್ದ ರಾಷ್ಟ್ರೀಯ [illegible] ಸಮಿ-ತಿಯನ್ನು ಕಾಂಗ್ರೆಸ್ ರಚಿಸಿತು.

ಸಾಂಸ್ಕೃತಿಕ ರಂಗದಲ್ಲಿ

ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ಮೇಲೆ ಬಿದ್ದ ಅಕ್ಟೋಬರ್ ಕ್ರಾಂತಿಯ ಪರಿ[illegible] ಪ್ರಗತಿಪರ ಬರಹಗಾರರ [illegible] ಸ್ಥಾಪನೆಗಾಗಿ 1936ಏಪ್ರಿಲ್ 9ಮತ್ತು 10ರಂದು [illegible] ನಡೆದ ಅಖಿಲ ಭಾರತ ಪ್ರಗತಿಪರ ಬರಹಗಾರರ ಸಮ್ಮೇಳನ [illegible] ದಲ್ಲಿ [illegible] ಸಜ್ಜಾದ್ [illegible] ಮತ್ತು ಮುಲ್ಕ್‌ರಾಜ್ [illegible]

> "ಎಲ್ಲಾ ಸಾಮ್ರಾಜ್ಯವಾದವನ್ನು ನಾಶಮಾಡಿ [illegible] ಸಮಾಜದ ಪುನರ್‌ರಚನೆಗೆ ತೊಡಗಿಸುವ ಗುರಿ ನಮ್ಮದಾಗಬೇಕು. [illegible] ಆ ನೆಲೆಗಟ್ಟು. ಅದರ ಇನ್ನೊಂದು ಹೆಸರು ಸಮಾಜವಾದ" ಎಂದವರು ನೆಹರು.

ಭಾರತೀಯ ಲೇಖಕರಲ್ಲಿ ಸಂಘ ಸ್ಥಾಪಿಸುವ ಬಯಕೆ ಪ್ರಬಲವಾಯಿತು, ಅವರು ಪ್ರಗತಿಪರ ಬರಹಗಾ ಮೊದಲ ಗುಂಪನ್ನು ಸ್ಥಾಪಿಸಿದರು.

1930ರಲ್ಲಿ ಸೋವಿಯತ್ ಒಕ್ಕೂಟಕ್ಕೆ ಭೇಟಿ ನೀಡಿ ಬಂದ ಮಹಾನ್‌ಕವಿ ರವೀಂದ್ರನಾಥ್ ಟಾಗೋ ಬರೆದ ಈ ಕೆಳಗಿನ ಮಾತುಗಳಲ್ಲಿ ಅಕ್ಟೋಬರ್ ಕ್ರಾಂತಿಯ ಸಾಧನೆಗಳು ಪ್ರತಿಧ್ವನಿಸುತ್ತವೆ. "ಮೂ ದನಿ ಸಿಕ್ಕಿತು, ಅಜ್ಞಾನಿಗಳು ತಮ್ಮ ಮನಸ್ಸಿನ ಪರದೆಗಳನ್ನು ಕೊಡವಿ ಹಾಕಿದರು, ಅಸಹಾಯಕರು ಶಕ್ತಿ ಏನೆಂಬುದನ್ನು ಅರಿತು ಕೊಂಡರು ಮತ್ತು ಅವನತಿಯಲ್ಲಿದ್ದವರು ಸಮಾಜದ 'ಕರಾಳ ಕೂಪ' ದಿ ಹೊರಬಂದು ಇತರರೊಂದಿಗೆ ಸಮಾನತೆಯನ್ನು ಕೇಳತೊಡಗಿದರು. ಇದು ಕೇವಲ ಎಂಟು ವರ್ಷ ಕಡಿಮೆ ಅವಧಿಯಲ್ಲಿನ ಸೋವಿಯತ್ ರಷ್ಯಾದ ಸಾಧನೆ" (ರವೀಂದ್ರನಾಥ್ ಟಾಗೋರ್, ರಷ್ಯಾದಿಂದ ಗಳು- ಕಲ್ಕತ್ತಾ 1960 ಪು.40)

ಸೋವಿಯತ್-ಭಾರತ ವೈಜ್ಞಾನಿಕ ಸಂಬಂಧಗಳಲ್ಲಿಯೂ ಹೊಸ ಯುಗಕ್ಕೆ ಕ್ರಾಂತಿ ನಾಂದಿ ಹಾ ಸೋವಿಯತ್ ಒಕ್ಕೂಟದ ವಿಜ್ಞಾನಿಗಳ ಅಕಾಡೆಮಿಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅದರ ಅ ಯಾಗಿ ಭಾರತೀಯ ವಿಜ್ಞಾನಿಗಳ ನಿಯೋಗವೊಂದು 1925ರಲ್ಲಿ ಸೋವಿಯತ್ ಒಕ್ಕೂಟಕ್ಕೆ ಭೇಟಿ ನೀಡಿ ಇದು ವೈಜ್ಞಾನಿಕ ರಂಗದಲ್ಲಿ ಉಭಯ ದೇಶಗಳ ನಡುವಣ ಮೊದಲ ಸಂಘಟಿತ ಸಂಪರ್ಕವಾಗಿತ್ತು.ನಿಯೋ ಗದಲ್ಲಿ ರವೀಂದ್ರನಾಥ ಟಾಗೂರರ ಮಾಜಿ ಕಾರ್ಯದರ್ಶಿ-ಲೇಖಕ ಬ್ರಾಂಜ ಕುನ್ಹಾ, ಮುಂಬಯಿ ವಿದ್ಯಾಲಯದ ಪ್ರೊಫೆಸರ್ ಮೋದಿ ಮತ್ತು ಕಲ್ಕತ್ತಾ ವಿಶ್ವ ವಿದ್ಯಾಲಯದ ಡಾ.ಸಿ.ವಿ.ರಾಮನ್ ಇದ್ದರು.

ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿಯು ತನ್ನ ಅಗಾಧ ಪ್ರಭಾವ ಬೀರಿತು.

ಅನು :

ಈಗ ಹೋರಾಟದಲ್ಲಿ ಜನ ಒಂಟಿಯಲ್ಲ

ಲೆನಿನ್ ದೂರದ ಈ ದೇಶಗಳಿಂದ
ಧನ್ಯವಾದಗಳು ನಿನಗೆ,
ನೀನು ಈ ಮಹಾ ನಿರ್ಧಾರಗಳನ್ನು
ಕೈಗೊಂಡಾಗಿನಿಂದ,
ನಿನ್ನ ಚುರುಕು ಹೆಜ್ಜೆಗಳ ಚುರುಕು ನೋಟಗಳ
ಆ ದಿನಗಳಿಂದ
ಸುಖಕ್ಕಾಗಿ ನಡೆಸುವ ಹೋರಾಟದಲ್ಲಿ
ಜನ ಒಂಟಿಯಲ್ಲ
- ಪಾಬ್ಲೋ ನೆರೂದ


'ಫ್ಯಾಸಿಸಂನಿಂದ ಮಾನವಕೋಟಿಯನ್ನು ರಕ್ಷಿಸಿದ್ದು ಅಕ್ಟೋಬರ್ ಕ್ರಾಂತಿಯ ಅಂತಸ್ಸತ್ವ'

-ಸುನಿಲ್ ಮೈತ್ರಾ



ಬರ್ಲಿನ್‌ನ ರೈಖ್‌ಸ್ಟಾಗ್ ಮೇಲೆ ಕೆಂಪು ಬಾವುಟ ಹಾರಿಸುತ್ತಿರುವ ಸೋವಿಯತ್ ಸೈನಿಕ

ಯುರೋಪಿನ ಸಣ್ಣ ದೇಶಗಳನ್ನು ಕೆಲವೇ ದಿನಗಳಲ್ಲಿ ನುಂಗಿಹಾಕಿದ, ಆಗ ಯುರೋಪಿಯನ್ ಬಲಿಷ್ಠ ಸೈನ್ಯ ಎಂದು ಹೆಸರಾದ ಫ್ರೆಂಚ್ ಸೈನ್ಯವನ್ನು ಕೆಲವು ವಾರಗಳಲ್ಲಿ ಮಣ್ಣು ಮುಕ್ಕಿಸಿದ ಹಿಟ್ಲರ್‌ನ ಯುದ್ಧ ಯಂತ್ರಕ್ಕೆ ಆದರೆ ರಷ್ಯನ್ ಸೈನ್ಯ ಹಲವು ತಿಂಗಳ ಕಾಲ ಪ್ರತಿರೋಧ ಒಡ್ಡಿ ಹಿಮ್ಮೆಟ್ಟಿಸಿ ಫ್ಯಾಸಿಸಂನಿಂದ ಯುರೋಪನ್ನು ವಿಮೋಚನೆ ಮಾಡಿದ್ದು ರಷ್ಯನ್ ಸೈನ್ಯ ಮಾತ್ರವಲ್ಲ, ಸೋವಿಯತ್ ನಾಗರಿಕರು ಕೂಡಾ. ಅಕ್ಟೋಬರ್ ಕ್ರಾಂತಿಯ ಮೂಸೆಯಲ್ಲಿ ಹುಟ್ಟಿಗೊಂಡ, ಸಮಾಜವಾದಿ ವ್ಯವಸ್ಥೆ ಸೃಷ್ಟಿಸಿದ ಹೊಸ ಮಾನವನ ಸಾಮರ್ಥ್ಯವನ್ನು ಇದು ಸಾಬೀತು ಮಾಡಿತು.



ಫ್ಯಾಸಿಸಂನಿಂದ ಜಗತ್ತನ್ನು ರಕ್ಷಿಸಿದ್ದು ಅಕ್ಟೋಬರ್ ಕ್ರಾಂತಿಯ ಅಂತಸ್ಸತ್ವ ಎಂಬ ಚಾರಿತ್ರಿಕ ಸತ್ಯ ಅಳಿಸಿಹಾಕಲು ಸಾಮ್ರಾಜ್ಯಶಾಹಿಗಳಿಗೆ ಸಾಧ್ಯವಾಗಿಲ್ಲ. ಅದೇ ರೀತಿ ಸೋವಿಯತ್ ವಿಘಟನೆಯಿಂದ ಹಿರಿಹಿರಿ ಹಿಗ್ಗುತ್ತಿರುವವರಿಗೂ ಅಕ್ಟೋಬರ್ ಕ್ರಾಂತಿಯ ಸತ್ವದ ಬಗ್ಗೆ ಗೊತ್ತಿಲ್ಲ. ಆದರೆ ನಮಗೆ ಗೊತ್ತು- ಅದು ಮತ್ತೆ ಮೇಲೆದ್ದು ಬಂದು ಸಾಮ್ರಾಜ್ಯಶಾಹಿಯಡಿಯಲ್ಲಿ ತತ್ತರಿಸುತ್ತಿರುವ ಜನಕೋಟಿಯನ್ನು ವಿಮೋಚನೆಗೊಳಿಸುತ್ತದೆ ಎನ್ನುತ್ತಾರೆ ಕಾಂ. ಸುನಿಲ್ ಮೈತ್ರಾ.

ಫ್ಯಾಸಿಸಂನ ಜರ್ಮನ್ ಅವತಾರ 'ನ್ಯಾಶನಲ್ ಸೋಶಲಿಸಂ' ಅಥವಾ ನಾಜೀವಾದ. ಇದು ಸಾಮ್ರಾಜ್ಯಶಾಹಿಯ ಅತ್ಯಂತ ಕ್ರೂರ ಮುಖ. 19ನೇ ಶತಮಾನದ ಉತ್ತರಾರ್ಧದಲ್ಲಿ ಸಾಮ್ರಾಜ್ಯಶಾಹಿ ದೇಶಗಳು ಬೆಳೆದು, ಅವು ತಮ್ಮ ನಡುವೆ ಜಗತ್ತನ್ನು ಹಂಚಿಕೊಂಡಿದ್ದವು. ಇದೇ ಸಮಯದಲ್ಲಿ ಜರ್ಮನಿ ತೀವ್ರ ಕೈಗಾರಿಕೀಕರಣದಿಂದ ಬಲಿಷ್ಟವಾಗಿ ಎರಡು ಯುದ್ಧಗಳಲ್ಲಿ (ಫ್ರೆಂಚ್ ಮತ್ತು ಆಸ್ಟ್ರಿಯನ್‌ರ ವಿರುದ್ಧ) ಗೆದ್ದು ತನ್ನ ಬಲ ತೋರಿಸಿ ಸಾಮ್ರಾಜ್ಯಶಾಹಿ ಬಣ ಸೇರಬಯಸಿ, ಜಗತ್ತನ್ನು ಮತ್ತೊಮ್ಮೆ ಹಂಚಿಕೊಂಡು, ಅದರಲ್ಲಿ ತನ್ನ ಪಾಲಿಗಾಗಿ ಪ್ರಥಮ ಮಹಾಯುದ್ಧ ಹೂಡಿತು. ಆದರೆ ಸೋತಿತು. ಸೋತ ಜರ್ಮನಿಯ ಮೇಲೆ ಹೇರಿದ ವರ್ಸೆಲ್ಸ್ ಒಪ್ಪಂದ ಜರ್ಮನಿಯನ್ನು ಆರ್ಥಿಕ ದುಸ್ಥಿತಿಗೆ ಸಿಲುಕಿಸಿತು. ಜನತೆ ಇದರಿಂದ ತತ್ತರಿಸಿದರು. ಜನತೆಯ ಆತ್ಮಾಭಿಮಾನಕ್ಕೆ ಇದು ಸವಾಲಾಗಿತ್ತು. ಈ ಅವಧಿಯಲ್ಲಿ ಆಳಿದ ಹಲವು ಸರಕಾರಗಳಿಂದ ದೇಸತ್ತ ಜನರ ಹತಾಶೆಯನ್ನು ದುರುಪಯೋಗಿಸಿ ಹುಟ್ಟಿಬಂದದ್ದು ನಾಜೀವಾದ. ವರ್ಸೆಲ್ಸ್ ಒಪ್ಪಂದದ ಕೆಸರಿನಿಂದ ಜರ್ಮನಿಯನ್ನು ಹೊರಗೆಳೆಯುವ ಆಶ್ವಾಸನೆಯಿಂದ ರಾಷ್ಟ್ರೀಯ ದುರಭಿಮಾನವನ್ನು ಕೆರಳಿಸುವ ಮೂಲಕ ಹಿಟ್ಲರ್‌ನ ನ್ಯಾಶನಲ್ ಸೋಶಲಿಸ್ಟ್ ಪಕ್ಷ (ನಾಜೀ ಪಕ್ಷ) ಅಧಿಕಾರಕ್ಕೆ ಬಂತು. ನಾಜೀ ಪಕ್ಷದ ಮೂಲಕ ಜರ್ಮನ್ ಆಳುವ ವರ್ಗಗಲಿಗೆ ತಮ್ಮ ಎಲ್ಲಾ ಮುಖವಾಡಗಳನ್ನು ಕಳಚಿ ಮುಕ್ತ ಭಯೋತ್ಪಾದಕ ರೂಪದ ಆಳ್ವಿಕೆ ನಡೆಸುವ ಸಂದರ್ಭ ಅವು ಸಿಕ್ಕಿದೆ ಎಂದನಿಸಿತು. ಮಾನವನ ಊಹೆಗೆ ನಿಲುಕದ ಅತ್ಯಂತ ಕ್ರೂರ ವ್ಯವಸ್ಥೆಯನ್ನು ಹುಟ್ಟಿಹಾಕಿದವು. ಸೀಮಿತವಾದ ಆದರೂ ಸ್ವಲ್ಪ-ಮಟ್ಟಿಗೆ ಇದ್ದ ಬೂರ್ಜ್ವಾ ಪ್ರಜಾತಂತ್ರದ, ಸ್ವಾತಂತ್ರ್ಯದ ಹಕ್ಕುಗಳನ್ನು ಗಾಳಿಗೆ ತೂರಲಾಯಿತು. ಎಲ್ಲಾ ಭಿನ್ನಮತ ಮತ್ತು ವಿರೋಧಗಳನ್ನು ದಮನಿಸಲಾಯಿತು. ಟ್ರೇಡ್ ಯುನಿಯನ್‌ಗಳು, ಕಮ್ಯುನಿಸ್ಟ್ ಪಕ್ಷ, ಸೋಶಲಿಸ್ಟ್ ಪಕ್ಷ, ಇತರ ಪ್ರಜಾಸತ್ತಾತ್ಮಕ ಪಕ್ಷಗಳನ್ನು ನಿಷೇಧಿಸಲಾಯಿತು. ಜರ್ಮನರು ಅತ್ಯಂತ ಉಚ್ಚ ಜನಾಂಗವೆಂಬ ವಿಷಬೀಜವನ್ನು ದೊಡ್ಡವರಲ್ಲಿ ಮಾತ್ರವಲ್ಲ ಮಕ್ಕಳಲ್ಲೂ ಬಿತ್ತಲಾಯಿತು. ಯೆಹೂದ್ಯರು ಬಲಿಪಶುಗಳಾದರು. ಅವರನ್ನು ಸರ್ಕಾರಿ ಹುದ್ದೆಗಳಿಂದ, ಶೈಕ್ಷಣಿಕ ಸಾಂಸ್ಕೃತಿಕ ಸಂಸ್ಥೆಗಳಿಂದ ಹೊರಹಾಕಲಾಯಿತು. ಅವರ ಅಂಗಡಿಗಳನ್ನು, ಮನೆಗಳನ್ನು ಲೂಟಿಮಾಡಲಾಯಿತು. ಸುಟ್ಟುಹಾಕಲಾಯಿತು. ಕ್ರೂರದಮನದಿಂದ ದೇಶಾಂತರ ಹೋಗಲಾರದ ಯೆಹೂದ್ಯರನ್ನು ದನಗಳಂತೆ ನಡೆಸಿಕೊಳ್ಳಲಾಯಿತು. ಅವಮಾನಕಾರಿ ಬದುಕು ಬದುಕಬೇಕಾಯಿತು. ಯೆಹೂದ್ಯರ ಮೇಲಿನ ಕ್ರೂರ ದಬ್ಬಾಳಿಕೆ ಫ್ಯಾಸಿಸಂ ವಿರುದ್ಧ ದನಿ ಎತ್ತುವವರನ್ನು ಬೆದರಿಸುವ ಸಾಧನವೂ ಆಯಿತು.

ಸಮಾಜವಾದವನ್ನು ಹೊಸಕಿ ಹಾಕಲು ಕುಮ್ಮಕ್ಕು

ಮೊದಲ ಮಹಾಯುದ್ಧದ ಗದ್ದಲದ ನಡುವೆ, ಇನ್ನೊಂದು ಗುಣಾತ್ಮಕವಾಗಿ ಹೊಸದಾದ ಪ್ರಭುತ್ವವೊಂದು ಉದಯಿಸಿತು. ಬ್ರಿಟನ್, ಫ್ರಾನ್ಸ್, ಅಮೆರಿಕ ಮಾತ್ರವಲ್ಲ ಜರ್ಮನಿಯಲ್ಲಿ ಸಹ ಇದರಿಂದ ನಡುಕ ಹುಟ್ಟಿತು. ಅದೇ ಸೋವಿಯತ್ ಸಮಾಜವಾದಿ ಒಕ್ಕೂಟ. ಝಾರನ ದಬ್ಬಾಳಿಕೆ

ನಾಜೀ ಪಕ್ಷದ ಮೂಲಕ ಜರ್ಮನ್ ಆಳುವ ವರ್ಗಗಲಿಳಿಗೆ ತಮ್ಮ ಎಲ್ಲಾ ಮುಖವಾಡಗಳನ್ನು ಕಳಚಿ ಮುಕ್ತ ಭಯೋತ್ಪಾದಕ ರೂಪದ ಆಳ್ವಿಕೆ ನಡೆಸುವ ಸಂದರ್ಭ ಅವು ಸಿಕ್ಕಿದೆ ಎಂದನಿಸಿತು.

ಕೊನೆಗೊಳಿಸಿ ಬೂರ್ಜ್ವಾ ಭೂಮಾಲಕರ ಅಟಾಟೋಪವನ್ನು ನಿಲ್ಲಿಸಿತು. ಉತ್ಪಾದನಾ ಸಾಧನಗಳ ರಾಷ್ಟ್ರೀಕರಣವಾಗಿ, ಅದು ಎಲ್ಲಾ ಜನತೆಯ ಆಸ್ತಿಯಾಗುವಂತಾಯಿತು. ಅದನ್ನು ಹುಟ್ಟಿನಲ್ಲೇ ಹೊಸಕಿಹಾಕಲು ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳು ಯತ್ನಿಸಿದವು. ಅದು ಅವರಿಗೆ ಸಾಧ್ಯವಾಗಲಿಲ್ಲ. ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಪಂಚವಾರ್ಷಿಕ ಯೋಜನೆಗಳ ಮೂಲಕ ಸೋವಿಯೆತ್ ಒಕ್ಕೂಟ ಯುರೋಪಿನ ಬಲಿಷ್ಟ ಕೈಗಾರಿಕಾ ದೇಶವಾಯಿತು. ಇದು ಸಾಮ್ರಾಜ್ಯಶಾಹಿಗಳ ಆತಂಕ, ನಡುಕಕ್ಕೆ ಕಾರಣವಾಗಿತ್ತು. ಯಾಕೆಂದರೆ ಸಮಾಜವಾದ ಕೇವಲ ರಾಷ್ಟ್ರೀಯ ಸ್ವರೂಪದ್ದಲ್ಲ. ಅದು ಎಲ್ಲಾ ಆಯಾಮಗಳಲ್ಲೂ ಅಂತರ್ರಾಷ್ಟ್ರೀಯ ಪರಿಕಲ್ಪನೆ. ಆದ್ದರಿಂದ 1934ರಲ್ಲಿ ಅಧಿಕಾರಕ್ಕೆ ಬಂದ ಹಿಟ್ಲರ್‌ಗೆ ಪೂರ್ವಕ್ಕೆ ತನ್ನ ಸಾಮ್ರಾಜ್ಯ ವಿಸ್ತರಿಸುವಂತೆ, ಸಾಮ್ರಾಜ್ಯಶಾಹಿಗಳು ಕುಮ್ಮಕ್ಕು ಕೊಡುತ್ತಿದ್ದರು. ಸಮಾಜವಾದದ ಸಂದೇಶವನ್ನು ಯೂರೋಪಿನ ಕಾರ್ಮಿಕ ವರ್ಗದ ಗಮನಾರ್ಹ ಭಾಗ ಸ್ವೀಕರಿಸಿತ್ತು. ಇತರ ದೇಶಗಳ ದುಡಿಯುವ ಜನರು ಸಮಾಜವಾದಿ ವ್ಯವಸ್ಥೆಯತ್ತ ತೀವ್ರವಾಗಿ ಆಕರ್ಷಿತರಾಗುತ್ತಿದ್ದ ಸಮಯವದು. ಆದ್ದರಿಂದ ಬ್ರಿಟನ್, ಫ್ರಾನ್ಸ್, ಅಮೇರಿಕದ ಬೂರ್ಜ್ವಾಗಳು ಹಿಟ್ಲರ್‌ನ ಫ್ಯಾಸಿಸಂ ಬಳಸಿ ಸೋವಿಯೆತ್ ಒಕ್ಕೂಟವನ್ನು ಮಿಲಿಟರಿ ಮೂಲಕ ಪುಡಿಗುಟ್ಟುವುದು ಅತ್ಯವಶ್ಯಕವೆಂದು ನಿರ್ಧರಿಸಿದ್ದರು. ಹಿಟ್ಲರ್ ಅವರ ಮೇಲೆ ತಿರುಗಿ ಬೀಳುವ ಅಪಾಯ ಇದ್ದರೂ, ಸಾಮ್ರಾಜ್ಯಶಾಹಿಗಳು ಈ ನೀತಿ ಮುಂದುವರೆಸಿದರು.

ಜಗತ್ತನ್ನು ಫ್ಯಾಸಿಸಂ ಕಗ್ಗತ್ತಲು ಆವರಿಸಲು ಬಿಟ್ಟರು

ಹಿಟ್ಲರ್‌ನ ಜರ್ಮನಿ ಯುರೋಪಿನಲ್ಲಿ 'ಗೂಂಡಾಗಿರಿ'ಯಿಂದ ಸಣ್ಣ ದೇಶಗಳನ್ನು ತುಳಿದುಹಾಕಲು ಆರಂಭಿಸಿದಾಗಲೂ ಅವರು ಸುಮ್ಮನಿದ್ದರು. ಹಿಟ್ಲರ್ ರುರ್, ರೈನ್‌ಲ್ಯಾಂಡ್, ಆಸ್ಟ್ರೀಯಾ ಜೆಕೊಸ್ಲಾವಾಕಿಯಾಗಳನ್ನು ವಶಪಡಿಸಿಕೊಂಡಾಗ ಬ್ರಿಟನ್, ಫ್ರಾನ್ಸ್‌ಗಳು ಸುಮ್ಮನಿದ್ದವು. ಮಾತ್ರವಲ್ಲ. ತಾವು ಅದಕ್ಕೆ ಅಡ್ಡಬರುವುದಿಲ್ಲ ಎಂದು ಹಿಟ್ಲರ್‌ಗೆ ಭರವಸೆ ನೀಡಿದ್ದವು. ಈಗ ಪೂರ್ವ ಯುರೋಪಿನ ದೇಶಗಳ ಪ್ರಜಾಪ್ರಭುತ್ವ, ಸ್ವಾತಂತ್ರ್ಯದ ಬಗ್ಗೆ ಕಣ್ಣೀರು ಹಾಕುವ ಬೂರ್ಜ್ವಾಗಳೇ ಆಗ ಹಿಟ್ಲರ್‌ಗೆ ಕುಮ್ಮಕ್ಕು ಕೊಟ್ಟಿದ್ದು ಎಂದು ಮರೆಯುವಂತಿಲ್ಲ. ಅವುಗಳ ಹರಣಕ್ಕೆ ಸ್ಪಾನಿಶ್ ರಿಪಬ್ಲಿಕ್ ಸರ್ಕಾರವನ್ನು ಉರುಳಿಸಿ ಕ್ಷಿಪ್ರಕ್ರಾಂತಿ ನಡೆಸಿ ಅಧಿಕಾರಕ್ಕೆ ಬರಲು ಯತ್ನಿಸಿದ ಫ್ಯಾಸಿಸ್ಟ್ ಜನರಲ್ ಫ್ರಾಂಕೊ. ಆತನಿಗೆ ಹಿಟ್ಲರ್ ಸೈನ್ಯ ಶಸ್ತ್ರಾಸ್ತ್ರಗಳ ಸರಬರಾಜು ಮೂಲಕ ಪೂರ್ಣ ಬೆಂಬಲ ನೀಡಿದರೆ, ಈಗ ಎಲ್ಲಾ ದೇಶಗಳ ಪ್ರಜಾಪ್ರಭುತ್ವದ 'ಕಂಟ್ರಾಕ್ಟು' ತೆಗೆದುಕೊಂಡವರಂತೆ ಮಾಡುವ ಬ್ರಿಟನ್ ಫ್ರಾನ್ಸ್, ಅಮೆರಿಕಗಳು ತಾವು ಮಧ್ಯಪ್ರವೇಶಿಸುವುದಿಲ್ಲ ಎನ್ನುತ್ತಾ ಸ್ಪಾನಿಷ್ ರಿಪಬ್ಲಿಕನ್ ಸೈನ್ಯಕ್ಕೆ ಶಸ್ತ್ರಾಸ್ತ್ರ ಮಾರಲೂ ನಿರಾಕರಿಸಿದವು. ಇದರಿಂದಾಗಿ ಸ್ಪಾನಿಷ್ ರಿಪಬ್ಲಿಕನ್ ಸೈನ್ಯ ವೀರಾವೇಶದಿಂದ ಹೋರಾಡಿದರೂ ಸೋತು, ಸ್ಪೇನ್ ಫ್ಯಾಸಿಸಂ ವಶವಾಯಿತು. ಸ್ಪೇನ್ ಫ್ಯಾಸಿಸ್ಟ್ ನೊಗದಿಂದ ಬಿಡಿಸಿಕೊಳ್ಳಲು ಸುಮಾರು 40 ವರ್ಷಗಳೇ ಕಾಯಬೇಕಾಯಿತು. ಇದೇ ರೀತಿ ಇಟಾಲಿಯನ್ ಫ್ಯಾಸಿಸ್ಟರ ನಾಯಕ ಮುಸೊಲಿನಿ ಅಬಿಸಿನಿಯವನ್ನು, ಜಪಾನಿ ಫ್ಯಾಸಿಸ್ಟರು ಮಂಚೂರಿಯಾ, ಚೀನಾವನ್ನು ಆಕ್ರಮಿಸಿದಾಗಲೂ ಅವರು

ಇತರ ದೇಶಗಳ ದುಡಿಯುವ ಜನರು ಸಮಾಜವಾದಿ ವ್ಯವಸ್ಥೆಯತ್ತ ತೀವ್ರವಾಗಿ ಆಕರ್ಷಿತರಾಗುತ್ತಿದ್ದ ಸಮಯವದು. ಆದ್ದರಿಂದ ಬ್ರಿಟನ್, ಫ್ರಾನ್ಸ್, ಅಮೇರಿಕದ ಬೂರ್ಜ್ವಾಗಳು ಹಿಟ್ಲರ್‌ನ ಫ್ಯಾಸಿಸಂ ಬಳಸಿ ಸೋವಿಯೆತ್ ಒಕ್ಕೂಟವನ್ನು ಮಿಲಿಟರಿ ಮೂಲಕ ಪುಡಿಗುಟ್ಟುವುದು ಅತ್ಯವಶ್ಯಕವೆಂದು ನಿರ್ಧರಿಸಿದ್ದರು.

ಸುಮ್ಮನಿದ್ದರು. ಇದಕ್ಕೆಲ್ಲ ಅಡ್ಡಗಾಲು ಹಾಕದೆ ಸುಮ್ಮನಿದ್ದರೆ ಹಿಟ್ಲರ್ ಸೋವಿಯೆತ್ ಒಕ್ಕೂಟದ ಮೇಲೆರಗಿ ಹೋಗಬಹುದು, ಸೋವಿಯೆತ್ ಸಮಾಜವಾದಿ ಒಕ್ಕೂಟವನ್ನು ನಾಶಮಾಡಬಹುದು ಎಂಬುದು ಅವರ ನಿರೀಕ್ಷೆಯಾಗಿತ್ತು.

ಈ ಅವಧಿಯಲ್ಲಿ ಸೋವಿಯೆತ್ ಒಕ್ಕೂಟ ಹಿಟ್ಲರ್‌ನ ನಾಜೀವಾದದ ಅಪಾಯ ಕಂಡು, ಹಿಟ್ಲರ್‌ನ್ನು ವಿರೋಧಿಸುವ ಪ್ರಯತ್ನ ಮಾಡಿತು, ಫ್ರಾನ್ಸ್, ಬ್ರಿಟನ್‌ಗಳೊಂದಿಗೆ ಸಣ್ಣ ದೇಶಗಳ ಭದ್ರತೆ ಬಗ್ಗೆ ಒಂದು ಒಪ್ಪಂದಕ್ಕೆ ಬರಲು ಪ್ರಯತ್ನಿಸಿತು. ಫ್ಯಾಸಿಸ್ಟ್ ವಿರೋಧಿ ಕೂಟ ರಚಿಸಲು ಪ್ರಯತ್ನಿಸಿತು. ಇವೆಲ್ಲದಕ್ಕೂ ಅವು ಪ್ರತಿಸ್ಪಂದಿಸಲಿಲ್ಲ. ಆದರೆ ಹಿಟ್ಲರ್ ಯುರೋಪೆಲ್ಲಾ ಗೆಲ್ಲಲು ಆರಂಭಿಸಿದಂತೆ ಸಾಮ್ರಾಜ್ಯಶಾಹಿ ದೇಶಗಳ ಜನತೆಯೂ ಆತಂಕ ತೋರಿಸಲಾರಂಭಿಸಿತು. ಹಿಟ್ಲರ್ 1939 ಸೆಪ್ಟೆಂಬರ್ 1ರಂದು ಪೋಲೆಂಡ್ ಮೇಲೆ ಆಕ್ರಮಣ ಮಾಡಿದಾಗ ಬ್ರಿಟನ್, ಫ್ರಾನ್ಸ್‌ಗಳೂ ಜರ್ಮನಿ ಮೇಲೆ ಯುದ್ಧ ಸಾರಬೇಕಾಯಿತು. ಆದರೆ ಈಗಾಗಲೇ ಅವರ ಕುಮ್ಮಕ್ಕಿನಿಂದ ಕೊಬ್ಬಿದ್ದ ಹಿಟ್ಲರ್‌ನ ಬೂಟಿನಡಿಯಲ್ಲಿ ಪೋಲೆಂಡ್, ಯುಗೋಸ್ಲಾವಿಯ, ಬೆಲ್ಜಿಯಂ, ಗ್ರೀಸ್‌ಗಳು ಬಂದವು. 6 ವಾರಗಳಲ್ಲಿ ಫ್ರಾನ್ಸ್ ಸಹ ಬಲಿಯಾಯಿತು. ಜೂನ್ 1941ರ ಹೊತ್ತಿಗೆ ಇಡೀ ಯುರೋಪನ್ನು ಗೆದ್ದ ಹಿಟ್ಲರ್, ಸೋವಿಯೆತ್ ಒಕ್ಕೂಟದ ಮೇಲೆ ಆಕ್ರಮಣ ಮಾಡಿದ. ಅಷ್ಟು ಹೊತ್ತಿಗೆ ಜರ್ಮನಿಯಲ್ಲದೆ ಆತ ವಶಪಡಿಸಿಕೊಂಡ ಯುರೋಪಿನ ಕೈಗಾರಿಕೆ, ಖನಿಜಗಳು, ಕಚ್ಚಾ ವಸ್ತುಗಳು ಆತನ ಬಲ ಇಮ್ಮಡಿಗೊಳಿಸಿದವು. ಫ್ಯಾಸಿಸಂನ್ನು ತಡೆಯುವ ಏಕಮಾತ್ರ ಆಶಾದೀಪ ಸೋವಿಯೆತ್ ಒಕ್ಕೂಟವಾಗಿತ್ತು.

ಹಿಟ್ಲರ್‌ನ ಸೈನ್ಯ ಸಾವಿರ ಮೈಲಿಗಳ ಸೋವಿಯೆತ್ ಜರ್ಮನ್ ಗಡಿಯಲ್ಲಿ ಒಮ್ಮೆಗೇ ಆಕ್ರಮಣ ನಡೆಸಿತು. ಆಕ್ರಮಣದ ಸಮಯದ ಅನಿಶ್ಚತೆಯಿಂದ, ಮೊದಲಿಗೆ ಜರ್ಮನ್ ಪಡೆ ಭಾರಿ ಮುನ್ನಡೆ ಸಾಧಿಸಿತು. ನವೆಂಬರ್ ಒಳಗೆ ಜರ್ಮನ್ ಸೈನ್ಯ ಮಾಸ್ಕೋದಿಂದ 20ಮೈಲಿಗಳಷ್ಟು ದೂರದವರೆಗೆ ತಲುಪಿತ್ತು. ಚಳಿಗಾಲ-ಆರಂಭವಾಗುವ ಮೊದಲು ಮಾಸ್ಕೋದ ಪತನ ಆಗುತ್ತದೆ ಎಂಬುದು ಹಿಟ್ಲರ್‌ನ ನಿರೀಕ್ಷೆ ಆಗಿತ್ತು ಆದರೆ ಅದರ ನಂತರ ಬಂದ ಪ್ರತಿರೋಧ ಮತ್ತು ಸಂಘರ್ಷದಿಂದ ಜರ್ಮನ್ ಸೈನ್ಯ ಒಂದಿಂಚೂ ಮುಂದೆ ಹೋಗಲು ಸಾಧ್ಯವಾಗಲಿಲ್ಲ. ಡಿಸೆಂಬರ್ 5ರ ಹೊತ್ತಿಗೆ ಜರ್ಮನ್ ಆಕ್ರಮಣವನ್ನು ಮಟ್ಟಹಾಕಲಾಯಿತು. ಅಲ್ಲದೆ ಜರ್ಮನ್ ಸೈನ್ಯ ಮೊದಲ ಬಾರಿಗೆ ಹಿಮ್ಮೆಟ್ಟಲು ಆರಂಭಿಸಿತು.

‘ಇದು ಹೇಗೆ ಸಾಧ್ಯವಾಯಿತು’?

ಇದು ಎಲ್ಲರೂ ಕೇಳುವ ಪ್ರಶ್ನೆ. ಇದನ್ನು ಸಾಮ್ರಾಜ್ಯಶಾಹಿ ಸಮರ್ಥಕರು ಹಾರಿಕೆಯ ಉತ್ತ ಕೊಡುತ್ತಾರೆ. ಕುಹಕಗಳಿಂದ ದಾರಿತಪ್ಪಿಸುವ ಉತ್ತರ ಕೊಡಲು ಪ್ರಯತ್ನಿಸುತ್ತಾರೆ. ಹಿಟ್ಲರ್‌ನ ಸೇನಾ ಪತಿಗಳು ಏನು ಹೇಳುತ್ತಾರೆ?

ಹಿಟ್ಲರ್‌ನ ಸೇನಾಪತಿಗಳಲ್ಲೊಬ್ಬರಾದ ಜನರಲ್ ಭುನೆನ್‌ಟ್ರಿಟ್ ಹೇಳುತ್ತಾರೆ “ಮೊದ ಲಿನಿಂದಲೂ ಪೋಲೆಂಡ್ ಮತ್ತು ಪಾಶ್ಚಿಮಾತ್ಯ ಪಡೆಗಳಿಗಿಂತ ರಶ್ಯನ್ ಪಡೆಗಳ ನಡತೆ ಪ್ರಾ

ಹಿಟ್ಲರ್ 1939 ಸೆಪ್ಟೆಂಬರ್ 1ರಂದು ಪೋಲೆಂಡ್ ಮೇಲೆ ಆಕ್ರಮಣ ಮಾಡಿದಾಗ ಬ್ರಿಟನ್, ಫ್ರಾನ್ಸ್‌ಗಳೂ ಜರ್ಮನಿ ಮೇಲೆ ಯುದ್ಧ ಸಾರಬೇಕಾಯಿತು. ಆದರೆ ಈಗಾಗಲೇ ಅವರ ಕುಮ್ಮಕ್ಕಿನಿಂದ ಕೊಬ್ಬಿದ್ದ ಹಿಟ್ಲರ್‌ನ ಬೂಟಿನಡಿಯಲ್ಲಿ ಪೋಲೆಂಡ್, ಯುಗೋಸ್ಲಾವಿಯ, ಬೆಲ್ಜಿಯಂ, ಗ್ರೀಸ್‌ಗಳು ಬಂದವು. 6 ವಾರಗಳಲ್ಲಿ ಫ್ರಾನ್ಸ್ ಸಹ ಬಲಿಯಾಯಿತು.

ನ್ನವಾಗಿತ್ತು. ಪೂರ್ತಿ ಸುತ್ತವರಿಯಲ್ಪಟ್ಟಾಗಲೂ ರಶ್ಯನರು ಹತಾಶರಾಗದೆ ಹೋರಾಡುತ್ತಿದ್ದರು, ು ಬಿಟ್ಟುಕೊಡುತ್ತಿರಲಿಲ್ಲ."

ಹಿಟ್ಲರ್‌ನ ಸೇನಾಧ್ಯಕ್ಷ ತನ್ನ ಡೈರಿಯಲ್ಲಿ ಬರೆದಿದ್ದ - "ನಾವು ರಶ್ಯನರ ಸಾಮರ್ಥ್ಯದ ಸರಿಯಾದ ಂದಾಜು ಮಾಡಿರಲಿಲ್ಲ. ರಶ್ಯದ ಆರ್ಥಿಕ, ಸಾಗಾಣಿಕೆಯಲ್ಲಿ ಮಾತ್ರವಲ್ಲ, ಮಿಲಿಟರಿ ಬಗೆಗೂ ನಮ್ಮ ಂದಾಜಿಗಿಂತ ಅವರ ಸಾಮರ್ಥ್ಯ ಹೆಚ್ಚಾಗಿತ್ತು. ಡಜನುಗಟ್ಟಲೆ ತುಕಡಿಗಳು ನಾಶವಾಗುತ್ತಿದ್ದಂತೆ ನ್ನೊಂದು ಡಜನ್ ತುಕಡಿಗಳು ತಯಾರಾಗುತ್ತಿದ್ದವು."

ಇನ್ನೊಬ್ಬ ಜನರಲ್ ವಾನ್ ರುನ್‌ಸ್ಟೆಡ್ ಯುದ್ಧದ ನಂತರ ಹೇಳಿದ್ದ "ರಶ್ಯದ ಬಗೆಗೆ ಮಾಡಿದ್ದ ಂದಾಜುಗಳೆಲ್ಲಾ ಅರ್ಥಹೀನ ಎಂದು ಆಕ್ರಮಣ ಆರಂಭವಾಗುತ್ತಿದ್ದಂತೆ ಗೊತ್ತಾಯಿತು........"
ಎಲ್ಲಾ ಉದ್ಧರಣೆಗಳು *Rise and Fall of Third Reich* ನಿಂದ ಆಯ್ದವುಗಳು)

ಬೂರ್ಜ್ವಾ ಮತ್ತು
ಸಮಾಜವಾದಿ ದೇಶಭಕ್ತಿ

ಸೋವಿಯೆತ್ ಪ್ರತಿರೋಧ ಹಿಟ್ಲರ್‌ನ ಸೈನ್ಯಕ್ಕೆ ಎಷ್ಟು ತೀವ್ರವಾಗಿತ್ತೆಂದರೆ, ಸಾಮ್ರಾಜ್ಯಶಾಹಿ ಾಜಕಾರಣಿಗಳಲ್ಲೇ ಪರಮ ಪ್ರತಿಗಾಮಿ ಚರ್ಚಿಲ್ ಸ್ಟಾಲಿನ್‌ಗೆ ಅಭಿನಂದನಾ ಟೆಲಿಗ್ರಾಂ ಕಳಿಸಿದ. ರ್ಮನ್ ಸೈನ್ಯಕ್ಕೆ ಸರಿಸಾಟಿ ಸೋವಿಯೆತ್ ಸೈನ್ಯ ಮಾತ್ರ ಎಂದು ಟೆಲಿಗ್ರಾಂ ಹೇಳಿತ್ತು. ಹಿಟ್ಲರ್ ಚಳಿ-ಾಲದ ಮೊದಲು ಜರ್ಮನ್ ಸೈನ್ಯ ಮಾಸ್ಕೋ ವಶಪಡಿಸಿಕೊಳ್ಳುವ ಬಗ್ಗೆ ಬಹಳ ಆತ್ಮವಿಶ್ವಾಸದಿಂದ ದ್ದ. ಆದ್ದರಿಂದ ಜರ್ಮನ್ ಸೈನ್ಯಕ್ಕೆ ಚಳಿಗಾಲದ ಉಡುಪುಗಳನ್ನು ಸರಿಯಾಗಿ ಒದಗಿಸಲಾಗಿರಲಿಲ್ಲ. ದ್ದರಿಂದ ಮಾಸ್ಕೋದಿಂದ ಕೆಲವು ಮೈಲುಗಳ ದೂರದಲ್ಲೇ ಸಿಕ್ಕಿಬಿದ್ದ ಜರ್ಮನ್ ಸೈನ್ಯ ಇದ್ದ ಬದ್ದ ಳಿಗಾಲದ ಉಡುಪುಗಳಲ್ಲೇ ಕೆಲಸ ಸಾಗಿಸಬೇಕಾಯಿತು.

ಮೊದಲ ಮಹಾಯುದ್ಧದಲ್ಲಿ ಇದೇ ರೀತಿ ಪ್ಯಾರಿಸ್‌ನಿಂದ ಕೆಲವು ಮೈಲಿಗಳ ದೂರದಲ್ಲಿದ್ದ ರ್ಮನ್ ಸೈನ್ಯವನ್ನು ಅಪಾರ ಕಷ್ಟನಷ್ಟಗಳನ್ನು ಅನುಭವಿಸಿ ಹಿಮ್ಮೆಟ್ಟಿಸಿ ಫ್ರೆಂಚ್ ಸೈನ್ಯ ಅತಿ ಬಲಿಷ್ಟ ೈನ್ಯ ಎಂಬ ಹೆಸರು ಪಡೆದಿತ್ತು. ಆದರೆ ಅದೇ ಸೈನ್ಯ 1940ರಲ್ಲಿ 6 ವಾರಗಳಲ್ಲಿ ಜರ್ಮನ್ ಸೈನ್ಯದೆ-ುರು ಶರಣಾಗತವಾಗಿತ್ತು. ಇದಕ್ಕೆ ಕಾರಣವೇನು? ಫ್ರೆಂಚ್ ಸೈನಿಕ ತುಕಡಿಗಳು ಸೋವಿಯೆತ್ ಸೈನಿ-ರಷ್ಟೇ ವೀರಾವೇಶದಿಂದ ದೇಶಭಕ್ತಿಯಿಂದ ಹೋರಾಡಿದರು. ಆದರೆ ಫ್ರೆಂಚ್ ದೇಶಭಕ್ತಿ, ಸೋವಿ-ಯೆತ್ ಜನರ ದೇಶಭಕ್ತಿಗಿಂತ ಶಿಥಿಲವಾಗಿತ್ತು ಎನ್ನುವುದನ್ನು ಚರಿತ್ರೆ ಸಮರ್ಥಿಸುತ್ತದೆ. ಸಮಾಜವಾದಿ ಪ್ರಜ್ಞೆಯಿಂದಾಗಿ ರಶ್ಯನ್, ಜಾರ್ಜಿಯನ್, ಅಜರ್‌ಬೈಜಾನ್, ಉಜ್‌ಬೆಕ್, ಕಿರ್ಗಿಝ್ ರೈತರಲ್ಲಿ, ರ್ಝೂಕ್, ಉಕ್ರೇನಿಯನ್, ರಶ್ಯನ್ ಕಾರ್ಮಿಕರಲ್ಲಿ ಈ ದೇಶ ತಮ್ಮದು ಎಂಬ ಭಾವನೆ ಬಂದಿತ್ತು. ಬಯಲುಗಳು ಗುಡ್ಡಗಾಡು, ಪರ್ವತ ಶ್ರೇಣಿಗಳು ಮಾತ್ರವಲ್ಲ, ಸಾಮೂಹಿಕ ಮತ್ತು ಸರ್ಕಾರಿ ಹೊಲ-ಗಳು, ಕಾರ್ಖಾನೆಗಳು ಗಣಿಗಳು ಎಲ್ಲಾ ಅವರಿಗೆ ಸೇರಿತ್ತು. ಆದ್ದರಿಂದ ಅದನ್ನು ಉಳಿಸಿಕೊಳ್ಳಲು ಅವರು ಹೋರಾಡಿದರು. ಪ್ರಾಣದ ಹಂಗು ತೊರೆದೂ ಅವನ್ನು ರಕ್ಷಿಸಲು ಹೋರಾಡಿದರು. ಇಲ್ಲೇ ವ್ಯತ್ಯಾಸವಿರುವುದು. ಸೋವಿಯೆತ್ ಜನ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಹೋರಾಡಿದರು.

ಸಮಾಜವಾದಿ ಪ್ರಜ್ಞೆಯಿಂದಾಗಿ ರಶ್ಯನ್, ಜಾರ್ಜಿಯನ್, ಅಜರ್‌ಬೈಜಾನ್, ಉಜ್‌ಬೆಕ್, ಕಿರ್ಗಿಝ್ ರೈತರಲ್ಲಿ, ಕಝೂಕ್, ಉಕ್ರೇನಿಯನ್, ರಶ್ಯನ್ ಕಾರ್ಮಿಕರಲ್ಲಿ ಈ ದೇಶ ತಮ್ಮದು ಎಂಬ ಭಾವನೆ ಬಂದಿತ್ತು. ಬಯಲುಗಳು ಗುಡ್ಡಗಾಡು, ಪರ್ವತ ಶ್ರೇಣಿಗಳು ಮಾತ್ರವಲ್ಲ, ಸಾಮೂಹಿಕ ಮತ್ತು ಸರ್ಕಾರಿ ಹೊಲಗಳು, ಕಾರ್ಖಾನೆಗಳು ಗಣಿಗಳು ಎಲ್ಲಾ ಅವರಿಗೆ ಸೇರಿತ್ತು. ಆದ್ದರಿಂದ

> **900 ದಿನಗಳಲ್ಲಿ 10 ಲಕ್ಷ ಸೋವಿಯತ್ ನಾಗರಿಕರು ಮಡಿದರು. ಈಗಲೂ 5ಲಕ್ಷ ಜನರ ಸ್ಮಾರಕ ಇದಕ್ಕೆ ಮೂಕ ಸಾಕ್ಷಿಯಾಗಿ ನಿಂತಿದೆ. ಸೋವಿಯೆತ್ ಒಕ್ಕೂಟ ಸಮಾಜವಾದವನ್ನು ರಕ್ಷಿಸಲು ಫ್ಯಾಸಿಸಂ ಸೋಲಿಸಲು ಮಾಡಬೇಕಾದ ಅಪಾರ ತ್ಯಾಗವನ್ನು ನಮಗೆ ನೆನಪಿಸುತ್ತದೆ**

ಆದರೆ ಯುಗೋಸ್ಲಾವಿಯನ್ನರು, ಚೆಕ್‌ಗಳು, ಬಲ್ಗೇರಿನಯನ್ನರು, ಫ್ರೆಂಚರು, ಡಚ್ಚರು- ಆ ದೇಶಗಳ ಬೂರ್ಜ್ವಾಗಳ ಜಮೀನುದಾರರ ಹಿತಾಸಕ್ತಿ ಕಾಪಾಡಲು ಹೋರಾಡಬೇಕಾಗಿತ್ತು. ಯಾಕೆಂದರೆ ಆ ದೇಶದ ಸಂಪತ್ತು ಅವರದಾಗಿರಲಿಲ್ಲ. ಅವರೂ ದೇಶಭಕ್ತಿಯಿಂದಲೇ ಹೋರಾಡಿದ್ದು. ಆದರೆ ಅವರ ದೇಶಭಕ್ತಿ ಅವರ ಹಿತಾಸಕ್ತಿಗಳ ಮೇಲೆ ನಿಂತ ದೃಢಭಾವವಾಗಿರಲಿಲ್ಲ. ಕೇವಲ ಭಾವುಕತೆಯಾಗಿತ್ತು.

ಸಮಾಜವಾದ ಒಬ್ಬ ಹೊಸ ಮನುಷ್ಯನನ್ನು ಸೃಷ್ಟಿಸಿತ್ತು. ಅವನ ಹಿತಾಸಕ್ತಿಗಳು ಈ ಹೊಸ ಸಮಾಜವ್ಯವಸ್ಥೆ ಜತೆ ಎಷ್ಟರಮಟ್ಟಿಗೆ ತಳಕು ಹಾಕಿಕೊಂಡಿತ್ತೆಂದರೆ, ಆತ ಆ ವ್ಯವಸ್ಥೆಯನ್ನು ಉಳಿಸಿ-ಕೊಳ್ಳಲು ತನ್ನ ಪ್ರಾಣ ತ್ಯಾಗ ಮಾಡಲೂ ಸಿದ್ಧನಿದ್ದ. ಇದನ್ನು ಬೂರ್ಜ್ವಾ ಜಗತ್ತು ಗಮನಿಸಿರಲಿಲ್ಲ. ಹಿಟ್ಲರ್‌ನ ಜನರಲ್‌ಗಳೂ ಅರ್ಥಮಾಡಿಕೊಂಡಿರಲಿಲ್ಲ. ಇಂದು ಸಮಾಜವಾದದ ಪತನವಾಗಿದೆ ಎಂದು ಹಿರಿಹಿರಿ ಹಿಗ್ಗುವವರಿಗೂ ಇದು ಅರ್ಥವಾಗಿಲ್ಲ.

ಲೆನಿನ್‌ಗ್ರಾದ್

ಲೆನಿನ್‌ಗ್ರಾದ್‌ನ ರಕ್ಷಣೆಗೆ ಸೋವಿಯೆತ್ ಜನರ ತ್ಯಾಗದ ಉದಾಹರಣೆಗಳನ್ನು ಹೇಳಿದರೆ ಇದು ಸ್ಪಷ್ಟವಾಗುತ್ತದೆ. ಸೋವಿಯೆತ್ ಒಕ್ಕೂಟದ ಮೇಲೆ ಹಿಟ್ಲರ್‌ನ ಆಕ್ರಮಣದ ಮೊದಲ ತಿಂಗಳುಗಳಲ್ಲಿ ಲೆನಿನ್‌ಗ್ರಾಡ್ ಸುತ್ತವರಿಯಲ್ಪಟ್ಟಿತ್ತು. ಆದರೆ ಅದು ಶರಣಾಗತವಾಗಲಿಲ್ಲ, ಪರಾ-ಧೀನವಾಗಲಿಲ್ಲ. ಜರ್ಮನ್ ಸೈನ್ಯ ಆ ನಗರವನ್ನು 900ದಿನಗಳವರೆಗೆ ಸುತ್ತುವರಿದಿತ್ತು. ಉತ್ತರ ಧ್ರುವೀಯ ಪ್ರದೇಶವಾದ್ದರಿಂದ ಹೆಪ್ಪುಗಟ್ಟಿಸುವ ಚಳಿ. ವಿದ್ಯುತ್‌ಜನಕ ಸ್ಟೇಶನ್‌ಗಳನ್ನು ಬಾಂಬ್ ದಾಳಿಯಿಂದ ನಾಶಮಾಡಲಾಗಿತ್ತು. ಸ್ವಲ್ಪ ಶಾಖ ತೆಗೆದುಕೊಳ್ಳಲು ಕಲ್ಲಿದ್ದಲಾಗಲಿ, ಮರವಾಗಲಿ ಇರಲಿಲ್ಲ. ನೀರು ಪೈಪುಗಳಲ್ಲಿ ಹೆಪ್ಪುಗಟ್ಟಿ ಪೈಪುಗಳು ಒಡೆಯುವ ಪರಿಸ್ಥಿತಿ. ಆಹಾರ ಸಹ ಲೆನಿನ್-ಗ್ರಾಡ್‌ಗೆ ಹೊರಗಿನಿಂದ ಬರುವ ಸಾಧ್ಯತೆ ಇರಲಿಲ್ಲ. ನಗರವನ್ನು ಪೂರ್ಣವಾಗಿ ಸುತ್ತುವರೆದದ್ದರಿಂದ ತುರ್ತು ಆಹಾರ ಧಾನ್ಯದ ಸರಬರಾಜು ಲೆನಿನ್‌ಗ್ರಾಡ್‌ಗ್ ಸಿಗುವಂತಿರಲಿಲ್ಲ. 900 ದಿನಗಳಲ್ಲಿ 10 ಲಕ್ಷ ಸೋವಿಯತ್ ನಾಗರಿಕರು ಮಡಿದರು. ಈಗಲೂ 5ಲಕ್ಷ ಜನರ ಸ್ಮಾರಕ ಇದಕ್ಕೆ ಮೂಕ ಸಾಕ್ಷಿ-ಯಾಗಿ ನಿಂತಿದೆ. ಸೋವಿಯೆತ್ ಒಕ್ಕೂಟ ಸಮಾಜವಾದವನ್ನು ರಕ್ಷಿಸಲು ಫ್ಯಾಸಿಸಂ ಸೋಲಿಸಲು ಮಾಡಬೇಕಾದ ಅಪಾರ ತ್ಯಾಗವನ್ನು ನಮಗೆ ನೆನಪಿಸುತ್ತದೆ. ಇಂತಹ ದೃಢ ನಿರ್ಧಾರ, ಧೈರ್ಯ, ಆತ್ಮವಿಶ್ವಾಸ, ದೇಶಭಕ್ತಿ, ಸ್ವಾತಂತ್ರ್ಯ ಮತ್ತು ಸಮಾಜವಾದಗಳ ಮೇಲೆ ದೃಢ ನಂಬಿಕೆ ಇರುವ ಒಂದೇ ಒಂದು ಬೂರ್ಜ್ವಾ ದೇಶವನ್ನು ಈ ಸಮಾಜವಾದದ ವಿರೋಧಿಗಳು ತೋರಿಸಲಿ ! ಜಗತ್ತನ್ನು ಫ್ಯಾಸಿಸಂ ಪಡೆಯಿಂದ ರಕ್ಷಿಸಲು ಇನ್ನಾವ ದೇಶ ಇಂತಹ ಬಲಿದಾನ ಮಾಡಬೇಕಾಗಿತ್ತು? ಎರಡನೇ ಮಹಾಯುದ್ಧದಲ್ಲಿ ಮಡಿದ 5ಕೋಟಿ ಜನರಲ್ಲಿ 2ಕೋಟಿ ಜನರು ಸೋವಿಯೆತ್ ಒಕ್ಕೂಟದವರು. ಅಂದರೆ ಶೇಕಡಾ.40ರಷ್ಟು ಜನ ಸೋವಿಯೆತ್ ನಾಗರಿಕರು.

ಸ್ಟಾಲಿನ್ ಗ್ರಾಡ್

ಸೆಪ್ಟೆಂಬರ್ 1941ರ ಒಳಗೆ ಸ್ಟಾಲಿನ್‌ಗ್ರಾಡ್‌ನ ಹೊರಪ್ರದೇಶಗಳು ಜರ್ಮನ್ ವಶವಾ-

ಗಿದ್ದವು. ಸ್ಟಾಲಿನ್‌ಗ್ರಾಡ್ ವಶಪಡಿಸಿಕೊಳ್ಳಲು ಜರ್ಮನರು ಮಾಡಿದ ಪ್ರಯತ್ನ, ಅದಕ್ಕೆ ಸೋವಿಯೆತ್ ಪ್ರತಿರೋಧ ಈ ಸಂಘರ್ಷವನ್ನು ಚಾರಿತ್ರಿಕವಾಗಿಸಿದೆ. ಸ್ಟಾಲಿನ್‌ಗ್ರಾಡ್‌ನಲ್ಲಿ ಫ್ಯಾಸಿಸಂನ ಗೋರಿ ತೋಡಲಾಯಿತು ಎಂದು ಎಲ್ಲರೂ ಒಪ್ಪಿಕೊಳ್ಳುವ ಸತ್ಯ. ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಜರ್ಮನ್ ಸೈನ್ಯ ಸ್ಟಾಲಿನ್‌ಗ್ರಾಡ್‌ನ ಭದ್ರ ಕೋಟೆ ಮುರಿಯಲು ಭಾರಿ ಪ್ರಯತ್ನಗಳನ್ನು ಮಾಡಿತು. ಆದರೆ ಪ್ರತಿಯೊಂದು ಮನೆ, ಫ್ಯಾಕ್ಟರಿ ರಣರಂಗವಾಯಿತು. ಫ್ಯಾಸಿಸಂ ಒಂದು ಕಡೆ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಜನತೆ ಇನ್ನೊಂದು ಕಡೆ ಹೋರಾಡುತ್ತಿದ್ದಾಗ ಸೋವಿಯೆತ್ ಮಿಲಿಟರಿ ನಾಯಕರು ಭಾರಿ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಸೈನ್ಯವನ್ನು ಸನ್ನದ್ಧಗೊಳಿಸುತ್ತಿದ್ದರು. ನವಂಬರ್‌ನಲ್ಲಿ ಪ್ರತಿಧಾಳಿ ಆರಂಭವಾಯಿತು. ಸ್ಟಾಲಿನ್‌ಗ್ರಾಡ್ ಸುತ್ತುವರೆದಿದ್ದ ಜರ್ಮನ್ 6ನೇ ತುಕಡಿಯನ್ನು ಎರಡು ಭಾಗವಾಗುವಂತೆ ಕೆಂಪು ಸೈನ್ಯ ಸುತ್ತುವರೆಯಿತು. ಆಗಲೇ ಜರ್ಮನ್ ಜನರಲ್ ಪಾಲೊಸ್ ಓಂಜರಿಯಬೇಕೆಂದಿದ್ದ. ಆದರೆ ಹಿಟ್ಲರ್ ಅನುಮತಿ ನೀಡಲಿಲ್ಲ. ಆತನಿಗೆ ಶರಣಾಗತಿಯ ಕೆಲವು ಸಮಯ ಮೊದಲು ಫೀಲ್ಡ್ ಮಾರ್ಶಲ್ ಹುದ್ದೆಗೆ ಬಡ್ತಿ ನೀಡಲಾಯಿತು. ಈ ಚಾರಿತ್ರಿಕ ಯುದ್ಧದಲ್ಲಿ ಜರ್ಮನ್ ಸೈನ್ಯದ 3,30,000 ಸೈನಿಕರಲ್ಲಿ 91 ಸಾವಿರ ಸೈನಿಕರನ್ನು ಕೆಂಪು ಸೇನೆ ಜೀವಂತ ಸೆರೆಹಿಡಿಯಿತು. ಉಳಿದ 2,40,000 ಸೈನಿಕರು ಮಡಿದರು.

'ಮತ್ತೆ ಬರುತ್ತೇವೆ'

ಆ ನಂತರ ಸೋವಿಯೆತ್ ಕೆಂಪು ಸೇನೆ ವಿಜಯ ಪತಾಕೆ ಹಾರಿಸುತ್ತಾ ಹೋಯಿತು. ಲೆನಿನ್‌ಗ್ರಾಡ್‌ನಿಂದ ಸ್ಟಾಲಿನ್‌ಗ್ರಾಡ್‌ವರೆಗೆ ಮುನ್ನಡೆಯುತ್ತಾ 1945 ಏಪ್ರಿಲ್‌ನಲ್ಲಿ ಬರ್ಲಿನ್‌ನ ರೈಖ್‌ಸ್ಟಾಗ್‌ನಲ್ಲಿ ಕೆಂಬಾವುಟ ಹಾರಿಸುವವರೆಗೂ ಕೆಂಪು ಸೈನ್ಯ ಹಿಂತಿರುಗಿ ನೋಡಲಿಲ್ಲ.

ಈ ರೀತಿ ಕೇವಲ 28ವರ್ಷದ ಪ್ರಥಮ ಸಮಾಜವಾದಿ ಪ್ರಭುತ್ವ ಯುರೋಪ್ ಮತ್ತು ಜಗತ್ತನ್ನು ಫ್ಯಾಸಿಸಂನಿಂದ ರಕ್ಷಿಸಿತು. ಅದಕ್ಕಾಗಿ 2 ಕೋಟಿ ಜನರ ಬಲಿದಾನ ಮಾಡಿತು. ಮೊದಲ ಎರಡು ಪಂಚವಾರ್ಷಿಕ ಯೋಜನೆಗಳಿಂದ ಸಾಧಿಸಿದ ಬೆಳವಣಿಗೆ ಮಣ್ಣುಪಾಲಾಗಿತ್ತು. ಇದು ನಿಜವಾದ ಅರ್ಥದಲ್ಲಿ ಜೀವನ್ಮರಣ ಹೋರಾಟವಾಗಿತ್ತು. ಕೊನೆಗೆ ಜೀವನ (ಸಮಾಜವಾದ)ಗೆದ್ದಿತು, ಮರಣ (ಫ್ಯಾಸಿಸಂ) ಸೋತಿತು.

ಸೋವಿಯತ್ ಸಮಾಜವಾದದ ವಿಜಯದಿಂದಾಗಿ ಯುರೋಪ್ ಮತ್ತು ಇಡೀ ಜಗತ್ತನ್ನು ಆವರಿಸಿದ್ದ ಫ್ಯಾಸಿಸಂ ಕಗ್ಗತ್ತಲು ಹರಿದು ಬೆಳಕು ಮೂಡುವಂತಾಯಿತು. ಈ ಹೊಂಬೆಳಕು ಪ್ರಥಮ ಸಮಾಜವಾದಿ ಪ್ರಭುತ್ವದ ಕಾಣಿಕೆ ಎಂದು ಯಾರೂ ಮರೆಯದಿರಲಿ. ಆದ್ದರಿಂದಲೇ ಭವಿಷ್ಯತ್ತು ಇರುವುದು ಸಮಾಜವಾದಕ್ಕೆ. ಈ ಬಗ್ಗೆ ನಾವು ಕಮ್ಯುನಿಸ್ಟರಾಗಿ ಮತ್ತು ಮನುಜರಾಗಿ ದೃಢ ವಿಶ್ವಾಸ ಹೊಂದಿದ್ದೇವೆ. ಸಮಾಜವಾದಿ ಸೋವಿಯೆತ್ ಒಕ್ಕೂಟ ಫಿನಿಕ್ಸ್ ಹಕ್ಕಿಯಂತೆ ತನ್ನದೇ ಬೂದಿಯಿಂದ ಪುನಃ ಮೇಲೇಳುತ್ತದೆ.-- ಪುನಃಶ್ಚೇತನಗೊಂಡು, ಪುನರುಜ್ಜೀವನಗೊಂಡು, ಸುಧಾರಣೆಗೊಂಡು ತಮ್ಮ ಹೆಮ್ಮೆಯ ಪರಂಪರೆಯ ಉಜ್ವಲ ಪ್ರಭೆ ಬೀರುತ್ತಾ.

ಅನು : ಶರತ್ಚಂದ್ರ

ಕೇವಲ 28ವರ್ಷದ ಪ್ರಥಮ ಸಮಾಜವಾದಿ ಪ್ರಭುತ್ವ ಯುರೋಪ್ ಮತ್ತು ಜಗತ್ತನ್ನು ಫ್ಯಾಸಿಸಂನಿಂದ ರಕ್ಷಿಸಿತು. ಇದು ನಿಜವಾದ ಅರ್ಥದಲ್ಲಿ ಜೀವನ್ಮರಣ ಹೋರಾಟವಾಗಿತ್ತು. ಕೊನೆಗೆ ಜೀವನ (ಸಮಾಜವಾದ)ಗೆದ್ದಿತು, ಮರಣ (ಫ್ಯಾಸಿಸಂ) ಸೋತಿತು.




ಸೋವಿಯತ್ ವಿಘಟನೆಯ ನಂತರ ನಡೆದಿರುವ ಹಲವಾರು ಮಹಾ ಪ್ರದರ್ಶನಗಳಲ್ಲಿ ಒಂದು

ಅಂತಿಮ ಜಯ ಸಮಾಜವಾದಕ್ಕೇ..

- ಇ.ಎಂ.ಎಸ್. ನಂಬೂದರಿಪ್ಪಾಡ್

ಹಲವಾರು ಕಾರಣಗಳು ಹಾಗೂ ದೌರ್ಬಲ್ಯಗಳಿಂದಾಗಿ ಸಮಾಜವಾದಕ್ಕೆ ಹಿನ್ನಡೆ ಉಂಟಾಗಿರುವುದೇನೋ ಹೌದು. ಆದರೆ, ಅದು ಇಡಿಯಾಗಿ ಸಮಾಜವಾದಿ ಸಿದ್ಧಾಂತದ ವೈಫಲ್ಯವಲ್ಲ. ಮತ್ತು ಈ ಹಿನ್ನಡೆಯಿಂದ ಜಾಗತಿಕ ಬಂಡವಾಳಶಾಹಿಗೆ ಹೆಚ್ಚೇನೂ ಲಾಭ ಆಗಿಲ್ಲ. ಸಂಪತ್ತಿನ ಒಡೆತನಕ್ಕಾಗಿ ಶ್ರೀಮಂತ ದೇಶಗಳ ಕಚ್ಚಾಟ ಮುಂದುವರಿದೇ ಇದೆ. ಹಾದಿ ಸಂಕಷ್ಟಮಯವಾದರೂ ಮತ್ತು ವಿಳಂಬವಾದರೂ ಅಂತಿಮವಾಗಿ ಜಯ ದೊರೆಯುವುದು ಸಮಾಜವಾದಕ್ಕೇ ಎಂದು ಇಲ್ಲಿ ವಿವರಿಸಿದ್ದಾರೆ ಸಿಪಿಐ(ಎಂ)ನ ಮಾಜಿ ಪ್ರಧಾನ ಕಾರ್ಯದರ್ಶಿಯವರು.



ರಷ್ಯಾದಲ್ಲಿ ನಡೆದ ಅಕ್ಟೋಬರ್ ಕ್ರಾಂತಿ ಮಾನವ ಇತಿಹಾಸದಲ್ಲಿ ಒಂದು ತಿರುವುಬಿಂದು. ಬಂಡವಾಳಶಾಹಿಯಿಂದ ಸಮತಾವಾದ(ಕಮ್ಯುನಿಸಂ)ದೆಡೆಗೆ ಜಗತ್ತು ಪರಿವರ್ತನೆಗೊಳ್ಳುವುದನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ಮುಂಗಂಡಿದ್ದರು. ಈ ಕ್ರಾಂತಿ ಆ ಪರಿವರ್ತನೆಯ ಆರಂಭವನ್ನು ತೋರಿತು.

ಆ ಯುಗಾಂತರಕಾರಿ ಕ್ರಾಂತಿಯ ರೂವಾರಿ ಲೆನಿನ್ ರಷ್ಯಾ ಕ್ರಾಂತಿಯ ಬೆನ್ನಲ್ಲೇ ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕ ವರ್ಗದ ಕ್ರಾಂತಿ ನಡೆಯುವುದೆಂದು ನಿರೀಕ್ಷಿಸಿದ್ದರು. ಆದರೆ ಆ ಭವಿಷ್ಯ ನಿಜವಾಗಲಿಲ್ಲ. ಬದಲಿಗೆ, ರಷ್ಯಾ ಕ್ರಾಂತಿಯ 75 ವರ್ಷಗಳ ನಂತರವೂ ಮುಂದುವರಿದ ಬಂಡವಾಳಶಾಹಿ ಜಗತ್ತು ಯಾವುದೇ ಬದಲಾವಣೆಯಿಲ್ಲದೆ ಉಳಿಯಿತು. ಮಾತ್ರವಲ್ಲದೆ ಸ್ವತಃ ಲೆನಿನ್‌ರ ನಾಡಿನಲ್ಲೇ ಸಮಾಜವಾದಕ್ಕೆ ಹಿನ್ನಡೆ ಉಂಟಾಗಿದೆ. ಹಾಗೆಂದಾಕ್ಷಣ ಲೆನಿನ್ ಭವಿಷ್ಯದ ತಿರುಳೇ ತಪ್ಪೆಂದು ಅರ್ಥವಲ್ಲ. ಸೋವಿಯತ್ ಒಕ್ಕೂಟ ಸಹಿತ ಪೂರ್ವ ಯುರೋಪ್‌ನಲ್ಲಿನ ಇತ್ತೀಚಿನ ಘಟನೆಗಳು 1917ರ ನವಂಬರ್ 7ರಂದು ಆರಂಭವಾದ ಪ್ರಕ್ರಿಯೆಗೆ ಸ್ವಲ್ಪ ತಡೆಗಳು ಅಷ್ಟೇ.

ಆಗಿನ ರಷ್ಯಾ ಮತ್ತು ಜಾಗತಿಕ ಪರಿಸ್ಥಿತಿಯಲ್ಲಿನ ಎರಡು ಮುಖ್ಯ ಲಕ್ಷಣಗಳು ರಷ್ಯಾದಲ್ಲಿ ಕಾರ್ಮಿಕ ವರ್ಗದ ಕ್ರಾಂತಿ ಸ್ಫೋಟಗೊಳ್ಳಲು ಕಾರಣ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮೊದನೆಯದಾಗಿ, ಇತರ ಮುಂದುವರಿದ ಬಂಡವಾಳಶಾಹಿಗಳಿಗೆ ಹೋಲಿಸಿದರೆ ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದುಳಿದಿದ್ದರೂ ರಶ್ಯಾದಲ್ಲಿ ಅನುಕೂಲಕರ ಪರಿಸ್ಥಿತಿಯನ್ನು ಬಳಸಿಕೊಳ್ಳಲು ಸಮರ್ಥವಾದ ಸಂಘಟಿತ ಕಾರ್ಮಿಕ ವರ್ಗ ಮತ್ತು ಮುಂದುವರಿದ ವರ್ಗ ಪ್ರಜ್ಞೆ ಗಮನಾರ್ಹ ಪ್ರಮಾಣದಲ್ಲಿತ್ತು.

ಎರಡನೆಯದಾಗಿ, ಬಂಡವಾಳವಾದದ ಅಭಿವೃದ್ಧಿ ಯಾವ ಹಂತವನ್ನು ತಲುಪಿತ್ತೆಂದರೆ ಯುರೋಪಿಯನ್ ಬಂಡವಾಳಶಾಹಿ ಶಕ್ತಿಯ ಎರಡು ಗುಂಪುಗಳು ವಸಾಹತುಗಳ ಮರು ಹಂಚಿಕೆಗಾಗಿ ಸಶಸ್ತ್ರ ಸಂಘರ್ಷದಲ್ಲಿ ತೊಡಗಿದ್ದವು ಮಾತ್ರವೇ ಅಲ್ಲ, ಬಂಡವಾಳಶಾಹಿ ವ್ಯವಸ್ಥೆ ಮೇಲೆ ಆದ ಅದರ ಪರಿಣಾಮ ತೀವ್ರವಾಗಿತ್ತು. ರಶ್ಯಾದಲ್ಲಿನ ಆಳುವ ವರ್ಗ ಬಂಡವಾಳಶಾಹಿ ಜಗತ್ತಿನಲ್ಲೇ ಅತ್ಯಂತ ದುರ್ಬಲ ಆಳುವ ವರ್ಗವಾಯಿತು.

ಇಂಥ ಸನ್ನಿವೇಶಗಳ ಈ ಹಂತವನ್ನು ಅಧಿಕಾರ ಗಳಿಸಿ ಸಮಾಜವಾದಿ ವ್ಯವಸ್ಥೆಯ ನಿರ್ಮಾಣ ಆರಂಭಿಸಲು ಬಳಸಬೇಕೆ ಎಂಬ ಪ್ರಶ್ನೆ ಲೆನಿನ್ ಮತ್ತು ಅವರ ಪಕ್ಷದ ಮುಂದೆ ಎದುರಾಯಿತು. ಕೌಟ್‌ಸ್ಕಿ ಮತ್ತು ಪ್ಲೆಖನೋವ್‌ರಂಥ ಹಿರಿಯ ಮಾರ್ಕ್ಸ್‌ವಾದಿಗಳ 'ವಿವೇಕಯುತ ಸಲಹೆ'ಯನ್ನು ಧಿಕ್ಕರಿಸಿದ ಲೆನಿನ್ ಪ್ರಮಾಣಾತ್ಮಕವಾಗಿ ಹಿಂದುಳಿದ ದೇಶದಲ್ಲಿ ಸಮಾಜವಾದವನ್ನು ಕಟ್ಟುವ ಕೆಲಸಕ್ಕೆ ಕೈ ಹಾಕಿದರು. ಜಗತ್ತು ಬಂಡವಾಳಶಾಹಿ ಮತ್ತು ಸಮಾಜವಾದಿ ವಿಬಣ ಎಂದು ವಿಭಜಿತವಾಗಿದೆ ಎಂದು ಹೇಳಿದ ಲೆನಿನ್, ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆಯ ನಿರ್ಮಾಣದಿಂದ ಬಂಡವಾಳಶಾಹಿ ದೇಶಗಳ ಮೇಲೆ ಪ್ರಭಾವ ಬೀರುತ್ತದೆ ಎಂದು ವಾದಿಸಿದರು.

"ಒಂದು ಹೊಸ ನಾಗರಿಕತೆ" ಎಂದು ಸಿಡ್ನಿ ಮತ್ತು ವೆಬ್‌ರಂಥ ಸಮಾಜ ವಿಜ್ಞಾನಿಗಳು ಅದನ್ನು ವರ್ಣಿಸಿದರು. ಪ್ರತ್ಯೇಕವಾಗಿ ಒಂದು ದೇಶದಲ್ಲಿ, ಅದರಲ್ಲೂ ಹಿಂದುಳಿದ ಒಂದು ದೇಶದಲ್ಲಿ ಸಮಾಜವಾದದ ನಿರ್ಮಾಣವನ್ನು ಲೆನಿನ್ ಮತ್ತು ಅವರ ಪಕ್ಷ ಆರಂಭಿಸಿದ್ದು ಸಂಪೂರ್ಣ ಸರಿ ಎಂಬುದನ್ನು ಅದು ತೋರಿಸುತ್ತದೆ.

ಏಕೆ ಆಶಾವಾದ ?

ಅಂದಿನಿಂದ ಏಳು ದಶಕಕ್ಕೂ ಹೆಚ್ಚು ಕಾಲ ಸಂದಿದೆ. ನಿರುದ್ಯೋಗ, ಬೆಲೆಗಳ ಅಸ್ಥಿರತೆ ಇಲ್ಲದ ಹೊಸ ಸಮಾಜವೊಂದು ಅಸ್ತಿತ್ವಕ್ಕೆ ಬಂದಿದೆ. ಅಲ್ಲಿ ಎಲ್ಲರಿಗೂ ಶಿಕ್ಷಣ, ಆರೋಗ್ಯ, ವಸತಿ ಮೊದ ಲಾದ ಸಾಮಾಜಿಕ ಸೇವೆಗಳಿಗೆ ವಿಪುಲ ಅವಕಾಶಗಳಿವೆ. "ಒಂದು ಹೊಸ ನಾಗರಿಕತೆ" ಎಂದು ಸಿಡ ಮತ್ತು ವೆಬ್‌ರಂಥ ಸಮಾಜ ವಿಜ್ಞಾನಿಗಳು ಅದನ್ನು ವರ್ಣಿಸಿದರು. ಪ್ರತ್ಯೇಕವಾಗಿ ಒಂದು ದೇಶ ದಲ್ಲಿ, ಅದರಲ್ಲೂ ಹಿಂದುಳಿದ ಒಂದು ದೇಶದಲ್ಲಿ ಸಮಾಜವಾದದ ನಿರ್ಮಾಣವನ್ನು ಲೆನಿನ್ ಮತ್ತು ಅವರ ಪಕ್ಷ ಆರಂಭಿಸಿದ್ದು ಸಂಪೂರ್ಣ ಸರಿ ಎಂಬುದನ್ನು ಅದು ತೋರಿಸುತ್ತದೆ.

ಅದು ಬಹುಕಾಲ ಉಳಿಯಲಿಲ್ಲ ಹಾಗೂ 1991ರಲ್ಲಿ ಕುಸಿಯಿತು ಎಂಬುದೇನೋ ಸತ್ಯ. ಜಗ- ತ್ತಿನಾದ್ಯಂತ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ಅದರ ಕಾರಣದ ಬಗ್ಗೆ ವ್ಯಾಪಕವಾಗಿ ಚರ್ಚೆ ನಡೆಸು- ತ್ತಿದ್ದಾರೆ. ಸೋವಿಯತ್ ಒಕ್ಕೂಟದಲ್ಲಿ ಏಳು ದಶಕಗಳ ಕಾಲ ಅಸ್ತಿತ್ವದಲ್ಲಿದ್ದ ಸಮಾಜವಾದದ ಅನು- ಭವಗಳಿಂದ ಸಿಪಿಐ(ಎಂ) ಕೆಲವು ಅಭಿಪ್ರಾಯಗಳಿಗೆ ಬಂದಿದೆ. ಅಲ್ಲಿ ಸಂಭವಿಸಿದ ವಿರೂಪಗಳನ್ನು ತೊಡೆದುಹಾಕಿದರೆ ಸಮಾಜವಾದದ ಪುನರುಜ್ಜೀವನ ಸಾಧ್ಯ ಎಂದು ಪಕ್ಷಕ್ಕೆ ದೃಢವಾಗಿ ಮನವರಿಕೆ- ಯಾಗಿದೆ. ಭವಿಷ್ಯದ ಬಗ್ಗೆ ನಾವು ಇಷ್ಟು ಆಶಾವಾದಿಗಳಾಗಿರುವುದು ಏಕೆ? ಯಾಕೆಂದರೆ, ಯುರೋ- ಪ್‌ನಲ್ಲಿ ಸಮಾಜವಾದ ಕುಸಿದರೂ ಆ ಖಂಡದಲ್ಲಿ ಬಂಡವಾಳಶಾಹಿ ಕ್ರೋಢೀಕರಣಗೊಂಡಿಲ್ಲ ಅಲ್ಲಿನ ಹಿಂದಿನ ಸಮಾಜವಾದಿ ದೇಶಗಳು ಮತ್ತು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶ- ಗಳು ಪರಸ್ಪರ ಕಚ್ಚಾಡುತ್ತಿವೆ. ಈ ಸ್ಥಿತಿ 1917ರ ನವಂಬರ್ 7ರ ಕ್ರಾಂತಿ ಸಂದರ್ಭದಲ್ಲಿನ ಸ್ಥಿತಿಯನ್ನು ಹೋಲುತ್ತದೆ.

ಬಂಡವಾಳಶಾಹಿ ಯುರೋಪ್‌ನ ಸಂಯುಕ್ತ ಸಂಸ್ಥಾನಗಳ ರಚನೆಯ ಸಾಧ್ಯತೆಗಳ ಬಗ್ಗೆ ಕ್ರಾಂತಿ ಪೂರ್ವದ ತಮ್ಮ ಮಹತ್ವದ ಲೇಖನವೊಂದರಲ್ಲಿ ಲೆನಿನ್ ಏನು ಬರೆದಿದ್ದರು ಎನ್ನುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ವ್ಯಾಪಕ ಅಂಕಿ- ಸಂಖ್ಯೆಗಳ ಆಧಾರದ ಮೇಲೆ ಅವರು ಬಂಡವಾಳಶಾಹಿ- ಗಳ ವಿವಿಧ ಗುಂಪುಗಳ ನಡುವಿನ ತೀಕ್ಷ್ಣ ಸ್ಪರ್ಧೆಯ ಮೇಲೆ ಬಂಡವಾಳವಾದ ಅವಲಂಬಿತವಾಗಿದ್ದು, ಬಂಡವಾಳಶಾಹಿ ಅಭಿವೃದ್ಧಿಯ ಅಂದಿನ ಘಟ್ಟ ನಿಶ್ಚಯವಾಗಿಯೂ ಬಂಡವಾಳಶಾಹಿ ಶಕ್ತಿಗಳೊ- ಳಗೆ ರಾಷ್ಟ್ರೀಯ ಸಂಘರ್ಷಗಳು ಮತ್ತು ಯುದ್ಧಗಳನ್ನು ಉಂಟು ಮಾಡುತ್ತದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದರು.

ಮದುವೆಯೇ ಮುಗಿದಿಲ್ಲ; ವಿಚ್ಛೇದನದ ಮಾತು!

ಮೊದಲ ಮಹಾಯುದ್ಧ ಹೇಗೆ ನಡೆಯಿತು ಮತ್ತು ಜಗತ್ತಿನಲ್ಲಿ ಮೊದಲ ಸಮಾಜವಾದಿ ದೇಶ ಅಸ್ತಿತ್ವಕ್ಕೆ ಬಂದ ರೀತಿಯನ್ನು ಗಮನಿಸಿದರೆ ಈ ಅಂದಾಜು ಎಷ್ಟು ಸರಿಯಾಗಿತ್ತು ಎಂಬುದು ಗೊತ್ತಾ- ಗುತ್ತದೆ. ಅದು ಈಗಲೂ ಎಷ್ಟು ಸರಿ ಎಂಬುದನ್ನು ಯುರೋಪ್‌ನಲ್ಲಿ ಈಗ ನಡೆಯುತ್ತಿರುವ ಘಟ- ನಾವಳಿಗಳಿಂದ ತಿಳಿಯಬಹುದು. ಯುರೋಪ್ ಸಂಯುಕ್ತ ಸಂಸ್ಥಾನ ರಚನೆಯ ಹೊಸ ಸ್ವರೂಪದ ಪ್ರಕ್ರಿಯೆ ಈಗ ಛಿದ್ರವಾಗಿದೆ. ಅಮೇರಿಕಾದ ಖ್ಯಾತ ಪತ್ರಿಕೆ 'ನ್ಯೂಸ್ ವೀಕ್' ತನ್ನ 1992 ಸೆಪ್ಟೆಂಬರ್ 28ರ ಸಂಚಿಕೆಯಲ್ಲಿ ಹೀಗೆ ಬರೆದಿದೆ.

"ಇನ್ನೂ ಮದುವೆಯ ಕಾರ್ಯವೇ ಪೂರ್ಣಗೊಂಡಿಲ್ಲ, ಅಷ್ಟರಲ್ಲಿ ಹಠಾತ್ತನೆ ವಿವಾಹ ವಿಚ್ಛೇ- ದನದ ಬಗ್ಗೆ ಅವರು ಮಾತನಾಡುತ್ತಿದ್ದಾರೆ. ಪೂರ್ಣ ಪ್ರಮಾಣದ ಆರ್ಥಿಕ ಮತ್ತು ರಾಜಕೀಯ ಏಕತೆಗಾಗಿ ಪಶ್ಚಿಮ ಯುರೋಪ್‌ನ ದೇಶಗಳು ಶತಮಾನಗಳಷ್ಟು ಹಳೆಯದಾದ ತಮ್ಮ ಕಲಹ-

ಗಳನ್ನು ಮರೆಯುತ್ತವೆ ಎಂಬ ಭಾವನೆ ನಿನ್ನೆ ಮೊನ್ನೆಯವರೆಗೆ ಇತ್ತು. ಬಹುಪ್ರೋಕ್ಷಿತ '1992ರ ವೇಳೆಗೆ ಏಕ ಮಾರುಕಟ್ಟೆ' ಪರಿಕಲ್ಪನೆ 2000ನೇ ಇಸವಿ ವೇಳೆಗೆ ದಯೆ ದಾಕ್ಷಿಣ್ಯವಿಲ್ಲದೆ ಸಾಮಾನ್ಯ ಯುರೋಪಿಯನ್ ಕರೆನ್ಸಿಗೆ ಕೊಂಡೊಯ್ಯುವ ಉದ್ದೇಶದ್ದಾಗಿದೆ. ಆದರೆ ಕಳೆದ ವಾರ ಈ ಯೋಜನೆಗಳು ಇದ್ದಕ್ಕಿದ್ದಂತೆ ಕುಸಿದು ಬಿದ್ದವು. ಬಡ್ಡಿದರಗಳು ಕುಸಿದವು, ಕರೆನ್ಸಿಗಳೂ ಕುಸಿದವು. ಬಿಕ್ಕಟ್ಟು ಎಷ್ಟು ಅರಾಜಕತೆಯಿಂದ ಕೂಡಿತ್ತು ಹಾಗೂ ದೂರಗಾಮಿ ಪರಿಣಾಮ ಬೀರುವಂತಿತ್ತು ಎಂದರೆ ಕನಿಷ್ಟ ಒಂದು ವಾರ ಕಾಲವಾದರೂ ಯುರೋಪ್‌ನ ಪತ್ರಿಕೆಗಳ ಮುಖಪುಟದಿಂದ ಬ್ರಿಟನ್ ರಾಜಮನೆತನದ ಸುದ್ದಿಗಳು ಮರೆಯಾಗಿದ್ದವು. ಮತ್ತು ಲಂಡನ್‌ನಿಂದ ಲಿಸ್ಬನ್‌ವರೆಗೆ ಮಾರುಕಟ್ಟೆಗಳು ಕಂಗಾಲಾದವು. 'ಯುರೋಪ್ ಛಿದ್ರವಾಗುತ್ತಿದೆ' ಎಂದು ಇಟಲಿಯ 'ರಿಪಬ್ಲಿಕಾ' ಪತ್ರಿಕೆ ಶಿರೋನಾಮೆಯಲ್ಲೇ ಬರೆಯಿತು"

ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದ ಪತನವಾಗಿದ್ದರಿಂದ ಜಾಗತಿಕ ಬಂಡವಾಳಶಾಹಿಗೆ ಒಟ್ಟಾಗಿ ಬಲಗೊಳ್ಳಲು ಸಾಧ್ಯವಾಗಿಲ್ಲ ಎಂಬುದನ್ನು ತೋರಿಸಲು ಇನ್ನೂ ಇಂಥ ಹಲವು ದೃಷ್ಟಾಂತಗಳು ದೊರೆಯುತ್ತವೆ. ಯುರೋಪ್‌ನ ಶಕ್ತ ರಾಷ್ಟ್ರಗಳು ಪರಸ್ಪರ ಕಚ್ಚಾಡುತ್ತಿರುವುದಲ್ಲದೆ ಅಮೇರಿಕಾ ಮತ್ತು ಜಪಾನ್ ಹಾವು-ಮುಂಗುಸಿಗಳಂತಾಗಿವೆ. ಅವೆರಡು ದೇಶಗಳು ಯುರೋಪ್‌ನ ಬಂಡವಾಳಶಾಹಿ ಶಕ್ತಿಗಳೊಂದಿಗೂ ಕಾದಾಡುತ್ತಿವೆ. ಇವರೆಲ್ಲರ ವಿರುದ್ಧ ಅಭಿವೃದ್ಧಿಶೀಲ ದೇಶಗಳ ಆಳುವ ವರ್ಗಗಳು ಸೆಟೆದು ನಿಂತಿವೆ. ಬಂಡವಾಳಶಾಹಿ ಶಕ್ತಿಯ ಮೂರು ಗುಂಪುಗಳ--ಅಮೇರಿಕಾ, ಯುರೋಪ್ ಮತ್ತು ಜಪಾನ್-ನಡುವಿನ ಸಂಘರ್ಷ ಎಷ್ಟು ತೀಕ್ಷ್ಣವಾಗಿದೆಯೆಂದರೆ ಅಮೇರಿಕಾದ ವಿರುದ್ಧ ಯುರೋಪ್ ಮತ್ತು ಜಪಾನ್‌ಗಳು ಆಗಾಗ ಅಭಿವೃದ್ಧಿಶೀಲ ದೇಶಗಳ ಆಳುವರ್ಗಗಳೊಂದಿಗೆ ಕೈ ಜೋಡಿಸುತ್ತಿವೆ.

ರಿಯೋಡಿ ಜನೈರೋದಲ್ಲಿ ನಡೆದ ಭೂ ಪರಿಸರ ಶೃಂಗ ಸಭೆಯಲ್ಲಿ ಅಧ್ಯಕ್ಷ ಜಾರ್ಜ್ ಬುಶ್ ಪೂರ್ಣವಾಗಿ ಪ್ರತ್ಯೇಕಗೊಂಡಿದ್ದರು. ತೃತೀಯ ಜಗತ್ತಿನ ದೇಶಗಳು ಅಮೇರಿಕಾದ ವಿರುದ್ಧ ಸೆಣಸಲು ಸಮರ್ಥವಾಗಿವೆ., ಮಾತ್ರವೇ ಅಲ್ಲದೆ ಇತರ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳು ಕೂಡಾ ತಮ್ಮ "ದೊಡ್ಡಣ್ಣ"ನಿಂದ ದೂರವುಳಿಯಲು ಸಮರ್ಥವಾಗಿವೆ ಎಂಬುದನ್ನು ಇದು ತೋರಿಸುತ್ತದೆ. ಅತ್ಯಂತ ಬಡ ಹಾಗೂ ತೀರಾ ಶೋಷಿತ ದೇಶಗಳು ಒಂದು ಹೊಸರಾಜಕೀಯ ವೇದಿಕೆಯಡಿ ಬಂದು ಅತ್ಯಂತ ಪ್ರಬಲ ಬಂಡವಾಳಶಾಹಿ ಶಕ್ತಿಗೆ ಸವಾಲೆಸೆಯುವುದು ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಜಾಗತಿಕ ಸಮಾಜವಾದಕ್ಕಾಗಿನ ಸಮರ ಇನ್ನಷ್ಟು ಬಲಗೊಳ್ಳಲಿದ ಎಂಬುದರ ಸ್ಪಷ್ಟ ಸಾಕ್ಷಿಯಾಗಿದೆ.

ನಾಲ್ಕು ವೈರುಧ್ಯಗಳು ಇನ್ನೂ ಚಾಲ್ತಿಯಲ್ಲಿವೆ

ಹೀಗಾಗಿ, ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪ್‌ನ ದೇಶಗಳಲ್ಲಿ ಸಮಾಜವಾದದ ಕುಸಿತ ಅಮೇರಿಕಾ ಯಾಜಮಾನ್ಯದ 'ಏಕಧ್ರುವ ಜಗತ್ತು' ಸೃಷ್ಟಿಗೆ ಹಾದಿಯಾಗುವುದಿಲ್ಲ. ಬಂಡವಾಳಶಾಹಿ ದೇಶಗಳಲ್ಲಿ ಬೂರ್ಜ್ವಾಗಳು ಮತ್ತು ಕಾರ್ಮಿಕ ವರ್ಗದ ನಡುವಿನ, ಪ್ರಮುಖ

ಕಳೆದ ಕೆಲವು ದಶಕಗಳು ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ರಾಂತಿಯ ಕಾಲವೆಂದು ಪರಿಗಣಿಸಲ್ಪಟ್ಟಿದೆ. ಈ ಪ್ರಕ್ರಿಯೆ ಬಂಡವಾಳಶಾಹಿ ಸಮಾಜ ಅಭೂತಪೂರ್ವ ಪ್ರಮಾಣದಲ್ಲಿ ಭೌತಿಕ ವಸ್ತುಗಳನ್ನು ಸೃಷ್ಟಿಸಲು ನೆರವಾಗಿದೆ. ಆದರೆ ಬಂಡವಾಳಶಾಹಿ ಸೃಷ್ಟಿಸಿದ್ದನ್ನೆಲ್ಲಾ ಖರೀದಿಸುವ ಮತ್ತು ಬಳಸುವ ಮಾನವನ ಸಾಮರ್ಥ್ಯದಲ್ಲಿ ಅದೇ ಪ್ರಮಾಣದಲ್ಲಿ ಏರಿಕೆಯಾಗಿಲ್ಲ.

ಬಂಡವಾಳಶಾಹಿ ಶಕ್ತಿಗಳ ಆಳುವ ವರ್ಗಗಳ ನಡುವಿನ, ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳು ಮತ್ತು ಮೂರನೇ ಜಗತ್ತು, ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳು ಮತ್ತು ಇನ್ನೂ ಅಸ್ತಿತ್ವದಲ್ಲಿರುವ ಸಮಾಜವಾದಿ ದೇಶಗಳಾದ ಚೀಣಾ, ಕ್ಯೂಬಾ, ವಿಯೆಟ್ನಾಂ ಹಾಗೂ ಕೊರಿಯಾ ನಡುವಿನ ವೈರುಧ್ಯಗಳು--ಹೀಗೆ ಜಾಗತಿಕ ರಾಜಕೀಯದ ನಾಲ್ಕು ಪ್ರಮುಖ ವೈರುಧ್ಯಗಳು ಇನ್ನೂ ಚಾಲ್ತಿಯಲ್ಲಿವೆ.

ಇದು ಸದ್ಯದ ಜಗತ್ತಿನಲ್ಲಿ ಬೇರೂರಿರುವ ವಾಸ್ತವ ಸಂಗತಿ. ಕಳೆದ ಕೆಲವು ದಶಕಗಳು ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ರಾಂತಿಯ ಕಾಲವೆಂದು ಪರಿಗಣಿಸಲ್ಪಟ್ಟಿದೆ. ಈ ಪ್ರಕ್ರಿಯೆ ಬಂಡವಾಳಶಾಹಿ ಸಮಾಜ ಅಭೂತಪೂರ್ವ ಪ್ರಮಾಣದಲ್ಲಿ ಭೌತಿಕ ವಸ್ತುಗಳನ್ನು ಸೃಷ್ಟಿಸಲು ನೆರವಾಗಿದೆ. ಆದರೆ ಬಂಡವಾಳಶಾಹಿ ಸೃಷ್ಟಿಸಿದ್ದನ್ನೆಲ್ಲಾ ಖರೀದಿಸುವ ಮತ್ತು ಬಳಸುವ ಮಾನವನ ಸಾಮರ್ಥ್ಯದಲ್ಲಿ ಅದೇ ಪ್ರಮಾಣದಲ್ಲಿ ಏರಿಕೆಯಾಗಿಲ್ಲ.

ಆದ್ದರಿಂದ, ಪ್ರತ್ಯೇಕವಾಗಿ ಮತ್ತು ಒಟ್ಟಾಗಿ ತಾವು ಸೃಷ್ಟಿಸಿದ ಪರಿಮಿತ ಮಾರುಕಟ್ಟೆಯಲ್ಲಿ ತಮ್ಮ ಪಾಲವನ್ನು ಪಡೆಯಲಿಕ್ಕಾಗಿ ಭಾರೀ ಸ್ಪರ್ಧೆ ನಡೆಸುವುದು ಬಂಡವಾಳಶಾಹಿ ಶಕ್ತಿಗಳಿಗೆ ಅನಿವಾರ್ಯವಾಗಿದೆ. ಇಂಥ ಪರಿಸ್ಥಿತಿಯಲ್ಲಿ, ಸಮಾಜವಾದಿ ಚೀಣಾ ತನ್ನ ದೇಶದಲ್ಲಿ ಸಮಾಜವಾದದ ನಿರ್ಮಾಣಕ್ಕೆ ಬಂಡವಾಳವಾದದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ರಾಂತಿಯನ್ನು ಅಳವಡಿಸಿಕೊಳ್ಳಲು ಮುಂದಾಗಿದೆ. ಇದು ಮೂರನೇ ಜಗತ್ತಿನ ದೇಶಗಳಿಗೆ ಅವುಗಳ ಅಭಿವೃದ್ಧಿಯ ಪಥದತ್ತ ಬೊಟ್ಟು ತೋರಿಸುತ್ತದೆ-ಸೋವಿಯೆತ್ ಒಕ್ಕೂಟದಲ್ಲಿ ಆದಂತೆ ವಿಕೃತಿಗಳು ಇಲ್ಲದೆ ಸಮಾಜವಾದದ ಮಾರ್ಗದಲ್ಲಿ ಆರ್ಥಿಕತೆಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂಬುದೇ ಇದರ ಅರ್ಥ.

ಬಂಡವಾಳಶಾಹಿಯ ಸ್ಥಿರತೆಯ ಪ್ರಶ್ನೆಯೇ ಅಸಂಬದ್ಧ

ಈ ನಡುವೆ, ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳು ಆರ್ಥಿಕ, ರಾಜಕೀಯ, ಸೈದ್ಧಾಂತಿಕ ಮತ್ತು ಪರಿಸರ ಕ್ಷೇತ್ರಗಳಲ್ಲಿ ಆಳವಾದ ಬಿಕ್ಕಟ್ಟನ್ನು ಎದುರಿಸುತ್ತಿವೆ. ಇದರಿಂದ ಪಾರಾಗಲು ಅವುಗಳಿಗೆ ಉಳಿದಿರುವುದು ಎರಡೇ ಮಾರ್ಗಗಳು. ಅ) ಪ್ರಜಾಸತ್ತಾತ್ಮಕ ಹಾಗೂ ಗುತ್ತೇದಾರಿ ವಿರೋಧಿ ಮಾರ್ಗದಲ್ಲಿ ತಮ್ಮ ಆರ್ಥಿಕತೆಯನ್ನು ಒಯ್ಯುವುದು. ಆ) ಸ್ವತಂತ್ರ ಹಾಗೂ ಸಾರ್ವಭೌಮ ರಾಷ್ಟ್ರಗಳಾಗಿ ಅಭಿವೃದ್ಧಿಹೊಂದಲು ಅಭಿವೃದ್ಧಿಶೀಲ ದೇಶಗಳಿಗೆ ನೆರವಾಗುವುದು. ಈ ಎರಡು ಕ್ರಮಗಳನ್ನು ಕೈಗೊಳ್ಳಲು ಅವುಗಳು ಮುಂದಾಗದ ಹೊರತು ಬಿಕ್ಕಟ್ಟು ಪರಿಹಾರವಾಗದೆ ಹಾಗೆ ಉಳಿದುಕೊಳ್ಳುತ್ತದೆ.

ಜಾಗತಿಕ ಮಟ್ಟದಲ್ಲಿ ಈ ರಾಜಕೀಯ ಮತ್ತು ಆರ್ಥಿಕ ರಂಗದ ಬೆಳವಣಿಗೆಗಳಿಂದಾಗಿ ತಾನೇ ತಾನಾಗಿ ಅಭಿವೃದ್ಧಿಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಸಮಾಜವಾದಿ ಕ್ರಾಂತಿಗಳು ಸಂಭವಿಸುತ್ತವೆ ಮತ್ತು ಸೋವಿಯೆತ್ ಒಕ್ಕೂಟ ಸಹಿತ ಪೂರ್ವ ಯುರೋಪ್‌ನ ಹಿಂದಿನ ಸಮಾಜವಾದಿ ದೇಶಗಳಲ್ಲಿ ಸಮಾಜವಾದ ತಾನೇ ತಾನಾಗಿ ಮರುಸ್ಥಾಪನೆಗೊಳ್ಳುತ್ತದೆ ಎಂಬುದು ಇದರ ಅರ್ಥವಲ್ಲ. ಸಮಸ್ಯೆ ತುಂಬಾ ಸಂಕೀರ್ಣವಾದುದು. ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕ ವರ್ಗದ ಕ್ರಾಂತಿ ಮತ್ತು ಹಿಂದಿನ ಸಮಾಜವಾದಿ ದೇಶಗಳಲ್ಲಿ ಸಮಾಜವಾದದ ಮರುಸ್ಥಾಪನೆ ಅನೇಕ ಆರ್ಥಿಕ, ರಾಜಕೀಯ, ರಾಷ್ಟ್ರೀಯ-ಜನಾಂಗೀಯ, ಸೈದ್ಧಾಂತಿಕ

ಮತ್ತು ಇತರ ಪರಿಗಣನೆಗಳನ್ನು ಅವಲಂಬಿಸಿರುತ್ತದೆ. ಅವು ಪರಸ್ಪರ ಹೇಗೆ ಕಾರ್ಯಾಚರಿಸುತ್ತವೆ ಹಾಗೂ ಒಂದರಬಗ್ಗೆ ಇನ್ನೊಂದು ಹೇಗೆ ಪ್ರತಿಕ್ರಿಯಿಸುತ್ತವೆ ಮತ್ತು ರಷ್ಯಾದಲ್ಲಿ ಅಕ್ಟೋಬರ್ ಕ್ರಾಂತಿ ನಡೆದ ಸನ್ನಿವೇಶ ಅನೇಕ ಅಭಿವೃದ್ಧಿ ಹೊಂಂದಿದ ಬಂಡವಾಳಶಾಹಿ ದೇಶಗಳಲ್ಲಿ ಮರುಕಳಿಸುವುದೇ ಎಂಬುದನ್ನು ಸ್ಪಷ್ಟವಾಗಿ ಹಾಗೂ ದೃಢವಾಗಿ ಹೇಳಲು ಸಾಧ್ಯವಿಲ್ಲ. ಏನಿದ್ದರೂ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆ ಈಗ ಎದುರಿಸುತ್ತಿರುವ ಬಿಕ್ಕಟ್ಟು ಆಳ ಹಾಗೂ ವ್ಯಾಪಕವಾಗಿದ್ದು, ಇಂದಿನ ಜಾಗತಿಕ ಸನ್ನಿವೇಶದಲ್ಲಿ ಬಂಡವಾಳಶಾಹಿ ಸ್ಥಿರತೆಯ ಪ್ರಶ್ನೆಯೇ ಅಸಂಬದ್ಧ.

ಸೋವಿಯತ್ ಒಕ್ಕೂಟ ಸಹಿತ ಪೂರ್ವ ಯುರೋಪ್‌ನಲ್ಲಿ ಏನೇ ನಡೆದಿದ್ದರೂ ಎಲ್ಲೆಡೆ ಪ್ರತಿಕೂಲ ಬೆಳವಣಿಗೆಗಳು ಘಟಿಸಿದ್ದರೂ ತಮ್ಮ ದೇಶಗಳಲ್ಲಿ ಸಮಾಜವಾದದ ಧ್ವಜ ಎತ್ತರಕ್ಕೆ ಹಾರುತ್ತಿರುತ್ತದೆ ಎಂದು ಇನ್ನೂ ಸಮಾಜವಾದಿ ವ್ಯವಸ್ಥೆ ಮುಂದುವರಿದಿರುವ ನಾಲ್ಕು ದೇಶಗಳ ನಾಯಕರು ಘೋಷಿಸಿರುವುದು ಈ ಸಂಬಂಧದಲ್ಲಿ ತುಂಬಾ ಮಹತ್ವದ ಅಂಶವಾಗಿದೆ.

ಇಷ್ಟಲ್ಲದೆ, ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷಗಳಿವೆ. ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದ ಕಟ್ಟುವಲ್ಲಿ ಸಾಧಿಸಿದ ಯಶಸ್ಸು ಗಳಿಸಿ ಅನುಭವಿಸಿದ ಸೋಲುಗಳ ಅನುಭವಗಳಿಂದ ಪಾಠ ಕಲಿತು ಅವು ತಮ್ಮ ಬಲವನ್ನು ಶೀಘ್ರವಾಗಿ ಕ್ರೋಡೀಕರಿಸಿಕೊಳ್ಳುತ್ತವೆ.

"ಮನುಷ್ಯನಿಂದ ಮನುಷ್ಯನ, ವರ್ಗದಿಂದ ವರ್ಗದ ಹಾಗೂ ದೇಶದಿಂದ ದೇಶದ ಶೋಷಣೆಯನ್ನು ತೊಡೆದುಹಾಕುವುದು ಸಮಾಜವಾದದ ಮುಖ್ಯ ಅಂಶ. ಮಾನವ ಜನಾಂಗದ ಘನತೆ ಹಾಗೂ ಹಕ್ಕುಗಳನ್ನು ಎತ್ತಿ ಹಿಡಿಯುವ ಹಾಗೂ ರಕ್ಷಿಸುವ ಈ ವಿಮೋಚಕ ಪ್ರಭಾವವೇ ಹೋರಾಟವನ್ನು ಮುಂದುವರಿಸಲು ಸ್ಫೂರ್ತಿಯ ಮೂಲವಾಗಿದೆ. ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಳನದಲ್ಲಿ ಮಾರ್ಕ್ಸ್‌ವಾದ- ಲೆನಿನ್‌ವಾದದ ರಕ್ಷಣೆಯಲ್ಲಿ ಸಿಪಿಐ(ಎಂ)ನ ಹೋರಾಟ, ಅದರ ಸ್ಥಾಪನೆ, ಅಸ್ತಿತ್ವ ಮತ್ತು ಭಾರತೀಯ ಪರಿಸ್ಥಿತಿಗಳಲ್ಲಿ ಎಡ ಹಾಗೂ ಬಲ ದಿಕ್ಚ್ಯುತಿಗಳ ವಿರುದ್ಧದ ಹೋರಾಟ, ಈ ಅನುಭವಗಳ ಆಧಾರದಲ್ಲಿ ರೂಪಿಸಿ ಭಾರತೀಯ ಸನ್ನಿವೇಶಗಳಲ್ಲಿ ಸಮಾಜವಾದದ ಮುನ್ನಡೆಯಲು ಸರಿಯಾದ ಅಭಿಪ್ರಾಯಗಳನ್ನು ರೂಪಿಸಲು ಸಾಧ್ಯವಾಗಿದೆ" ಎನ್ನುವುದನ್ನು ಸಿಪಿಐ(ಎಂ) ಪ್ರತಿಪಾದಿಸುತ್ತದೆ.

ಪರಸ್ಪರ ಬೆಸೆಯುವ ಕೊಂಡಿ

ಜಗತ್ತಿನ ಪ್ರತಿಯೊಂದು ದೇಶ ಸಮಾಜವಾದದತ್ತ ಹೊರಳುತ್ತದೆ ಎಂಬುದು ಮಾರ್ಕ್ಸ್‌ವಾದ-ಲೆನಿನ್‌ವಾದದ ತಿರುಳು. ಆದರೆ, ದೇಶ ದೇಶಗಳಲ್ಲಿ ಅದು ಹೇಗೆ ಪುನರಾವರ್ತನೆಗೊಳ್ಳುತ್ತದೆ ಎನ್ನುವುದು ಆಯಾ ದೇಶಗಳ ನಿರ್ದಿಷ್ಟ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಹಾಗಾಗಿಯೇ ಜಗತ್ತಿನ ಮಾರ್ಕ್ಸ್‌ವಾದಿ- ಲೆನಿನ್‌ವಾದಿಗಳಿಗೆ ಒಂದು (ಜಾಗತಿಕ) ಸಂಸ್ಥೆ ಎಂಬುದಿಲ್ಲ. ಆದರೆ ಪ್ರಜಾಪ್ರಭುತ್ವ, ಸ್ವತಃ ತಮ್ಮ ರಾಷ್ಟ್ರೀಯ ಏಕತೆ, ಜಗತ್ತಿನೆಲ್ಲೆಡೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಶ್ರಮಿಕ ಜನರ ಕ್ರೋಢೀಕರಣ ಮೊದಲಾದವುಗಳೊಳಗಿನ ಸಮಾನವಾದ ಕ್ರಾಂತಿಕಾರಿ ಹೋರಾಟದ ಕೊಂಡಿಗಳಿಂದ ಅವರ ಸಂಬಂಧಗಳು ಪರಸ್ಪರ ಬೆಸೆದಿವೆ. ಯಾವುದೇ ದೇಶವನ್ನು ಸಮಾಜವಾದದತ್ತ ಒಯ್ಯುವ ದೃಷ್ಟಿಕೋಣವುಳ್ಳ ಎಲ್ಲಾ ಪ್ರಗತಿಪರ ಹಾಗೂ ದೇಶಪ್ರೇಮಿ ಶಕ್ತಿಗಳನ್ನು ಒಂದುಗೂಡಿಸುವುದೂ ಈ ಹೋರಾಟದ ಭಾಗ. ಈ ಪ್ರಗತಿಪರ ಶಕ್ತಿಗಳಲ್ಲಿರುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ನಿಸ್ಸಂಶಯವಾಗಿಯೂ ಪರಸ್ಪರರಿಗೆ ನೆರವಾಗುತ್ತಾರೆ, ಎಲ್ಲಾ ದೇಶಗಳಲ್ಲಿನ ಪ್ರಗತಿಪರ ಶಕ್ತಿಗಳಲ್ಲಿ ಸೌಹಾರ್ದವನ್ನು ಬೆಳೆಸಲಿಕ್ಕಾಗಿ ಅನುಭವಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಇದು ಇಂದಿನ ಕಾರ್ಮಿಕ ವರ್ಗದ ಅಂತರ್‍ರಾಷ್ಟ್ರೀಯತೆ.

ಅನು : ವಿಶ್ವ

With Best Compliments from :

ಲೆನಿನ್

ಧಮನಿಯಲಿ ಬಿಸಿನೆತ್ತರುಕ್ಕದೆ ನೆನೆಯಲಾರೆ
ನಿನ್ನಂ ಲೆನಿನ್! ನಿನ್ನ ಹೆಸರದು ಸಿಡಿಲ್ ಸದ್ದು
ದೊರೆಗಿವಿಗೆ; ನಿನ್ನ ಸಮತಾಬೋಧೆ ಸಿಡಿಮದ್ದು
ನರನ ಸಂಗ್ರಹ ಬುದ್ಧಿ ಸ್ವಾರ್ಥತೆಯ ಸುರಿದೋರ
ದಹಿಸಿ, ನಿಃಸ್ವಾರ್ಥತೆಯ ಬೆಂಕಿಯಿಂ ಹೃತ್ಕುಂಡ
ಸರ್ವದಾ ಪ್ರಜ್ವಲಿಸುವಂತೆಸಗೆ, ಜಮದಗ್ನಿ
ಸುತನಂತೆ ನೀನು ಪಾರ್ಥಿವ ಕುಲಕೆ ಬಡಬಾಗ್ನಿ;
ದುಡಿವ ದೀನರ ದೈವವಸ್ವರ್ಗೆ ಯಮದಂಡ!
ಗೆಯ್ಯುವರ್ಗೇನಿಲ್ಲ, ಕುಳಿತುಂಬರಿಗೆ ಬೆಲ್ಲ;
ಮುಳ್ಳುನೋವಾಳಿಂಗೆ, ಕಂಪು ಹೂವೊಡೆಯಂಗೆ;
ಗೋಳಿವಗೆ, ಸೊಂಪಿವಗೆ. ಈ ತರತಮವನೆಲ್ಲ
ಮುರಿಯೆ ಬಹನಲ್ಲಲ್ಲಿ ಕಲ್ಕಿ. ರಕ್ತದ ಗಂಗೆ
ಸಿರಿನಾಳದಿಂ ಮರಳಿ ಬಡತನದೊಣಾಗು ವ್ಯಗೆ
ಹರಿದಿಕ್ಕೆ ದೊರೆಗಳಸಿ ಕೂಲಿ ರೈತರ ಕೈಗೆ!

\- ಕುವೆಂಪು

25-1-1935



KRNM/BGS-405
MAG(2) PRB
DECR 319-78/79



Printed & Published by P.Ramachandra Rao on behalf of Communist Party of India(Marxist), Karnataka State Committee, No. 12, 18th Corss, Thanappa Gardens, S.R.Nagar, Bangalore-27. Phone : 236462. Editor : P. Ramachandra R